Kannada Prabha • Daily • Thursday • 07.05.2026 • Volume 60 • Issue 126 • Pages 12 • Price ₹7 Kalaburagi



1 ಇಂದಿಗೆ ವರ್ಷ ಆಪರೇಷನ್ ಸಿಂದೂರ

ಪಹಲ್ಗಾಂನಲ್ಲಿ ನರಮೇಧ ನಡೆಸಿದ ಪಾಕ್ ಉಗ್ರರಿಗೆ ಪಾಠ ಕಲಿಸಿದ ದಿನ | ಮೇ 7 | ಭಾರತ ಮಹಿಳೆಯರ ಸಿಂದೂರ ಅಳಿಸಿದವರ ಹೊಸಕಿದ ದಿನ ಪುಟ 7

3 ರಾಜ್ಯಗಳ ಜಯ: ಬೆಂಗ್ಳೂರಲ್ಲಿ ಮೋದಿಗೆ ಮೇ10ಕ್ಕೆ ಅಭಿನಂದನೆ

ಬೆಂಗಳೂರು: ಬಂಗಾಳ ಸೇರಿದಂತೆ ಮೂರು ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬೆನ್ನಲ್ಲೇ ಮೇ 10ಕ್ಕೆ ಬೆಂಗಳೂರಿಗೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಜ್ಯ ಬಿಜೆಪಿ ವತಿಯಿಂದ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ವಿವರ ↘ 4

ಮೇ 9ರ ಬಿಎಸ್‌ವೈ ಅಭಿಮಾನೋತ್ಸವ ಸಮಯ ಬದಲು

ಚಿತ್ರದುರ್ಗ: ಅಮಿತ್ ಶಾ ಆಗಮನ ವಿಳಂಬ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ನಿಗದಿ ಆಗಿರುವ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮವನ್ನು ಬೆಳಗ್ಗೆ ಬದಲು ಮಧ್ಯಾಹ್ನ 2 ಗಂಟೆಗೆ ಆರಂಭಿಸಲು ನಿರ್ಧರಿಸಲಾಗಿದೆ. ವಿವರ ↘ 5

ಲೈಂಗಿಕ ಹಗರಣದಲ್ಲಿ ರಾಮಚಂದ್ರರಾವ್ ಅಮಾನತು ವಾಪಸ್

ಬೆಂಗಳೂರು: ಲೈಂಗಿಕ ಹಗರಣ ಸಂಬಂಧ 5 ತಿಂಗಳ ಹಿಂದೆ ತಲೆದಂಡಕ್ಕೆ ಗುರಿಯಾಗಿದ್ದ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಡಾ.ಕೆ.ರಾಮಚಂದ್ರರಾವ್ ಅವರ ಅಮಾನತು ಆದೇಶವನ್ನು ರಾಜ್ಯ ಸರ್ಕಾರ ಬುಧವಾರ ಹಿಂಪಡೆದಿದೆ. ವಿವರ ↘ 4

ಶೃಂಗೇರಿ ಕ್ಷೇತ್ರದ ಹೊಸ ಶಾಸಕರಾಗಿ ಜೀವರಾಜ್ ಶಪಥ

ಬೆಂಗಳೂರು: ಅಂಚೆ ಮತಗಳ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿದ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್, ವಿಧಾನಸೌಧದ ವಿಧಾನ ಮಂಡಲ ಕೊಠಡಿಯಲ್ಲಿ ಸ್ಪೀಕರ್ ಯು.ಟಿ.ಖಾದರ್ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ವಿವರ ↘ 5

ಪಂಜಾಬ್ 2 ಸೇನಾ ಕಚೇರಿ ಬಳಿ ಒಂದೇ ರಾತ್ರಿ 2 ಸ್ಫೋಟ

ಚಂಡೀಗಢ: ಪಂಜಾಬ್‌ನ ಜಲಂಧರ್ ಮತ್ತು ಅಮೃತಸರದಲ್ಲಿರುವ ಭದ್ರತಾ ಸಂಸ್ಥೆಗಳ ಬಳಿಕ ಮಂಗಳವಾರದ ರಾತ್ರಿ 2 ಪ್ರತ್ಯೇಕ ಸ್ಫೋಟಗಳು ಸಂಭವಿಸಿದೆ. ದಾಳಿಯ ಹೊಣೆಯನ್ನು ಕೆಎಲ್‌ಎ ಎಂಬ ಖಲಿಸ್ತಾನಿ ಸಂಘಟನೆ ಹೊತ್ತುಕೊಂಡಿದೆ. ವಿವರ ↘ 7

ವಂದೇಮಾತರಂಗೆ ಅಪಮಾನ ಮಾಡಿದ್ರೆ ಜೈಲು: ಶೀಘ್ರ ಕಾಯ್ದೆ

ನವದೆಹಲಿ: ರಾಷ್ಟ್ರೀಯ ಗೀತೆ ವಂದೇ ಮಾತರಂ ಅನ್ನು ಅಪಮಾನಿಸಿದರೆ ಅಥವಾ ಅಡ್ಡಿ ಮಾಡಿದರೆ ಜೈಲುಶಿಕ್ಷೆ ವಿಧಿಸಬಹುದಾದ ಮಹತ್ವದ ಕಾನೂನು ಜಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಲಾಗಿದೆ. ವಿವರ ↘ 7

ಎರಡು ರಾಜ್ಯಗಳ ಕುತೂಹಲ

ಮ್ಯಾಜಿಕ್ ಮಾಡಿದ ವಿಜಿಗೆ ಮ್ಯಾಜಿಕ್ ಸಂಖ್ಯೆ ಹೇಗೆ?

ಬಹುಮತ ಎಲ್ಲಿ ಎಂದ ತಮಿಳುನಾಡು ಗೌರ್ನರ್? ಪ್ರಮಾಣವಚನ ಸ್ವೀಕಾರ ಯಾವಾಗ? ಸಸ್ಪೆನ್ಸ್

• **ಪಿಟಿಐ** ಚೆನ್ನೈ

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪಕ್ಷ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರ ಹೊಮ್ಮಿರುವ ಹಿನ್ನೆಲೆಯಲ್ಲಿ ಟಿವಿಕೆ ಮುಖ್ಯಸ್ಥ, ನಟ ವಿಜಯ್ ಬುಧವಾರ ತಮಿಳು ನಾಡು ರಾಜ್ಯಪಾಲ ರಾಜೇಂದ್ರ ಅರ್ಲೇಕರ್‌ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಆದರೆ ಸಂಖ್ಯಾಬಲ ಕೊರತೆಯು ಗುರುವಾರ ಅವರು ಪ್ರಮಾಣ ವಚನ ಸ್ವೀಕರಿಸುವ ಆಸೆಗೆ ತಣ್ಣೀರೆರಚಿದ್ದು, ಮುಂದೂಡಿಕೆ ಆಗುವ ಸಾಧ್ಯತೆ ಇದೆ. ಹೀಗಾಗಿ ಮುಂದೇನು ಎಂಬ ಕುತೂಹಲ ಕೆರಳಿಸಿದೆ.



5 ಶಾಸಕರ ಬಲ ಹೊಂದಿರುವ ಕಾಂಗ್ರೆಸ್ ಟಿವಿಕೆಗೆ ತನ್ನ ಬೆಂಬಲವನ್ನು ಸಾರ್ವಜನಿಕವಾಗಿ ಘೋಷಿಸಿದೆ. ಈ ಹಿನ್ನೆಲೆಯಲ್ಲಿ ತಮ್ಮ ಪಕ್ಷದ 107 ಶಾಸಕರು ಹಾಗೂ ಕಾಂಗ್ರೆಸ್‌ನ 5 ಶಾಸಕರ ಬೆಂಬಲ ಪತ್ರವನ್ನು ರಾಜ್ಯಪಾಲರಿಗೆ ವಿಜಯ್ ನೀಡಿದರು ಎಂದು ತಿಳಿದುಬಂದಿದೆ. ↘ 10

23 ವರ್ಷದ ಡಿಎಂಕೆ ಕಾಂಗ್ರೆಸ್ ಮೈತ್ರಿ ಖತಂ

ಚೆನ್ನೈ: ಡಿಎಂಕೆಯ ದೀರ್ಘಕಾಲದ ಮಿತ್ರ ಪಕ್ಷವಾಗಿರುವ ಕಾಂಗ್ರೆಸ್, ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ವಿಜಯ್‌ರ ಟಿವಿಕೆಗೆ ಬೆಂಬಲ ಘೋಷಿಸಿದೆ. ಈ ಮೂಲಕ ತಮಿಳುನಾಡಿನ ತನ್ನ 33 ವರ್ಷದ ಮಿತ್ರನ ಸಂಬಂಧ ಕಡಿದುಕೊಂಡಿದೆ. ವಿವರ ↘ 7

ಅಣ್ಣಾಡಿಎಂಕೆ ಪಕ್ಷವೇ ಹೋಳಾಗುವ ಭೀತಿ

ಚೆನ್ನೈ: ಅಣ್ಣಾ ಎಡಿಎಂಕೆಯ 35 ಶಾಸಕರು, ಅರ್ಥಾತ್ 3ನೇ ಎರಡರಷ್ಟು ಮಂದಿ ಟಿವಿಕೆ ಪರ ಒಲವು ತೋರಿದ್ದಾರೆ ಎಂದು ಗೊತ್ತಾಗಿದೆ. ಆದರೆ ಅವರ ಕೋರಿಕೆಯನ್ನು ಪಕ್ಷ ತಿರಸ್ಕರಿಸಿದೆ. ಹೀಗಾಗಿ ಇದೀಗ ಪಕ್ಷವೇ ಹೋಳಾಗುವ ಭೀತಿ ಎದುರಾಗಿದೆ. ವಿವರ ↘ 7

ದೀದಿ ರಾಜೀನಾಮೆಯೋ, ಡಿಸ್‌ಮಿಸ್ಸೋ?: ಸಸ್ಪೆನ್ಸ್

ಬಂಗಾಳ ಸರ್ಕಾರ ರಚನೆಗೆ ಬಿಜೆಪಿಯ ತಯಾರಿ ಮೇ 9ಕ್ಕೆ ಪ್ರಮಾಣವಚನ | ಮಮತಾ ಕತೆ ಏನು?

ಕೋಲ್ಕತಾ: ಪಶ್ಚಿಮ ಬಂಗಾಳ ಸಿಎಂ ಹುದ್ದೆಗೆ ತಾನು ರಾಜೀನಾಮೆ ನೀಡುವುದಿಲ್ಲ ಎಂದು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಸಡ್ಡು ಹೊಡೆದಿರುವ ನಡುವೆಯೇ ಬಿಜೆಪಿ, ಹೊಸ ಮುಖ್ಯಮಂತ್ರಿಯ ಪಟ್ಟಾಭಿಷೇಕಕ್ಕೆ ಸಿದ್ಧತೆ ಆರಂಭಿದೆ. ರಾಜ್ಯ ದಲ್ಲಿ ತನಗೆ ಅಭೂತ ಪೂರ್ವ ಜಯ ಸಾಧಿಸಿರುವ ಹಿನ್ನೆಲೆಯಲ್ಲಿ ಶುಕ್ರವಾರ ಸಿಎಂ ಆಯ್ಕೆ ನಡೆಯಲಿದೆ ಹಾಗೂ ಶನಿವಾರ ಪ್ರಮಾಣವಚನ ಸ್ವೀಕಾರ ಏರ್ಪಾಟಾಗಿದೆ.



ಮಮತಾ ಬ್ಯಾನರ್ಜಿ ರಾಜೀನಾಮೆ ನೀಡದೇ ಹೋದರೂ ಹೊಸ ಮುಖ್ಯಮಂತ್ರಿ ಪ್ರಮಾಣ ವಚನ ಹೇಗಾಗುತ್ತದೆ ಎಂಬ ಪ್ರಶ್ನೆ ಉದ್ಭವಿಸಿದೆ. ಆದಾಗ್ಯೂ ಈ ಬಿಕ್ಕಟ್ಟಿಗೆ ಪರಿಹಾರ ಸಿಗಬಹುದು ಎಂಬ ಆಶಾವಾದ ಬಿಜೆಪಿ ನಾಯಕರದ್ದು. ಹೀಗಾಗಿ ಬಿಜೆಪಿ ವೀಕ್ಷಕರಾಗಿ ನೇಮಕ ಆಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಕೋಲ್ಕತಾಗೆ ಆಗಮಿಸಲಿದ್ದಾರೆ. ಅಂದು ಸಂಜೆ ಪಕ್ಷದ ಉನ್ನತ ನಾಯಕರ ಜತೆ ಹಾಗೂ ಶುಕ್ರವಾರ ಶಾಸಕಾಂಗ ಸಭೆ ನಡೆಸಲಿದ್ದಾರೆ. ನಂತರ ಹೊಸ ಮುಖ್ಯಮಂತ್ರಿಯನ್ನು ಅಂತಿಮಗೊಳಿಸಿ, ಘೋಷಿಸಲಿದ್ದಾರೆ ಎಂದು ತಿಳಿದುಬಂದಿದೆ. ↘ 10

ಮುಂದೇನು?

1. ಪಟ್ಟು ಬಿಟ್ಟು ಸಿಎಂ ಸ್ಥಾನಕ್ಕೆ ಮಮತಾ ರಾಜೀನಾಮೆ ನೀಡಿ ಸರ್ಕಾರ ರಚನೆಗೆ ಅವಕಾಶ ನೀಡಬಹುದು
2. ರಾಜೀನಾಮೆ ನೀಡದಿದ್ದರೆ ಮಮತಾ ಅವರನ್ನು ಸಿಎಂ ಹುದ್ದೆಯಿಂದಲೇ ವಜಾ ಮಾಡಬಹುದು
3. ಸೀಮಿತ ಅವಧಿಗೆ ರಾಜ್ಯದ ಮೇಲೆ ರಾಷ್ಟ್ರಪತಿ ಆಳ್ವಿಕೆ ಹೇರುವಂತೆ ಕೇಂದ್ರಕ್ಕೆ ಶಿಫಾರಸು ಸಂಭವ
4. ಸೋತ ಮಮತಾ ಈಗ ಅಪ್ರಸ್ತುತ ಎಂದು ಬಿಜೆಪಿ ಸ್ವಯಂ ಆಗಿ ಸರ್ಕಾರ ರಚನೆ ಮಾಡಬಹುದು

ಹೈಕಮಾಂಡ್‌ನವ್ರು ಹೇಳೋವರೆಗೂ ನಾನೇ ಸಿಎಂ: ಸಿದ್ದು

ವರಿಷ್ಠರು ದಿಲ್ಲಿಗೆ ಬನ್ನಿ ಎಂದಿಲ್ಲ ಭೇಟಿಗೆ ನಾನೂ ಟೈಂ ಕೇಳಿಲ್ಲ 5 ವರ್ಷವೂ ನಮ್ದೇ ಸರ್ಕಾರ



- ಮುಖ್ಯಮಂತ್ರಿ ವಿಷಯದಲ್ಲಿ ತೀರ್ಮಾನ ಮಾಡುವುದು ಹೈಕಮಾಂಡ್ ಮಾತ್ರ
- ಅವರ ಮಾತು ಮಾತ್ರ ಕೇಳ್ತೇನೆ. ಹೇಳಿದ್ರೆ 5 ವರ್ಷ ಸಿಎಂ ಆಗಿರ್ತೇನೆ
- ಈ ಬಗ್ಗೆ ಬೇರೆ ಯಾರು ಏನು ಮಾತಾಡಿದರೂ ಅದು ಅವರ ವೈಯುಕ್ತಿಕ ಹೇಳಿಕೆ ಮಾತ್ರ

• **ಕನ್ನಡಪ್ರಭ ವಾರ್ತೆ** ಮೈಸೂರು

'ನಾನು ಹೈಕಮಾಂಡ್ ಮಾತನ್ನು ಮಾತ್ರ ಕೇಳುತ್ತೇನೆ. ಹೈಕಮಾಂಡ್ ಹೇಳಿದರೆ ಐದು ವರ್ಷವೂ ಸಿಎಂ ಆಗಿರುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಇಲ್ಲಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಸಿಎಂ ಬದಲಾವಣೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ನೀವು ಎಷ್ಟು ಬಾರಿ ಈ ಪ್ರಶ್ನೆ ಕೇಳಿದರೂ ನನ್ನ ಉತ್ತರ ಹೈಕಮಾಂಡ್ ಅಷ್ಟೇ. 5 ವರ್ಷವೂ ಕಾಂಗ್ರೆಸ್ ಸರ್ಕಾರ ಇರುತ್ತದೆ. ನೀವೇ ಇರಿ ಎಂದರೆ ಇರುತ್ತೇನೆ. ಎಲ್ಲಾ ತೀರ್ಮಾನ ಮಾಡುವುದು ಹೈಕಮಾಂಡ್ ಮಾತ್ರ. ಈ ವಿಷಯದಲ್ಲಿ ಬೇರೆ ಯಾರು, ಏನೇ ಮಾತನಾಡಿದರೂ ಅದು ಅವರ ವೈಯಕ್ತಿಕ ಅಭಿಪ್ರಾಯ ಮಾತ್ರ' ಎಂದು ಸ್ಪಷ್ಟಪಡಿಸಿದರು.

ದೆಹಲಿ ಭೇಟಿ ಕುರಿತು ಪ್ರತಿಕ್ರಿಯಿಸಿ, 'ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿಯವರು ನನ್ನನ್ನು ಈವರೆಗೂ ದೆಹಲಿಗೆ ಬನ್ನಿ ಎಂದು ಕರೆದಿಲ್ಲ. ನಾನು ಕೂಡ ಅಪಾಯಿಂಟ್‌ಮೆಂಟ್ ಕೇಳಿಲ್ಲ. ↘ 10

ಅಮೆರಿಕ-ಇರಾನ್ ಡೀಲ್ ಈಗ ಸನ್ನಿಹಿತ: 2 ದಿನದಲ್ಲಿ ಸಂಧಾನ?

1 ಪುಟದ ತಿಳಿವಳಿಕೆ ಪತ್ರಕ್ಕೆ ಉಭಯ ದೇಶಗಳ ಸಹಿ ಸಾಧ್ಯತೆ ಡೀಲ್‌ಗೆ ಇರಾನ್ ಒಪ್ಪದಿದ್ರೆ ಬಾಂಬ್ ಮಳೆ: ಟ್ರಂಪ್ ಎಚ್ಚರಿಕೆ

ವಾಷಿಂಗ್ಟನ್: 'ಅಮೆರಿಕವು ಯುದ್ಧವನ್ನು ಕೊನೆಗೊಳಿಸಿ, ಹೋರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಇರಾನ್ ಜೊತೆ ಒಪ್ಪಂದ ಮಾಡಿಕೊಳ್ಳಲು ಹತ್ತಿರದಲ್ಲಿದೆ. ಇದಕ್ಕಾಗಿ ಶೀಘ್ರದಲ್ಲೇ ಎರಡೂ ದೇಶಗಳು ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಲಿವೆ. ಈ ಬಗ್ಗೆ 48 ಗಂಟೆಗಳ ಒಳಗೆ ಇರಾನ್‌ನಿಂದ ಪ್ರತಿಕ್ರಿಯೆ




ಬರುವ ನಿರೀಕ್ಷೆಯಿದೆ' ಎಂದು ಅಮೆರಿಕದ ಇಬ್ಬರು ಅಧಿಕಾರಿಗಳನ್ನು ಉಲ್ಲೇಖಿಸಿ ಅಮೆರಿಕ ಸುದ್ದಿಸಂಸ್ಥೆ ಆ್ಯಕ್ಸಿಯೋಸ್ ಬುಧವಾರ ವರದಿ ಮಾಡಿದೆ. ಇದರ ಬೆನ್ನಲ್ಲೇ ಟ್ರುತ್ ಸೋಷಿಯಲ್‌ನಲ್ಲಿ ಗುಡುಗಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಇರಾನ್ ಈ ಡೀಲ್‌ಗೆ ಒಪ್ಪಬೇಕು. ↘ 10

ಇದೀಗ ಫೈನಲ್... ಬೆಂಗಳೂರಿನಲ್ಲಿ ನಡೆಯುವುದಿಲ್ಲ ಐಪಿಎಲ್ ಫೈನಲ್!

ಮೇ 31ರ ಫೈನಲ್ ಪಂದ್ಯ ಅಹಮದಾಬಾದ್ ಸ್ಟೇಡಿಯಂಗೆ ಬಿಸಿಸಿಐನಿಂದ ಅಧಿಕೃತ ಘೋಷಣೆ | ಅಭಿಮಾನಿಗಳಿಗೆ ನಿರಾಸೆ

ನವದೆಹಲಿ: ಈ ಬಾರಿಯ ಐಪಿಎಲ್ ಫೈನಲ್ ಪಂದ್ಯ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂಬ ನಿರೀಕ್ಷೆ ಹುಸಿಯಾಗಿದೆ. ಕೊನೆಗೂ ಐಪಿಎಲ್ ಪಂದ್ಯ ಬೆಂಗಳೂರಿನ ಕೈತಪ್ಪಿದೆ. ಮೇ 31 ರಂದು ಫೈನಲ್ ಪಂದ್ಯ ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ವಿಶ್ವದ



ಅತಿದೊಡ್ಡ ಕ್ರಿಕೆಟ್ ಸ್ಟೇಡಿಯಂ ಆಗಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಬುಧವಾರ ಬಿಸಿಸಿಐ ಘೋಷಿಸಿದೆ.ಹಾಲಿ ಚಾಂಪಿಯನ್ ತಂಡದ ತವರು ಕ್ರೀಡಾಂಗಣದಲ್ಲಿ ಪ್ಲೇ-ಆಫ್ ಹಾಗೂ ಫೈನಲ್ ಪಂದ್ಯ ನಡೆಸಬೇಕೆಂಬುದು ಬಿಸಿಸಿಐ ನಿಯಮ. ↘ 10

ಕಟ್ಟಾಳು | ಕೈತುಂಬಾ ಸಂಬಳ ಬರುವ ಕೆಲಸ ಬಿಟ್ಟು ರಾಷ್ಟ್ರಸೇವೆಗಾಗಿ ಬಿಜೆಪಿ ಸೇರಿ ತಳಮಟ್ಟದಲ್ಲಿ ದುಡಿದ ಯುವಕ

ಬಂಗಾಳ ಬಿಜೆಪಿ ಗೆಲುವಿನ ಹಿಂದೆ 2019ರಲ್ಲಿ ಖರ್ಗೆ ಸೋಲಿಗೆ ಶ್ರಮಿಸಿದ್ದ ಕನ್ನಡಿಗನ ಪಾತ್ರ!

ಸಿಲಿಗುರಿ ಮನೆಮನೆ ಸುತ್ತಿ ಬಿಜೆಪಿ ಪರ ಪ್ರಚಾರ ಮಾಡಿದ್ದ ಕೊಟ್ಟಿಗೆಹಾರದ ಅರುಣ್

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಊಹಿಸಲಸದಳರೀತಿಯಲ್ಲಿಗೆಲುವುತನ್ನದಾಗಿಸಿಕೊಂಡ ಬಗ್ಗೆ ಎಲ್ಲರಲ್ಲಿ ಅಚ್ಚರಿ ಮೂಡಿರುವ ಹೊತ್ತಿನಲ್ಲೇ ಇಂಥದ್ದೊಂದು ಗೆಲುವಿನಲ್ಲಿ ಕನ್ನಡಿಗ ಅರುಣ್ ಬಿನ್ನಡಿ ಅವರ ಪಾತ್ರವೂ ಬೆಳಕಿಗೆ ಬಂದಿದೆ.ಕಳೆದ6 ತಿಂಗಳಿನಿಂದ ಬಂಗಾಳದ ಗುಡ್ಡಗಾಡು ಪ್ರದೇಶಗಳಲ್ಲಿ ಬೀಡುಬಿಟ್ಟು ಅಲ್ಲೇ ಮನೆ ಮನೆ ಸುತ್ತಿ ಪ್ರಚಾರ ಮಾಡಿದ ತಂಡದ ಉಸ್ತುವಾರಿಯಾಗಿದ್ದ ಅರುಣ್ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ.



ಗಮನಾರ್ಹ ಎಂದರೆ, 2019ರ ಲೋಕಸಭೆ ಚುನಾವಣೆಯಲ್ಲಿ ಗುಲ್ಬರ್ಗಾ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ನಾಯಕ ಎಂ. ಮಲ್ಲಿಕಾರ್ಜುನ ಖರ್ಗೆ ಅವರ ಪರಾಜಯಕ್ಕೂ ಇದೇ ಅರುಣ್ ಶ್ರಮಿಸಿದ್ದರು. ಆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಉಮೇಶ್ ಜಾಧವ್ ಜಯಭೇರಿ ಬಾರಿಸಿದ್ದರು.



ಚಿಕ್ಕಮಗಳೂರಿನ ಬಿನ್ನಡಿಯಲ್ಲಿ ಅರುಣ್‌ಗೆ ಅಭಿನಂದನೆ

ಸಿಲಿಗುರಿ ಹೊಣೆ: ಬಂಗಾಳದ ಚುನಾವಣೆಯಲ್ಲಿ ಅರುಣ್‌ಗೆ ಸಿಲಿಗುರಿ ಉತ್ತರ ವಲಯದ ಸಂಘಟನಾ ಪ್ರಭಾರಿಯಾಗಿ ಹೊಣೆಗಾರಿಕೆ ನೀಡಲಾಗಿತ್ತು. ಬಂಗಾಳದ ಕಠಿಣ ರಾಜಕೀಯ ಪರಿಸ್ಥಿತಿ ಮತ್ತು ಅಡೆತಡೆಗಳ ನಡುವೆಯೂ 6 ತಿಂಗಳು ಕಾಲ ತಮ್ಮ ತಂಡದೊಡಗೂಡಿ ತಳ ಮಟ್ಟದಲ್ಲಿ ಕೆಲಸ ಮಾಡಿದ ಅರುಣ್ ಮನೆ ಮನೆಗೂ ತೆರಳಿ ಪಕ್ಷವನ್ನು ಸಂಘಟಿಸಿದ್ದರು. ಸ್ಥಳೀಯ ಸಮಸ್ಯೆ ಅರಿತು, ಅವುಗಳಿಗೆ ತಕ್ಕಂತೆ ಅರುಣ್ ಗೆಲುವಿನ ಮಂತ್ರ ರೂಪಿಸಿದ್ದರು. ↘ 10

ಗರಿಷ್ಠ 36 c | ಕನಿಷ್ಠ 27



ಡಿಸಿ ಫೌಜಿಯ ತರನ್ನುಂ ಸೇವೆ ಅನುಪಮ: ಮೆಂಡನ್

ಕಲಬುರಗಿ: ಅಭಿವೃದ್ಧಿಯ ಹೊಸ ಪರ್ವ ಹುಟ್ಟುಹಾಕಿ ನಿರ್ಗಮನಗೊಳ್ಳುತ್ತಿರುವ ಡಿಸಿ ಫೌಜಿಯ ತರನ್ನುಂ ಸೇವೆ ಅನುಪಮ ಎಂದು ಹೋಟೆಲ್ ಮಾಲೀಕರ ಸಂಘದಅಧ್ಯಕ್ಷನರಸಿಂಹಮೆಂಡನ್ ತಿಳಿಸಿದ್ದಾರೆ. ಡಿಸಿ ಫೌಜಿಯ ಅವರು ಗ್ರಾಮೀಣಾಭಿವೃದ್ಧಿ ಇಲಾಖೆಯ ಕುಡಿವ ನೀರು ಹಾಗೂ ಮೂಲಸೌಲಭ್ಯ ಇಲಾಖೆಯ ಆಯುಕ್ತರಾಗಿ ನೇಮಕಗೊಂಡಿದ್ದು ಅವರಿಗೆ ಅಸೋಸಿಯೇಷನ್ ಶುಭಾಶಯ ಕೋರಿದೆ ಎಂದರು. ರೊಟ್ಟಿ, ಸಿರಿಧಾನ್ಯ ಉತ್ಪನ್ನ ಅಂತರಾಷ್ಟ್ರೀಯ ಮಟ್ಟಕ್ಕೆ ಒಯ್ದು ಕೀರ್ತಿಗೆ ಪಾತ್ರರಾಗಿದ್ದಾರೆ. ಉದ್ಯಮಿ ಸ್ನೇಹಿ ಜಿಲ್ಲಾಧಿಕಾರಿಯಾಗಿ ನೆರವು ನೀಡಿ ಬೆಂಬಲಿಸಿದ್ದಾರೆ ಅವರಿಗೆ ಅಸೋಸಿಯೇಷನ್ ಕೃತಜ್ಞವಾಗಿದೆಯೆಂದು ಹೇಳಿದ್ದಾರೆ. ನೂತನ ಡಿಸಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್‌ರನ್ನು ಸ್ವಾಗತಿಸಿ, ಜಿಲ್ಲೆ ಅಭಿವೃದ್ಧಿಯ ಹೊಸ ಶಕೆ ಆರಂಭವಾಗಲೆಂದು ಅವರು ತಿಳಿಸಿದ್ದಾರೆ.

ಸುದ್ದಿ ಸಿಂಚನ

ನೀಲೂರು-ಗುಡೂರು ರಸ್ತೆ ಅಪೂರ್ಣ: ಆರೋಪ

ಚವಡಾಪುರ: ಅಫಜಲಪುರ ತಾಲೂಕಿನ ನೀಲೂರು-ಗುಡೂರು ನಡುವಿನ 2.57 ಕೋಟಿ ವೆಚ್ಚದ ಸಂಪರ್ಕ ರಸ್ತೆ ಕಾಮಗಾರಿ ಅವಧಿ ಮುಗಿದರೂ ಕಾಮಗಾರಿ ಪೂರ್ಣಗೊಂಡಿಲ್ಲವೆಂದು ಸಾರ್ವಜನಿಕರು ಆರೋಪಿಸಿದ್ದಾರೆ. ನೀಲೂರು ಗ್ರಾಮದಿಂದ ಗುಡೂರು ಗ್ರಾಮದವರೆಗೆ 2.5 ಕಿ.ಮೀ ರಸ್ತೆ ನಿರ್ಮಾಣ ಕಾಮಗಾರಿ 2020-21ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಒಕ್ಕಈಆ)ಯ ಮೈಕ್ರೋ ಯೋಜನೆಯಡಿ 2 ಕೋಟಿ 57 ಲಕ್ಷ ವೆಚ್ಚದಲ್ಲಿ ಅನುಮೋದನೆಗೊಂಡಿತ್ತು. ಆದರೆ, ನಾಲ್ಕು ವರ್ಷ ಕಳೆದರೂ ಈ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಗುತ್ತಿಗೆದಾರರು ಅಲ್ಪ ಪ್ರಮಾಣದಲ್ಲಿ ಮಾತ್ರ ಕೆಲಸ ಮಾಡಿ, ಬಹುಪಾಲು ಹಣವನ್ನು ಎತ್ತಿಕೊಂಡಿದ್ದಾರೆಂದು ಜನ ಆರೋಪಿಸುತ್ತಿದ್ದಾರೆ. ರಸ್ತೆಯು ಅಪೂರ್ಣವಾಗಿ ಉಳಿದಿರುವುದರಿಂದ ವಿದ್ಯಾರ್ಥಿಗಳು, ರೈತರು ಮತ್ತು ಜನರಿಗೆ ದೈನಂದಿನ ಜೀವನದಲ್ಲಿ ಅನಾನುಕೂಲವಾಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪಂಚ ರಾಜ್ಯ ಚುನಾವಣಾ ಫಲಿತಾಂಶ, ಐತಿಹಾಸಿಕ ಜಯ: ಡಾ.ಉಮೇಶ್


ಕಲಬುರಗಿ: ಪಂಚ ರಾಜ್ಯಗಳ ಚುನಾವಣೆ ಐತಿಹಾಸಿಕ ದಿನವಾಗಿದ್ದು ಮೋದಿ ಆಡಳಿತಕ್ಕೆ ಹಾಗೂ ಸಂವಿಧಾನಕ್ಕೆ ಸಿಕ್ಕ ಜಯ ಎಂದು ಮಾಜಿ ಲೋಕಸಭಾ ಸದಸ್ಯ ಡಾ. ಉಮೇಶ್ ಜಾಧವ್ ಹರ್ಷ ವ್ಯಕ್ತಪಡಿಸಿದ್ದಾರೆ. ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಆಡಳಿತ ಹಾಗೂ ತಮಿಳುನಾಡು ಮತ್ತು ಕೇರಳಂ ರಾಜ್ಯಗಳಲ್ಲಿ ಬಿಜೆಪಿ ಗಣನೀಯವಾಗಿ ಶೇಕಡಾವಾರು ಮತ ಹೆಚ್ಚಿಸಿ ತನ್ನ ಪಾರಮ್ಯ ಮೆರೆದಿದೆ. ತಮಿಳುನಾಡಿನಲ್ಲಿ ಸನಾತನ ವಿರೋಧಿ ನಿಲುವಿನ ಮುಖ್ಯಮಂತ್ರಿ ಪ್ರಭಾವದ ಜೊತೆಗೆ ಡಿಎಂಕೆಯನ್ನು ಜನತೆ ತಿರಸ್ಕರಿಸಿದ್ದಾರೆ. ಪ್ರಧಾನಿ ಮೋದಿ ಅಮಿತ್ ಶಾ, ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನಬಿನ್ ಸೇರಿದಂತೆ ಎಲ್ಲ ನಾಯಕರ ಹಾಗೂ ತಳಮಟ್ಟದ ಬಿಜೆಪಿ ಕಾರ್ಯಕರ್ತರ ಅವಿರತ ಶ್ರಮಕ್ಕೆ ಸಂದ ಜಯ ಇದಾಗಿದೆ ಎಂದಿದ್ದಾರೆ. ಪ. ಬಂಗಾಳದ ಗೆಲುವು ರಾಷ್ಟ್ರೀಯ ಸಮಗ್ರತೆಗೆ ಸಿಕ್ಕ ಜಯದೊಂದಿಗೆ ನವಮನ್ವಂತರ ಆರಂಭವಾಗಲಿದೆ. ಸಂವಿಧಾನ ವಿರೋಧಿ ಶಕ್ತಿಗಳಿಗೆ ಮತದಾರ ಈ ಚುನಾವಣೆಯಲ್ಲಿ ತಕ್ಕ ಉತ್ತರ ಕೊಟ್ಟಿದ್ದಾನೆಂದು ಜಾಧವ್ ಹೇಳಿದ್ದಾರೆ.

ಹೋರಾಟಗಾರ್ತಿ ಮೋರೆ ಜನ್ಮದಿನ: ವೃದ್ಧರಿಗೆ ಆಹಾರ

ಕಲಬುರಗಿ: ಹೋರಾಟಗಾರ್ತಿ ಮತ್ತು ಜನಜಾಗೃತಿ ಅಧ್ಯಕ್ಷೆ ರಾಜೇಶ್ವರಿ ಮೋರೆ ಜನ್ಮದಿನ ಅಂಗವಾಗಿ ಕಲಬುರಗಿ ವಿವಿಧ ಸಂಘಟನೆಗಳ ಒಕ್ಕೂಟ ಹಾಗೂ ಶ್ರೀಕಾಂತ್ ರೆಡ್ಡಿ ಗೆಳೆಯರ ಬಳಗದ ವತಿಯಿಂದ ಮಹಾದೇವಿ ವೃದ್ಧಾಶ್ರಮ, ಚಿಂಚೋಳಿ ಕ್ರಾಸ್ ಹಾಗೂ ನೆಮ್ಮದಿ ವೃದ್ಧಾಶ್ರಮಗಳಲ್ಲಿ ವೃದ್ಧರಿಗೆ ಊಟದ ವ್ಯವಸ್ಥೆ, ಹಣ್ಣು-ಹಂಪಲು ವಿತರಿಸಲಾಯಿತು. ಹೋರಾಟಗಾರ ಎಂ.ಎಸ್. ಪಾಟೀಲ್ ನರಿಬೋಳ, ರೈತ ಸಂಘದ ಜಿಲ್ಲಾಧ್ಯಕ್ಷ ನಾಗೇಂದ್ರ ತಂಬೆ, ಜೈ ಕರ್ನಾಟಕ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಸಾರವಾಡ, ಶ್ರೀರಾಮ್ ಸೇನಾ ಜಿಲ್ಲಾಧ್ಯಕ್ಷ ಲಕ್ಷ್ಮಿಕಾಂತ್ ಸಾದಿ, ರಾಮ್ ಸೇನೆ ಜಿಲ್ಲಾಧ್ಯಕ್ಷ ಗಂಡು ಪಾಟೀಲ್, ಹುಮನ್ ರೈಟ್ಸ್ ಕರ್ನಾಟಕದ ಜನರಲ್ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್, ಉದ್ಯಮಿ ಲಕ್ಷ್ಮಣ ಬೋವಿ, ಭಾರತೀಯ ಯುವ ಸೈನ್ಯ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಚಿಂಚನಸೂರ, ಹಿಂದೂ ಮುಖಂಡ ಅಪ್ಪು ಗುಬ್ಯಾಡ, ಭಾರತೀಯ ಯುವ ಸೈನ್ಯ ಮಹಿಳಾ ಅಧ್ಯಕ್ಷೆ ಮಾಲಾಶ್ರೀ, ಮುಖಂಡೆ ಜಯಶ್ರೀ ಇದ್ದರು.

ರಥೋತ್ಸವ ಇಂದು

ಜೇವರ್ಗಿ: ಪಟ್ಟಣದ ಆರಾಧ್ಯ ದೈವ 17ನೇ ಶತಮಾನದ ಶ್ರೇಷ್ಠ ವಚನಕಾರ ಶ್ರೀಷಣ್ಮುಖ ಶಿವಯೋಗಿಗಳ



ರಥೋತ್ಸವ ಗುರುವಾರ ವೈಭವದಿಂದ ಜರುಗಲಿದೆ ಎಂದು ಮಠದ ಟ್ರಸ್ಟ್ ಕಮಿಟಿ ಅಧ್ಯಕ್ಷ ರಾಜಶೇಖರ ಸೀರಿ ತಿಳಿಸಿದ್ದಾರೆ. ಜಾತ್ರೋತ್ಸವ ನಿಮಿತ್ಯ ಬೆಳಿಗ್ಗೆ ಶ್ರೀಷಣ್ಮುಖ ಶಿವಯೋಗಿಗಳ ಕತೃ ಗದ್ದುಗೆಗೆ ವಿಶೇಷ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಸಾಯಂಕಾಲ 6.30 ಗಂಟೆಗೆ ಸಾವಿರಾರು ಭಕ್ತ ಸಮೂಹದ ನಡುವೆ ವೈಭವದ ರಥೋತ್ಸವ ನಡೆಯಲಿದೆ.



ಕಲಬುರಗಿ ಹೋರಾಟಗಾರ್ತಿ ರಾಜೇಶ್ವರಿ ಮೋರೆ ಜನ್ಮದಿನದ ಪ್ರಯುಕ್ತ ವಿವಿಧ ಸಂಘಟನೆಗಳ ಒಕ್ಕೂಟ ಹಾಗೂ ಶ್ರೀಕಾಂತ್ ರೆಡ್ಡಿ ಗೆಳೆಯರ ಬಳಗದಿಂದ ಮಹಾದೇವಿ ವೃದ್ಧಾಶ್ರಮ, ಚಿಂಚೋಳಿ ಕ್ರಾಸ್ ಹಾಗೂ ನೆಮ್ಮದಿ ವೃದ್ಧಾಶ್ರಮಗಳಲ್ಲಿ ವೃದ್ಧರಿಗೆ ಊಟದ ವ್ಯವಸ್ಥೆ, ಹಣ್ಣು-ಹಂಪಲು ವಿತರಿಸಲಾಯಿತು.



ಕಾಳಗಿ ತಾಲೂಕಿನ ಕೊಡದೂರ ಸಿದ್ಧಾರ್ಥ ನವೋದಯ ಕೋಚಿಂಗ್ ಸೆಂಟರ್‌ನಲ್ಲಿ ಬುದ್ಧಪೂರ್ಣಿಮೆ ಆಚರಿಸಿ ನಂತರ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಲಾಯಿತು. ಕಾರ್ಯದರ್ಶಿ ಅವಿನಾಶ್ ಮೂಲಿಮನಿ, ಡಾ.ಶಂಕರ, ಅರವಿಂದ ಮೂಲಿಮನಿ ಇದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳ ಹೊಸ ಮೈಲಿಗಲ್ಲು

ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳ ಅತ್ಯುತ್ತಮ ಸಾಧನೆ | ಫಲಿತಾಂಶದಲ್ಲಿ ಜಿಲ್ಲೆ ಚೇತರಿಕೆ, ರಾಜ್ಯ ಸರಾಸರಿ ಬೆನ್ನು ಹತ್ತಿದ ಶಾಲೆಗಳು

• **ಶೇಷಮೂರ್ತಿ ಅವಧಾನಿ**

ಕನ್ನಡಪ್ರಭ ವಾರ್ತೆ ಕಲಬುರುಗಿ

ಎಸ್ಸೆಸ್ಸೆಲ್ಸಿ ಫಲಿತಾಂಶ ಬಂದಾಕ್ಷಣ ಸಾಗುವ ಚರ್ಚೆ ಹೆಚ್ಚಾಗಿ ಜಿಲ್ಲಾ ರ‍್ಯಾಂಕ್, ಟಾಪರ್, ಪಾಸಿಂಗ್ ಪರ್ಸೆಂಟೇಜ್, ರಾಜ್ಯದ ಇತರೆ ಜಿಲ್ಲೆಗಳೊಂದಿಗೆ ಜಿಲ್ಲೆಯ ಸ್ಥಾನಮಾನದ ಸುತ್ತ ಗಿರಕಿ ಹೊಡೆಯೋದನ್ನ ಕಂಡಿದ್ದೇವೆ.

ಆದರೆ, ಕಲಬುರಗಿ ಜಿಲ್ಲೆಯ 2026ರ ಎಸ್ಸೆಸ್ಸೆಲ್ಸಿ ಫಲಿತಾಂಶ ತುಸು ಆಳವಾಗಿ ವಿಶ್ಲೇಷಣೆ ಮಾಡಿದಾಗ ಜಿಲ್ಲೆಯ ಶೈಕ್ಷಣಿಕ ಇತಿಹಾಸದಲ್ಲೇ ಹಿಂದೆಂದೂ ಕಾಣದಂತಹ ಅಭೂತಪೂರ್ವ ಬದಲಾವಣೆಯೊಂದು ಈ ಶಿಕ್ಷಣವರ್ಷ ದಾಖಲಿಸಿರೋ ಅಚ್ಚರಿ ಸಂಗತಿ ಬಯಲಾಗಿದೆ. ಈ ಬಾರಿ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಸುಧಾರಣೆ ಕಂಡ ಎರಡನೇ ಜಿಲ್ಲೆಯಾಗಿ ಕಲಬುರಗಿ (+28.17) ಹೊರಹೊಮ್ಮಿದೆ.

ಜಿಲ್ಲೆಯ 298 ಪ್ರೌಢಶಾಲೆಗಳ ಪೈಕಿ ಒಟ್ಟು 109 ಶಾಲೆಗಳು ಶೇ.100ರಷ್ಟು ಫಲಿತಾಂಶವನ್ನು ದಾಖಲಿಸಿದ್ದು, ಅದರಲ್ಲಿ 61 ಸರ್ಕಾರಿ ಶಾಲೆಗಳಾಗಿರುವುದು ವಿಶೇಷ.

2024-25ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರಲ್ಲಿ ಶೇ.42.43ರಷ್ಟು ಫಲಿತಾಂಶ ಬಂದಿತ್ತು. 2025-26ನೇ ಸಾಲಿನಲ್ಲಿ ಬರೋಬ್ಬರಿ ಶೇ.85.06 ಕ್ಕೆ ಏರಿಕೆಯಾಗಿದೆ. ಒಟ್ಟು 37,352 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 31,770 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಿಷನ್ 40 ಸೇರಿದಂತೆ ಅನೇಕ ಶೈಕ್ಷಣಿಕ ಸುಧಾರಣೆಗಳು ಯಶಸ್ವಿಯಾಗಿವೆ.

2024-25 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರಲ್ಲಿ ರಾಜ್ಯದ ಸರಾಸರಿ ಶೇ.66.14 ಇದ್ದರೆ, ಜಿಲ್ಲೆಯ ಪ್ರಮಾಣ 42.43 ಇತ್ತು. ಇದು ರಾಜ್ಯ ಸರಾಸರಿಗಿಂತ ಶೇ.23.71 ಕಡಿಮೆಯಾಗಿತ್ತು. 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರ ಫಲಿತಾಂಶ ನೋಡಿದಾಗ ರಾಜ್ಯದ ಸರಾಸರಿ 94.01 ಇದ್ದರೆ ಜಿಲ್ಲೆಯ ಸರಾಸರಿ ಫಲಿತಾಂಶ 85.06 ಇದೆ.

ಕಳೆದ ವರ್ಷದ ಫಲಿತಾಂಶಕ್ಕೆ ಹೋಲಿಸಿದರೆ ಜಿಲ್ಲೆಯ ಫಲಿತಾಂಶ ರಾಜ್ಯ ಸರಾಸರಿಗಿಂತ ಜಿಲ್ಲೆ ಸರಾಸರಿಯ ಅಂತರವನ್ನು 23.71 ರಿಂದ 8.95ಕ್ಕೆ ಇಳಿಕೆ ಕಂಡಿದೆ. ಇದು ಜಿಲ್ಲೆಯ ಮಕ್ಕಳ ಸಾಧನೆಗೆ ಹಿಡಿದ ಕನ್ನಡಿ ಎಂದು ವಿಶ್ಲೇಷಿಸಲಾಗುತ್ತಿದೆ.

ಖಾಸಗಿ ಶಾಲೆ ಜೊತೆ ಸರ್ಕಾರಿ ಶಾಲೆಗಳ ಪೈಪೋಟಿ: ಜಿಲ್ಲೆಯ ಸರ್ಕಾರಿ ಶಾಲೆಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಬಾರಿ ಅತ್ಯುತ್ತಮ ಫಲಿತಾಂಶ ದಾಖಲಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿವೆ. ಅಷ್ಟೇ ಅಲ್ಲದೆ ರಾಜ್ಯದ ಸರಾಸರಿಯ ಬೆನ್ನಟ್ಟಿರುವ ಇಲ್ಲಿನ ಶಾಲೆಗಳು ಜಿಲ್ಲೆಯಲ್ಲಿರುವ ಖಾಸಗಿ ಶಾಲೆಗಳಿಗೆ ತೀವ್ರ ಪೈಪೋಟಿ ನೀಡುತ್ತಿರೋದನ್ನ ಅಂಕಿ ಸಂಖ್ಯೆಗಳೇ ಸಾರುತ್ತಿವೆ.

ಸರ್ಕಾರಿ ಶಾಲೆಗಳ ಉತ್ತಮ ಸಾಧನೆ ತೋರಿದ ಪರಿಣಾಮ ಈ ಬಾರಿ ಜಿಲ್ಲೆಯು ಒಟ್ಟಾರೆಯಾಗಿ ಶೇ.85.94 ರಷ್ಟು ಫಲಿತಾಂಶ ಪಡೆಯುವಲ್ಲಿ ಯಶ ಕಂಡಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಸರ್ಕಾರಿ ಶಾಲೆಗಳಲ್ಲಿ ಮೌನ ಕ್ರಾಂತಿ: ಕಲಬುರಗಿಯ 298 ಸರ್ಕಾರಿ ಪ್ರೌಢಶಾಲೆಗಳಲ್ಲಿ, 61 ಶಾಲೆಗಳು 100% ಫಲಿತಾಂಶ ಸಾಧಿಸಿವೆ. ಅಂದರೆ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ 20%ಕ್ಕಿಂತ ಹೆಚ್ಚು ಪರಿಪೂರ್ಣ ಫಲಿತಾಂಶ ದಾಖಲಿಸಿದ್ದು ಇದು ಐತಿಹಾಸಿಕವೆನ್ನಲಾಗುತ್ತಿದೆ.

ದಶಕಗಳಿಂದ ಸರ್ಕಾರಿ ಶಾಲೆಗಳನ್ನು ಖಾಸಗಿ ಸಂಸ್ಥೆಗಳಿಗಿಂತ ಹಿಂದುಳಿದಿವೆ ಎಂದು ಮೂದಲಿಸಲಾಗುತ್ತಿತ್ತು. ಈ ವರ್ಷದ ಫಲಿತಾಂಶಗಳ ದತ್ತಾಂಶವು ಈ ಮೂದಲಿಕೆಯನ್ನು ಇನ್ನಿಲ್ಲವಾಗಿಸಿದೆ. ಸರ್ಕಾರಿ ಶಾಲೆಗಳು ವೇಗದಲ್ಲಿ ಮುನ್ನಡೆಯುತ್ತಿವೆ, ಅವು ನೇರವಾಗಿ ಖಾಸಗಿ ಶಾಲೆಗಳೊಂದಿಗೆ ಸ್ಪರ್ಧಿಸುತ್ತಿವೆ, ಅನೇಕ ಸಂದರ್ಭಗಳಲ್ಲಿ ಮುನ್ನಡೆ ಸಾಧಿಸುತ್ತಿವೆ ಎಂಬುದು ಈ ವರ್ಷದ ಫಲಿತಾಂಶ ಸಾರಿದೆ. ಜಿಲ್ಲೆಯಲ್ಲಿ ಒಟ್ಟು 109 ಶಾಲೆಗಳು 100% ಫಲಿತಾಂಶಗಳನ್ನು ಗಳಿಸಿವೆ. ಅವುಗಳಲ್ಲಿ 61 ಸರ್ಕಾರಿ ಶಾಲೆಗಳು, ಅಂದರೆ ಅತ್ಯುತ್ತಮ ಪ್ರದರ್ಶನ ನೀಡುವ ಸಂಸ್ಥೆಗಳಲ್ಲಿ 56% ಪಾಲು ಸರ್ಕಾರಿ ಶಾಲೆಗಳದ್ದೇ ಆಗಿರೋದು ಗಮನಾರ್ಹ ಸಂಗತಿ.



ಕಲಬುರಗಿಯಲ್ಲಿ ಜಿಪಂ ಸಭಾಂಗಣದಲ್ಲಿ 2025-26ನೇ ಸಾಲಿನ ಜಿಲ್ಲಾವಾರು ಮತ್ತು ತಾಲೂಕುವಾರು ಪರೀಕ್ಷಾ ಫಲಿತಾಂಶದಲ್ಲಿ ಉತ್ತಮ ಸಾಧನೆ ತೋರಿರುವ ಜಿಲ್ಲೆಯ ಸರ್ಕಾರಿ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಸಿಇಒ ಭಂವರ್ ಸಿಂಗ್ ಮೀನಾ, ಡಿಡಿಪಿಐ ಶಂಕರಮ್ಮ ಢವಳಗಿ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸನ್ಮಾನಿಸಿ ಶುಭ ಕೋರಿದರು.

ಕಳೆದ ವರ್ಷದ ಫಲಿತಾಂಶಕ್ಕೆ ಹೋಲಿಸಿದರೆ ಈ ವರ್ಷ ಶೈಕ್ಷಣಿಕ ಪ್ರಗತಿಯಲ್ಲಿ ಕಲಬುರಗಿ ಜಿಲ್ಲೆ ಗಮನಾರ್ಹ ಕಂಡಿದ್ದು, ರಾಜ್ಯ ಸರಾಸರಿ ಜೊತೆ ಹೋಲಿಸಿದರೆ ಜಿಲ್ಲೆಯ ಶಾಲಾ ಶಿಕ್ಷಣದ ಫಲಿತಾಂಶದಲ್ಲಿನ ವ್ಯತ್ಯಾಸವನ್ನು ಗಮನಾರ್ಹವಾಗಿ ತಗ್ಗಿಸಲಾಗಿದೆ. ಈ ಅಭಿವೃದ್ಧಿಯ ಹಿಂದೆ ಶಿಕ್ಷಕರ, ಅಧಿಕಾರಿಗಳ ಹಾಗೂ ವಿದ್ಯಾರ್ಥಿಗಳ ಶ್ರಮವಿದ್ದು, ಮುಂಬರುವ ದಿನಗಳಲ್ಲಿ ಇನ್ನಷ್ಟು ಉತ್ತಮ ಸಾಧನೆ ಮಾಡುವ ಗುರಿ ಹೊಂದಲಾಗಿದೆ. ಇದು ಕೇವಲ ಸುಧಾರಣೆಯಲ್ಲ, ಇದು ವಿಶ್ವಾಸಾರ್ಹತೆಯ ಬದಲಾವಣೆಯ ಪರ್ವಕಾಲವಗಿದೆ. ಇನ್ನೂ ಸಾಧಿಸುವ ವಿಶ್ವಾಸವಿದೆ.

• **ಭಂವರ್ ಸಿಂಗ್ ಮೀನಾ** ಸಿಇಒ, ಜಿಪಂ ಕಲಬುರಗಿ ಜಿಲ್ಲೆ



ಕಲಬರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಮಣ್ಣೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯ ನೋಟ. ಈ ಶಾಲೆಯೂ ಶೇ. 90 ರಷ್ಟು ಫಲಿತಾಂಶ ದಾಖಲಿಸಿದೆ.

ಕಲಬುರಗಿ ಸರ್ಕಾರಿ ಶಾಲೆಗಳಲ್ಲಿ ಪರಿವರ್ತನೆ ಆರಂಭ

ಕಲಬುರಗಿ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಪರಿವರ್ತನೆ ಗಾಳಿ ಬೀಸುತ್ತಿರೋದು ಸಮಾಧಾನ ತಂದಿದೆ. ಶಾಲೆಗಳಲ್ಲಿನ ಮುಖ್ಯೋಪಾಧ್ಯಾಯರ ಬಲವಾದ ನಾಯಕತ್ವ, ಶಾಲಾ ಸಿಬ್ಬಂದಿಯಿಂದ ಸಮರ್ಪಿತ ಬೋಧನೆ, ಸುಧಾರಿತ ಶೈಕ್ಷಣಿಕ ಮೇಲ್ವಿಚಾರಣೆ, ಉತ್ತಮ ಪರೀಕ್ಷಾ ಸಿದ್ಧತೆ ತಂತ್ರಗಳು, ಅರಿವು ಗುರು ಪುಸ್ತಕಗಳ ವಿತರಣೆಯಿಂದಾಗಿ ಸರ್ಕಾರಿ ಶಾಲೆಗಳು ಉನ್ನತ-ಮಟ್ಟದ ಕಾರ್ಯಕ್ಷಮತೆ ಮತ್ತು ಕೆಳ-ಮಟ್ಟದ ಸ್ಥಿತಿಸ್ಥಾಪಕತ್ವ ಎರಡನ್ನೂ ಬಲಪಡಿಸಿಕೊಂಡು ಮೈಕೊಡವಿ ಮೇಲೇಳುವ ಹಂತ ತಲುಪಿರೋದು ಅಪರೂಪದ ಸಂಗತಿಯಾಗಿ ದಾಖಲಾಗಿದೆ.

ಶೂನ್ಯ ಫಲಿತಾಂಶ ಲಿಸ್ಟ್‌ನಲ್ಲಿ ಒಂದೂ ಸರ್ಕಾರಿ ಶಾಲೆಯಿಲ್ಲ!

- ಶೂನ್ಯ ಫಲಿತಾಂಶ ದಾಖಲಿಸಿರುವ ಜಿಲ್ಲೆಯ 9 ಶಾಲೆಗಳಲ್ಲಿ ಒಂದೂ ಸರ್ಕಾರಿ ಶಾಲೆಯಿಲ್ಲ
- ಶೂನ್ಯ ಸಾಧನೆ ಮಾಡಿರುವ ಶಾಲೆಗಳಲ್ಲಿ 7 ಖಾಸಗಿ, 2 ಅನುದಾನಿತ ಶಾಲೆಗಳಿವೆ
- 298 ಸರ್ಕಾರಿ ಶಾಲೆಗಳಲ್ಲಿ 2 ಮಾತ್ರ 40% ಕ್ಕಿಂತ ಕಡಿಮೆ
- ಯಾವ ಸರ್ಕಾರಿ ಶಾಲೆಯೂ 37% ಕ್ಕಿಂತ ಪಾಸಿಂಗ್ ಶೇಕಡಾವಾರು ಕಡಿಮೆ ಇಲ್ಲ.
- ಯಾವುದೇ ಸರ್ಕಾರಿ ಶಾಲೆ 20% ಕ್ಕಿಂತ ಕಡಿಮೆ ಪಾಸಿಂಗ್ ಪರ್ಸೆಂಟೇಜ್ ವರ್ಗಕ್ಕೆ ಸೇರಿಲ್ಲ.
- ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಫಲಿತಾಂಶ ದ್ವಿಗುಣಗೊಂಡಿವೆ
- 2025 ರಲ್ಲಿ 42.43% (ಪರೀಕ್ಷೆ-1) ರಿಂದ 2026 ರಲ್ಲಿ 85.06% ಕ್ಕೆ ಏರಿದೆ.
- ರಾಜ್ಯದ ಸರಾಸರಿ ಜತೆ ಜಿಲ್ಲೆಯ ಒಟ್ಟಾರೆ ಸರಾಸರಿ ಅಂತರ ತಗ್ಗಿದೆ
- ಕಳೆದ ವರ್ಷ: ಕಲಬುರಗಿ ರಾಜ್ಯ ಸರಾಸರಿಗಿಂತ 23.15 ಶೇಕಡಾ ಅಂಕ ಇತ್ತು
- ಈ ವರ್ಷ: ಅಂತರವು ಕೇವಲ 9.05 ಶೇಕಡಾ ಅಂಕ ತಲುಪಿದೆ.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಶರಣರ ಕೊಡುಗೆ ಅಪಾರ

ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ರಮೇಶ ಲಂಡನಕರ್ ಅಭಿಮತ

• **ಕನ್ನಡಪ್ರಭ ವಾರ್ತೆ** ಜೇವರ್ಗಿ

ಶರಣರು, ಸಂತರು ಬಾಳಿ ಬೆಳಗಿದ ಪುಣ್ಯ ಭೂಮಿ ಜೇವರ್ಗಿ. ಇಂತಹ ಕ್ಷೇತ್ರದಲ್ಲಿ ಜನಿಸಿದ ನಾವು ಭಾಗ್ಯಶಾಲಿಗಳು. ಸಾಹಿತ್ಯ ಕ್ಷೇತ್ರಕ್ಕೆ ಶರಣರ ಕೊಡುಗೆ ಅಪಾರ ಎಂದು ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ರಮೇಶ ಲಂಡನಕರ್ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಕನ್ನಡ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನಾ ದಿನ ಹಾಗೂ ಕನ್ನಡ ಹಾಡುಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕನ್ನಡ ಸಾಹಿತ್ಯ ಲೋಕಕ್ಕೆ ಜೇವರ್ಗಿ ತಾಲೂಕಿನ ಚರಚಕ್ರವರ್ತಿ ಷಣ್ಮುಖಶಿವಯೋಗಿಗಳು, ಕಡಕೋಳದ ಮಡಿವಾಳೇಶ್ವರರು, ರಾಂಪೂರದ ಬಕ್ಕಪ್ಪಯ್ಯ, ಚನ್ನೂರಿನ ಜಲಾಲಸಾಬ ಸೇರಿದಂತೆ ಮುಂತಾದ ಶರಣರು, ಸಂತರು ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ವಚನ, ಸ್ವರ ವಚನ, ತತ್ವಪದಗಳ ಮೂಲಕ ನಮ್ಮ ಬದುಕಿಗೆ ಬೇಕಾದ ಮುಕ್ತಿ ಮಾರ್ಗದ ತತ್ವ ಸಂದೇಶಗಳನ್ನು ಸಾರಿದ ಮೇರು ವ್ಯಕ್ತಿತ್ವದ ಮಹಾತ್ಮರಾಗಿದ್ದಾರೆ. ಕನ್ನಡ ಸಾಹಿತ್ಯ ತನ್ನದೇಯಾದ ಐತಿಹಾಸಿಕ ಇತಿಹಾಸ ಹೊಂದಿದೆ. ಕನ್ನಡ ಸಾಹಿತ್ಯವನ್ನು ಉಳಿಸಿಬೆಳೆಸುವಲ್ಲಿ ಸಾಹಿತ್ಯ ಪರಿಷತ್ತು ಶ್ರಮಿಸುತ್ತಿದೆ ಎಂದರು.

ಇದೆ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮುನಿಯಣಗೌಡ ಮಾಲಿಪಾಟೀಲ್, ನೀಲಕಂಠ ಹಳಿಮನಿ, ಎಂ.ಎಸ್.ಪಾಟೀಲ್, ಉಮಾದೇವಿ ಘಂಟಿಮಠ, ಸುಧಾ ಬೆಣ್ಣೂರ, ಸಂದೀಪ ಠಾಕೂರ, ಸಂಗಮೇಶ ಸಂಕಾಲಿ, ಶಿವಪುತ್ರಪ್ಪ ನೆಲ್ಲಗಿ, ಸದಾಶಿವ ಪತ್ತಾರ, ಕಲ್ಲಯ್ಯಸ್ವಾಮಿ ಮಠಪತಿ, ಚಂದ್ರಾಮ, ತುಕಾರಾಂ, ಸಾಯಿಬಣ್ಣ ಕಲ್ಯಾಣಕರ್, ವೀರಣ್ಣಗೌಡ ಬಿರಾದಾರ, ಷಣ್ಮುಖ ಹುಗ್ಗಿ, ತೇಜಸ್ವಿನಿ ಹಿರೇಮಠ, ಮಲ್ಲಿಕಾರ್ಜುನ ಗುಳ್ಯಾಳ, ಖಲೀಫ್ ಶಿಕಾರಿ ಮಂದ್ರವಾಡ, ನಿಖೀಲ್ ಇಬ್ರಾಹಿಂಪೂರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಖಾಪುರದ ವಿಶ್ವಾರಾಧ್ಯ ತಪೋವನ ಮಠದ ಪೀಠಾಧಿಪತಿ ಡಾ.ಸಿದ್ಧರಾಮ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಚನ್ನಮಲ್ಲಯ್ಯ ಹಿರೇಮಠ, ಎಸ್.ಕೆ.ಬಿರಾದಾರ, ಕಲ್ಯಾಣಕುಮಾರ ಸಂಗಾವಿ, ದಯಾನಂದ ದೇವರಮನಿ, ಸೋಮಶೇಖರಗೌಡ ಗುಡೂರ, ಮಲ್ಲಿಕಾರ್ಜುನಗೌಡಪಾಟೀಲ್ ಬಿರಾಳ, ಶಾಂತಗೌಡಮಾಲಿಪಾಟೀಲ್, ಶರಣಗೌಡ ಪಾಟೀಲ್ ಜೈನಾಪುರ, ಶ್ರೀನಿವಾಸಕುಷ್ಟಗಿ, ಡಾ.ಪಿಎಂ.ಮಠ, ಆದಪ್ಪಸಿಕೇದ, ಕವಿತಾ ಹಳ್ಳಿ, ಎಸ್.ಟಿ.ಬಿರಾದಾರ, ಸುನಂದಾ ಕಲ್ಲಾ, ಬಸವರಾಜ ಹಡಪದ, ಶ್ರೀಹರಿ ಕರಕಿಹಳ್ಳಿ, ಉಮಾಕಾಂತ ಗೋಲಗೇರಿ, ಬಂಗಾರಪ್ಪ ಆಡೀನ್, ರಾಜಶೇಖರ ಹಿರೇಮಠ ಸೇರಿದಂತೆ ಕನ್ನಡಾಭಿಮಾನಿಗಳು ಪಾಲ್ಗೊಂಡಿದ್ದರು.



ಜೇವರ್ಗಿ ಪಟ್ಟಣದ ಕನ್ನಡ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನಾ ದಿನ ಹಾಗೂ ಕನ್ನಡ ಹಾಡುಗಳ ಕಾರ್ಯಕ್ರಮವನ್ನು ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ರಮೇಶ ಲಂಡನಕರ್ ಉದ್ಘಾಟಿಸಿದರು.

ಬುದ್ದನ ತತ್ವ ಅಳವಡಿಸಿಕೊಳ್ಳಿ: ಡಾ.ಶಂಕರ

• **ಕನ್ನಡಪ್ರಭ ವಾರ್ತೆ** ಕಾಳಗಿ

ಗೌತಮ ಬುದ್ದರ ಸಂದೇಶಗಳನ್ನು ಮೈಗೂಡಿಸಿಕೊಂಡರೆ ಬದುಕು ಸಾರ್ಥಕ ಎಂದು ಪ್ರಾಧ್ಯಾಪಕ ಡಾ.ಶಂಕರ ಮೂಲಿಮನಿ ಕೊಡದೂರ ಹೇಳಿದರು. ಸಿದ್ಧಾರ್ಥ ನವೋದಯ ಕೋಚಿಂಗ್ ಸೆಂಟರ್‌ನಲ್ಲಿ ಬುದ್ಧಪೂರ್ಣಿಮೆ ಆಚರಿಸಿ, ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಿದರು.

ಸಿದ್ಧಾರ್ಥ ಸಂಸ್ಥೆ ಕಾರ್ಯದರ್ಶಿ ಅವಿನಾಶ್ ವಿದ್ಯಾರ್ಥಿಗಳಿಗೆ ಬುದ್ದನ ಜೀವನ ಸಂದೇಶ ತಿಳಿಸಿದರು. ಗೌತಮಬುದ್ಧ, ಈತ ಕ್ರಿ.ಪೂ. 583 ರಂದು ವೈಶಾಖ ಶುದ್ಧ ಪೂರ್ಣಿಮೆಯಂದು ನೇಪಾಳದ ಲುಂಬಿನಿ ವನದಲ್ಲಿ ಜನಿಸಿ ತ್ರಿಪೀಟಕ ರಚಿಸುವ ಮೂಲಕ ಜಗತ್ತಿಗೆ ತತ್ವ ಸಂದೇಶ ನೀಡಿದ ಅವರು ವಾಸ್ತವವ ಜೀವನಕ್ಕೆ ಪ್ರಾಮುಖ್ಯತೆ ನೀಡಿದರು ಎಂದು ಘಂಟಾಘೋಷವಾಗಿ ಹೇಳಿದರು. ಪ್ರಕಾಶ ಮೇಲಕೇರಿ, ಬಸವರಾಜ ಹೊಸಮನಿ, ತುಕಾರಾಮ್, ಬಸವರಾಜ ಚೆನ್ನಾ, ಜಗನ್ನಾಥ ರಟಕಲ್, ಕಂಠಪ್ಪ, ಶಿವಾನಂದ ಮೊಘಾ, ಜಗನ್ನಾಥ ಚೆನ್ನಾ, ಅರವಿಂದ ಮೂಲಿಮನಿ ಇದ್ದರು.

ದರ್ಗಾ ಶರೀಫ್ ಮಸೀದಿಯಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ

ಹಜ್ರತ್ ಖ್ವಾಜಾ ಬಂದೇ ನವಾಜ್ 662ನೇ ಉರುಸ್ ಸಂಭ್ರಮ



ಕಲಬುರಗಿಯಲ್ಲಿರುವ ಸೂಫಿ ಸಂತ ಹಜರತ್ ಖಾಜಾ ಬಂದೇ ನವಾಜರ ದರ್ಗಾದ 622 ನೇ ಉರುಸ್ ಶರೀಫ್ ಅಂಗವಾಗಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು 3ನೇ ದಿನ ವಿದ್ಯುಕ್ತವಾಗಿ ನಡೆದವು. ಅಜ್ಮೇರ್‌ನ ಅನೇಕ ಭಕ್ತರು ಪಾಲ್ಗೊಂಡಿದ್ದರು.

ಕಲಬುರಗಿ: ಐತಿಹಾಸಿಕ ಹಜ್ರತ್ ಖ್ವಾಜಾ ಬಂದಾ ನವಾಜ್ ಅವರ 622ನೇ ಉರುಸ್ ಶರೀಫ್ ಮೂರನೇ ದಿನದ ಅಂಗವಾಗಿ, ಜಿಯಾರತ್ ಸಂದರ್ಭದಲ್ಲಿ ಅಸರ್‌ನಮಾಜ್ ನಂತರ ದರ್ಗಾ ಶರೀಫ್ ಮಸೀದಿಯಲ್ಲಿ ಖತ್ಮ್-ಎ-ಕುರ್‌ಆನ್ ಖ್ವಾನಿ ಮತ್ತು ಕಸೀದಾ ಬುರ್ದಾ ಶರೀಫ್ ಕಾರ್ಯಕ್ರಮಗಳು ನಡೆದವು. ಹಜ್ರತ್ ಹಾಫಿಜ್ ಡಾ. ಸಯ್ಯದ್ ಮುಹಮ್ಮದ್ ಅಲಿ ಅಲ್ ಹುಸೈನಿ ಸಾಹೇಬ್, ಸಜ್ಜಾದಾ ನಶೀನ್ ಅವರು ಸದರ್ ಸೋಫಾ ಹವೇಲಿಯಿಂದ ಖ್ವಾಜಗಿ ವೇಷಭೂಷಣದಲ್ಲಿ ಫುಕ್ರಾಗಳೊಂದಿಗೆ ಮಸೀದಿಗೆ ಆಗಮಿಸಿದರು. ಮೊದಲು ಖತ್ಮ್-ಎ-ಕುರ್‌ಆನ್ ಖ್ವಾನಿ ನಡೆಯಿತು. ನಂತರ ಹೈದರಾಬಾದ್‌ನ ಹಬೀಬ್ ಚೆಹಲ್ ಕಾಫ್ ಗುಂಪು ಕಸೀದಾ ಬುರ್ದಾ ಶರೀಫ್ ಪ್ರಸ್ತುತಪಡಿಸಿದರು.

ಮಘ್ರಿಬ್ ನಮಾಜ್ ನಂತರ ಸಲಾಂ ಕಾರ್ಯಕ್ರಮ ನಡೆಯಿತು. ನಂತರ ಹಜ್ರತ್ ಡಾ. ಹಾಫಿಜ್ ಸಯ್ಯದ್ ಮುಹಮ್ಮದ್ ಅಲಿ ಹುಸೈನಿ ಸಾಹೇಬ್ ಕಿಬ್ಲಾ, ಸಜ್ಜಾದಾ ನಶೀನ್ ಅವರು ಫಾತೇಹಾಖ್ವಾನಿ ನೆರವೇರಿಸಿದರು. ನಂತರ ತಬ್ರೂಕಾತ್ ವಿತರಣೆ ಮಾಡಲಾಯಿತು. ಬಳಿಕ ಹಜ್ರತ್ ಖ್ವಾಜಾ ಬಂದಾ ನವಾಜ್ (ರ.ಅ) ಅವರ ದರ್ಗಾಹದಲ್ಲಿ ಜಿಯಾರತ್ ನೆರವೇರಿಸಲಾಯಿತು ಮತ್ತು ಬಂದ್ ಸಮಾ ಕಾರ್ಯಕ್ರಮವೂ ಆಯೋಜಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಅಜ್ಮೇರ್ ಶರೀಫ್‌ನ ಹಜ್ರತ್ ಅಮೀನ್ ಮಿಯಾ ಚಿಷ್ತಿ, ಜನಾಬ್ ಸಯ್ಯದ್ ಮುಹಮ್ಮದ್ ಸಯ್ಯದ್ ಹುಸೈನಿ ಸಾಹೇಬ್, ಹಜ್ರತ್ ಸಯ್ಯದ್ ಶಾ ತಖಿಯುಲ್ಲಾ ಹುಸೈನಿ, ಸಯ್ಯದ್ ಅಹ್ಮದ್ ಹುಸೈನಿ ಸಾಹೇಬ್, ಸಯ್ಯದ್ ಬಾಖರ್ ಶಬ್ಬೀರ್ ಹುಸೈನಿ, ಜನಾಬ್ ಮಿರ್ ಸರ್ದಾರುದ್ದೀನ್ ಅಲಿ ಖಾನ್ ಹಾಗೂ ಬಂದಾ ನವಾಜ್ ಖಾಂದಾನ್‌ನ ಶಹ್ಜಾದಾಗಳು ಭಾಗವಹಿಸಿದ್ದರು. ಇದರ ಜೊತೆಗೆ ವಿವಿಧ ಉಲಮಾ, ಮಶಾಯಿಖ್, ಸಜ್ಜಾದಾ ನಶೀನ್‌ಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜಾಯರೀನ್‌ಗಳು ಹಾಜರಿದ್ದರು.

ಉದ್ಘಾಟನೆ | ಬ್ಯಾಂಕ್ ಲೋನ್ ಮೇಳ, 65 ಗುಂಪುಗಳಿಗೆ 1.50 ಕೋಟಿ ರು. ಚೆಕ್ ವಿತರಣೆ

ಸಂಜೀವಿನಿ ಸಂಘಗಳಿಗೆ ಆದ್ಯತೆ ಮೇಲೆ ಸಾಲ ಕೊಡಿ: ಸಿಇಒ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಸಂಜೀವಿನಿ ಸ್ವ-ಸಹಾಯ ಮಹಿಳಾ ಗುಂಪುಗಳಿಗೆ ಪ್ರಥಮಾದ್ಯತೆ ಮೇಲೆ ಸಾಲ ನಿಡುವ ಮೂಲಕ ಅವರ ಸ್ವಯಂ ಉದ್ಯೋಗಕ್ಕೆ ಬ್ಯಾಂಕ್‌ಗಳು ಪ್ರೋತ್ಸಾಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಸಿಇಒ ಭಂವರ್ ಸಿಂಗ್ ಮೀನಾ ಹೇಳಿದರು.

ಜಿಪಂ ಸಭಾಂಗಣದಲ್ಲಿ ಜಿಪಂ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಹಾಗೂ ಜಿಲ್ಲಾ ಲೀಡ್ ಬ್ಯಾಂಕ್ ನಿಂದ ಸ್ವ-ಸಹಾಯ ಗುಂಪುಗಳಿಗೆ ಆಯೋಜಿಸಿದ ಬ್ಯಾಂಕ್ ಸಾಲ ಮೇಳ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಬ್ಯಾಂಕ್ ಸಾಲಕ್ಕಾಗಿ ಕಳೆದ ತ್ರೈಮಾಸಿಕದಲ್ಲಿ ಒಟ್ಟು 279 ಸ್ವ ಸಹಾಯ ಗುಂಪುಗಳು 7.92 ಕೋಟಿ ರೂ. ಸಾಲಕ್ಕೆ ಕೋರಿದ ಪ್ರಸ್ತಾವನೆ ಅರ್ಜಿಯನ್ನು ಬ್ಯಾಂಕ್‌ಗಳಿಗೆ ಕಳುಹಿಸಿತ್ತು. ಇದರಲ್ಲಿ ವಿವಿಧ ಬ್ಯಾಂಕ್‌ಗಳು 150 ಸ್ವ ಸಹಾಯ ಸಂಘಗಳಿಗೆ 1 ರಿಂದ 3 ಲಕ್ಷ ರೂ. ವರೆಗೆ 3.15 ಕೋಟಿ ರೂ. ಮಂಜೂರು ಮಾಡಿದೆ. ಅದರಲ್ಲಿ ಇಂದಿಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಕೆನರಾ ಬ್ಯಾಂಕ್ ನಿಂದ 65 ಗುಂಪುಗಳಿಗೆ 1.50 ಕೋಟಿ ರೂ. ಗಳ ಸಾಲದ ಚೆಕ್ ವಿತರಿಸಲಾಗಿದೆ ಎಂದರು.

ಕಳೆದ ಏಪ್ರಿಲ್ 15 ರಿಂದ ಬ್ಯಾಂಕ್ ಲೋನ್ ಅಭಿಯಾನ ಮೂಲಕ 425 ಸ್ವ-ಸಹಾಯ ಗುಂಪುಗಳು 9.21 ಕೋಟಿ ರೂ. ಬ್ಯಾಂಕ್ ಲೋನ್ ಬೇಡಿಕೆಯ ಅರ್ಜಿಗಳನ್ನು ಬ್ಯಾಂಕ್‌ಗಳಿಗೆ ಈಗಾಗಲೆ ಕಳುಹಿಸಿದ್ದು, ಇವುಗಳಲ್ಲಿ ಮೇ15 ರೊಳಗೆ ಅರ್ಹರಿಗೆ ಸಾಲ ಮಂಜೂರು ಮಾಡುವಂತೆ ಬ್ಯಾಂಕರ್ಸ್ ಗಳಿಗೆ ಭಂವರ್ ಸಿಂಗ್ ಮೀನಾ ನಿರ್ದೇಶನ ನೀಡಿದರು.

ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯವನ್ನು ಸ್ವ-ಸಹಾಯ ಗುಂಪಿನ ಎಲ್ಲಾ ಮಹಿಳೆಯರು ಸದ್ಬಳಕೆ ಮಾಡಿಕೊಳ್ಳಬೇಕು. ಎಸ್.ಎಚ್.ಜಿ ಸದಸ್ಯರಿಗೆ ಜೀವನೋಪಾಯ ಚಟುವಟಿಕೆಗಳ ಬಗ್ಗೆ ಎಸ್.ಬಿ.ಐ ಆರ್. ಎಸ್.ಇ.ಟಿ.ಐ ಮತ್ತು ಕೆ.ವಿ.ಕೆ. ಸಂಸ್ಥೆಯಿಂದ ತರಬೇತಿ ಪಡೆದು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸ್ವ-ಉದ್ಯೋಗ ಕೈಗೊಳ್ಳುವುದಲ್ಲದೆ ಇತರಿಗೆ ಉದ್ಯೋಗ ನೀಡಿ ಉದ್ಯಮಿಗಳಾಗಿ ಎಂದು ಹಾರೈಸಿದರು.

ಲಿಂಡ್ ಬ್ಯಾಂಕ್ ವ್ಯವಸ್ಥಾಪಕ ರವಿಗೌಡ ಮಾತನಾಡಿ, ಸ್ವ-ಸಹಾಯ ಸಂಘಗಳಿಗೆ ಸಾಲ ವಿತರಣೆಯಲ್ಲಿ ಏನೇ ಸಮಸ್ಯೆಗಳಿದಲ್ಲಿ ಲೀಡ್ ಬ್ಯಾಂಕ್‌ನಿಂದ ಸ್ಪಷ್ಟನೆ ಪಡೆದು ತಕ್ಷಣ ಎಸ್.ಎಚ್.ಜಿ ಗಳಿಗೆ ಮತ್ತು ವ್ಯಯಕ್ತಿಕ ಬ್ಯಾಂಕ್ ಸಾಲವನ್ನು ನೀಡಬೇಕೆಂದು ಬ್ಯಾಂಕ್ ಅಧಿಕಾರಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಯೋಜನಾ ನಿರ್ದೇಶಕ ಜಗದೇವ ಬಿ., ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಧಿಕಾರಿ ಅನೀತಾ ಹಟ್ಟಿ, ಕೆನರಾ ಬ್ಯಾಂಕ್ ಅಧಿಕಾರಿ ರಾಮಕೃಷ್ಣ, ಎಸ್‌ಬಿಐ ಬ್ಯಾಂಕ್ ಅಧಿಕಾರಿ ಗೋರಖನಾಥ ಸೇರಿದಂತೆ ಜಿಲ್ಲೆಯ ಎಲ್ಲಾ ಬ್ಯಾಂಕ್ ಅಧಿಕಾರಿಗಳು, ಡಿಎಂಎಂಯು, ಟಿಎಂಎಂಯು, ಸಿಬ್ಬಂದಿ, ಜಿಪಿಎಲ್‌ಎಫ್ ಸಿಆರ್‌ಪಿಗಳು ಹಾಗೂ ಸ್ವ-ಸಹಾಯ ಗುಂಪಿನ ಅಧ್ಯಕ್ಷರು- ಕಾರ್ಯದರ್ಶಿಗಳು ಭಾಗವಹಿಸಿದ್ದರು. ಡಿಪಿಎಂ ಲೋಹಿತ್ ಕುಮಾರ್ ನಿರೂಪಿಸಿ ವಂದಿಸಿದರು.



ಕಲಬುರಗಿ ಜಿಪಂ ಸಭಾಂಗಣದಲ್ಲಿ ಜಿಪಂ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಹಾಗೂ ಜಿಲ್ಲಾ ಲೀಡ್ ಬ್ಯಾಂಕ್‌ನಿಂದ ಸ್ವ-ಸಹಾಯ ಗುಂಪುಗಳಿಗೆ ಆಯೋಜಿಸಿದ ಬ್ಯಾಂಕ್ ಸಾಲ ಮೇಳ ನಡೆಯಿತು.

ಜಾಫ್ರಾಬಾದ್‌ನಲ್ಲಿ ಅಭಿವೃದ್ಧಿ ಕಾಮಗಾರಿಗೆ ಅಡಿಗಲ್ಲು

ಜಾಫ್ರಾಬಾದ್ ಚಿತ್ರಣವೇ ಬದಲಿಸಲಿವೆ ಅಭಿವೃದ್ಧಿ ಕಾಮಗಾರಿಗಳು: ಶಾಸಕ ಅಲ್ಲಂಪ್ರಭು ಪಾಟೀಲ್




ಕಲಬುರಗಿ: ಭೀಮಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಜಾಫ್ರಾ ಬಾದ್ ಗ್ರಾಮದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಕಾಮಗಾರಿಗಳಿಗೆ ಅಡಿಗಲ್ಲು ಸಮಾರಂಭ ನೆರವೇರಿತು. ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಂಪ್ರಭು ಪಾಟೀಲ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದರು. ಸ 15 ಲಕ್ಷ ರೂ. ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣ, ಸುಮಾರು 20ಲಕ್ಷ ವೆಚ್ಚದ ಸಿಸಿ ರಸ್ತೆ ಕಾಮಗಾರಿ ಹಾಗೂ ಸುಮಾರು 1.20 ಕೋಟಿ ರೂ. ವೆಚ್ಚದಲ್ಲಿ ಕೊಳವೆಬಾವಿ ಕಾಮಗಾರಿಗಳಿಗೆ ಶಾಸಕರು ಅಡಿಗಲ್ಲು ನೆರವೇರಿಸಿದರು.ಕಾರ್ಯಕ್ರಮದಲ್ಲಿ ಹಜರತ್ ರುಕ್ಮುದ್ದೀನ್ ತೋಲಾ ದರ್ಗಾದ ಅನ್ವರ್‌ಹುಸೇನ್ ಸಾಹೇಬರು, ಮಾಜಿ ಜಿ.ಪಂ ಸದಸ್ಯ ಸಂತೋಷ್ ಪಾಟೀಲ್ ದಣ್ಣೂರ್, ಲಿಂಗರಾಜ ಕಣ್ಣಿ, ನಾಗರಾಜ ಜಿ. ಭಂಗೂರ, ವೀರಣ್ಣ ಬಂಗುರ್, ಲಡ್ಲೆ ಸಾಬ್ ಹರಸೂರ್, ಜಾಕಿರ್‌ಹುಸೇನ್ ಹರಸೂರ್, ನಿಸಾರ್ ಅಹಮದ್, ಅಸ್ಲಾಂ ಸಿಂದಗಿ, ತೋಲಾ ಭಾಷಾ ಮುಜಾವರ್ ಗ್ರಾಮಸ್ಥರು ಇದ್ದರು.ಬಹುಕೋಟಿ ವೆಚ್ಚದ ಈ ಅಭಿವೃದ್ಧಿ ಕಾಮಗಾರಿಗಳು ಜಾಫ್ರಾಬಾದ್ ಗ್ರಾಮದಲ್ಲಿ ಸೌಲಭ್ಯ ಮತ್ತಷ್ಟು ಬಲಪಡಿ ಸಲಿವೆ. ಹಳ್ಳಿಗಳು ಸೌಕರ್ಯಗಳಿಂದ ಬಲ ಗೊಂಡಷ್ಟು ಅನುಕೂಲವಾಗಲಿದೆ. ಹಳ್ಳಿಗರಿಗೆ ರಸ್ತೆ, ನೀರಿಗೆ ಆದ್ಯತೆ ನೀಡುವುದಾಗಿ ಅಲ್ಲಂಪ್ರಭು ಪಾಟೀಲ ಅವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರು.

ಗುಂತಕಲ್-ವಾಡಿ ಮಧ್ಯೆ ಇನ್ನೆರಡು ರೈಲು: ಕೇಂದ್ರ ಒಪ್ಪಿಗೆ

ಕಲಬುರಗಿ: ಗುಂತಕಲ್ - ವಾಡಿ ನಡುವೆ 230 ಕಿ.ಮೀ ಉದ್ದದ ಎರಡು ಮತ್ತು ಮೂರನೇ ನೂತನ ರೈಲು ಹಳಿ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿ ಮೋದಿ ಈ ಭಾಗಕ್ಕೆ ಬಾರಿ ಕೊಡುಗೆ ನೀಡಿದ್ದಾರೆ ಎಂದು ಮಾಜಿ ಲೋಕಸಭಾ ಸದಸ್ಯ ಡಾ. ಉಮೇಶ್ ಜಾಧವ್ ಅಭಿನಂದನೆ ಸಲ್ಲಿಸಿದ್ದಾರೆ. ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ರೈಲು ಸಂಚಾರದ ಹಳಿಗಳ ಬಲಪಡಿಸಿವಿಕೆ ಯೋಜನೆಯಡಿ ರೈಲು ಹಳಿ ಮಾರ್ಗ ನಿರ್ಮಿಸಲು ಮಂಜೂರಾತಿ ನೀಡಿರುವುದರಿಂದ ಅಭಿವೃದ್ಧಿಗೆ ಪೂರಕವಾಗಲಿದೆ. ವಿಕಾಸದ ಸಂಕಲ್ಪ ಹೊಂದಿದ ಪ್ರಧಾನಿ ಮೋದಿ, ಕರ್ನಾಟಕ,ತೆಲಂಗಾಣ, ಆಂಧ್ರಕ್ಕೆ ಪ್ರಯೋಜನವಾಗುವ ನೂತನ ಹಳಿ ನಿರ್ಮಾಣ ಕಾರ್ಯದಿಂದ ಈ ಭಾಗಕ್ಕೆ ದೊಡ್ಡ ಕೊಡುಗೆ ಯಾಗಲಿದೆ ಎಂದರು.

IN THE COURT OF HON'BLE ADDL CIVIL JUDGE AT MASKI
O.S. No 183/2024

Smt. Earamma and other
V/s
Tahsildar Maski and All concerns

CITATION

To,
All concerned,

That, the petitioners have instituted the above petition seeking to declare declaration to the effect that late Mahantesh S/o Mudukappa was deeded to be dead in law.

That, the General public are hereby summoned to appear before this court on **09-07-2026 at 11 A.M.** to file the objections if any to declare the said petitioners as the successor either in person or through authorized agent.

Failing which the matter will be heard and determined exparte.

Given under my hand and seal of this court 06-05-2026.

Maski
Date :

Sd/- **Chief Ministerial Officer**,
Civil Judge (Jr.D) & JMFC Court,
Sindhanur.

Sd/- **K. Jagadish**
Adv. for Plaintiff

CITATION
(on the application U/o V, Rule 20 R/W.sec. 151 of C.P.C)

IN THE COURT OF PRL. CIVIL JUDGE AT SINDHANUR
E.P.No. 13/2024

S.M. Chandrashekar died by his Lrs.
V/s
P.R. Pyati died by his Lrs.

To,
Jdr No.1(b)
Smt. Umabai Kulkarni (Daughter of P.R. Pyati) W/o Ranganatha Kulkarani, Age : 61 years, Occ : Household R/o Basaveshwara Colony, Lingasagur, Tq.: Lingasagur, Dist.: Raichur.

WHEREAS the above named D.hr and others have instituted this E.P. petition against the Jdrs for seeking the relief of possession residential property as per the judgment and decree in O.S. No. 137/2000 and in R.S.A. No. 7401/2010 of Hon'ble High court of Karnataka Circuit bench Kalaburgi order dtd: 22-06-2023. Thereafter the Dhr and others are filed E.P. petition and this Hon'ble court has issued several court cause notices and under Registered postal notices, but the said notices have not been received by you. Now the Dhr and others are taking steps to serve the cause notice upon you by way of paper publication to appear before this Hon'ble court to participate in E.P. proceedings.

WHEREAS you the Jdr No.1 (b) do hereby summoned to appear before this Hon'ble court on **09-06-2026 at 11.00 AM** either in person or through your advocate to answer al the material questions pertain to this case. If not the matter will be heard and determined in your absence.

Given under my hand and seal of this court.

Sindhanur
Date : 04-05-2026

By order of the Court
Sd/- **Chief Ministerial Officer**,
Pri. Civil Judge & J.M.F.C. Court,
Sindhanur.

Through
Adv. for Dhr.
Sd/- **N. Ramanagouda**
Advocate, Sindhanur.

ಕರ್ನಾಟಕ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ, ಕಲಬುರಗಿ
ಎಂ.ಎಫ್.ಎ ನಂ.: 200530/2022

ವಿಭಾಗೀಯ ವ್ಯವಸ್ಥಾಪಕರು
ಟಾಟಾ ಎಐಜಿ ಜನರಲ್ ಇನ್ಸುರೆನ್ಸ್ ಕಂ.
ಲಿಮಿಟೆಡ್. ಪಾಲಿಸಿ ಹೋಲ್ಡರ್ ಸರ್ವಿಸಸ್,
ಪೋಸ್ಟ್ ಬಾಕ್ಸ್ ನಂ. 9407, ಚಕಲಾ,
ಎಂಐಡಿಸಿ ಅಂಚೆ ಕಛೇರಿ, ಮುಂಬೈ-400093.
Now represented by Duly Constituted Attorney Bangalore.
ಮೇಲ್ಮನವಿದಾರರು
ಶ್ರೀ/ಶ್ರೀಮತಿ. ಎಸ್.ಎಸ್. ಅಸ್‌ಪಲ್ಲಿ,ವಕೀಲರು.
ವಿರುದ್ಧ
ರಾಜೇಶ್ವರಿ ಗಂ. ಗುರುಲಿಂಗಪ್ಪ ನಗನ್‌ರ.
ವಯಸ್ಸು: 38 ವರ್ಷ, ಉ: ಮನೆಯವರು,
ವಸತಿ: ಹುಡಗಿ ಹಳ್ಳಿ, ತಾ: ಹುಮನಾಬಾದ್, ಜಿ: ಬೀದರ್-585401 ಮತ್ತು ಇತರರು.
ಇವರಿಗೆ: ಪ್ರತಿವಾದಿ:
1. ರಾಜೇಶ್ವರಿ ಗಂ. ಗುರುಲಿಂಗಪ್ಪ ನಗರ,
ವಯಸ್ಸು: 38 ವರ್ಷ, ಉ: ಮನೆಯವರು,
ವಸತಿ: ಹುಡಗಿ ಹಳ್ಳಿ, ತಾ: ಹುಮನಾಬಾದ್, ಜಿ: ಬೀದರ್-585401
(ಪ್ರತಿವಾದಿ2 ಮತ್ತು ಪ್ರತಿವಾದಿ 3 ಪ್ರತಿವಾದಿತ 1ರ ಆರೈಕೆಯಲ್ಲಿರುವ ಅಪ್ರಾಪ್ತ ವಯಸ್ಕರು)
4. ಶಂಕರಮ್ಮ ಗಂ. ಚಂದ್ರಶೆಟ್ಟಿ ನಗರ,
ವಯಸ್ಸು: 62 ವರ್ಷ, ಉ ಮನೆಯವರು,
ವಸತಿ: ಹುಡಗಿ ಹಳ್ಳಿ, ತಾ: ಹುಮನಾಬಾದ್, ಜಿ: ಬೀದರ್-585401.
5. ಮೀರಜ್ ತಂ. ಆಜೀಜ್ ಮಿಯಾನ್,
ವಯಸ್ಸು: 48 ವರ್ಷ, ಉ: ಮನೆಯವರು,
ವಸತಿ: ಹುಡಗಿ ಹಳ್ಳಿ, ತಾ: ಹುಮನಾಬಾದ್, ಜಿ: ಬೀದರ್-585401

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂಎಸಿಟಿ, ಹುಮನಾಬಾದ್ ನ್ಯಾಯಾಲಯದಿಂದ ದಿನಾಂಕ: 07.10.2021 ರಂದು ಎಂ.ವಿ.ಸಿ ಸಂಖ್ಯೆ: 172/2017 ರಲ್ಲಿ ಹೊರಡಿಸಲಾದ ತೀರ್ಪು/ಅವಾರ್ಡ್/ಆದೇಶದ ವಿರುದ್ಧ ಮೇಲಿನ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.
ನೀವು ಮೇಲ್ಮನವಿಯನ್ನು ಪ್ರಶ್ನಿಸಲು ಬಯಸಿದರೆ, **ದಿನಾಂಕ: 10.06.2026 ರಂದು ಬೆಳಗ್ಗೆ 10.30 ಗಂಟೆಗೆ ಈ ನ್ಯಾಯಾಲಯದಲ್ಲಿ** ಖುದ್ದಾಗಿ ಅಥವಾ ಸೂಕ್ತವಾದ ಸೂಚನೆಗಳನ್ನು ಪಡೆದ ವಕೀಲರ ಮೂಲಕ ಅಥವಾ ಕಾನೂನಿನಿಂದ ನಿಮ್ಮ ಪರವಾಗಿ ಕಾರ್ಯನಿರ್ವಹಿಸಲು ಅಧಿಕಾರ ಪಡೆದ ಯಾರೊಬ್ಬರ ಮೂಲಕವಾಗಲಿ ಹಾಜರಾಗಬೇಕೆಂದು ಈ ಮೂಲಕ ಸೂಚನೆ ನೀಡಲಾಗಿದೆ. ನೀವು ಹಾಜರಾಗಲು ವಿಫಲರಾದರೆ ನಿಮ್ಮ ಅನುಪಸ್ಥಿತಿಯಲ್ಲಿ ಮೇಲ್ಮನವಿಯನ್ನು ಪರಿಗಣಿಸಿ, ವಿಚಾರಣೆ ನಡೆಸಿ ತೀರ್ಮಾನಿಸಲಾಗುವುದು.
ನನ್ನ ಸಹಿ ಮತ್ತು ಈ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 23.04.2026 ರಂದು ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಾಯಕ ವಿಲೇಖನಾಧಿಕಾರಿಗಳು

ಸುದ್ದಿ ಸಿಂಚನ

ದಿನಪತ್ರಿಕೆಗಳ ವಿಲೇವಾರಿಗೆ ದರಪಟ್ಟಿ ಆಹ್ವಾನ

ಯಾದಗಿರಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿರುವ 2025-26ನೇ ಸಾಲಿನ ಹಳೇ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳನ್ನು ವಿಲೇವಾರಿ ಮಾಡಲಾಗುತ್ತಿದ್ದು, ಅರ್ಹರಿಂದ ದರಪಟ್ಟಿ ಆಹ್ವಾನಿಸಲಾಗಿದೆ ಎಂದು ಹಿರಿಯ ಸಹಾಯಕ ನಿರ್ದೇಶಕರು ಸುಲೈಮಾನ ಡಿ.ನದಾಫ್ ತಿಳಿಸಿದ್ದಾರೆ. ದರಪಟ್ಟಿಯಲ್ಲಿ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಿಗೆ ಪ್ರತಿ ಕೆ.ಜಿ.ಗೆ ದರ ನಮೂದಿಸಿ ಸಲ್ಲಿಸಬೇಕು. ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿಟ್ಟು ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾಡಳಿತ ಭವನ, ''ಬಿ'' ಬ್ಲಾಕ್ ಮೊದಲನೇ ಮಹಡಿ, ಯಾದಗಿರಿ-585202 ಇಲ್ಲಿಗೆ 2026ರ ಮೇ 14 ರಂದು ಮಧ್ಯಾಹ್ನ 12 ಗಂಟೆ ಒಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕು, ಅವಧಿ ಮೀರಿ ಬಂದ ದರಪಟ್ಟಿಗಳನ್ನು ಪರಿಗಣಿಸುವುದಿಲ್ಲ. ಬಿಡ್ಡುದಾರರ ಸಮಕ್ಷಮದಲ್ಲಿ 2026ರ ಮೇ 1 4 ರಂದು ಮಧ್ಯಾಹ್ನ 12.30 ಗಂಟೆಗೆ ದರಪಟ್ಟಿ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಗೆ ಭೇಟಿ ನೀಡಿ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಸ್ಥಗಿತಗೊಂಡ ಸೌಹಾರ್ದ ಸಹಕಾರಿ ಸಮಾಪನೆ: ಆಕ್ಷೇಪಣೆಗೆ ಅರ್ಜಿ ಆಹ್ವಾನ

ಯಾದಗಿರಿ: 2026ರ ಮಾರ್ಚ್ 31ಕ್ಕೆ ಇದ್ದಂತೆ ಜಿಲ್ಲೆಯಲ್ಲಿ ಸ್ಥಗಿತಗೊಂಡ ಸೌಹಾರ್ದ ಸಹಕಾರಿ ಸಮಾಪನೆಗೆ ಸೂಚಿಸಿದ್ದು, ಆಕ್ಷೇಪಣೆಗೆ ಅರ್ಜಿಗೆ ಅವಕಾಶ ಕಲ್ಪಿಸಿದೆ ಎಂದು ಸಹಕಾರ ಸಂಘಗಳ ಉಪ ನಿಬಂಧಕ ಪವನಕುಮಾರ ಮೂಲಕ ತಿಳಿಸಿದ್ದಾರೆ. ಜಿಲ್ಲೆಯ ಸೌಹಾರ್ದ ಸಹಕಾರಿ ಸದಸ್ಯರ ಮತ್ತು ಸಾರ್ವಜನಿಕರಿಗೆ ಗಮನಕ್ಕೆ 2026ರ ಮಾರ್ಚ್ 31ಕ್ಕೆ ಇದ್ದಂತೆ ಚಂದ್ರಲಾ ಸ್ವಶಕ್ತಿ ಸೌಹಾರ್ದ ಸಹಕಾರಿ.ನಿ ಶಹಾಪೂರ, ಗ್ರಾಂಪ್ಕೋ ಇಂಟರ್‌ನ್ಯಾಷನಲ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ.ನಿ ಕೆಂಭಾವಿ, ಪ್ರಜ್ಞಾ ಸೌಹಾರ್ದ ಪತ್ತಿನ ಸಹಕಾರ.ನಿ ಯಾದಗಿರಿ ಒಟ್ಟು 3 ವಿವಿಧ ರೀತಿಯ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಅಡಿ ನೊಂದಣಿಗೊಂಡು ಸಂಘದ ಬೈಲಾ ರಿತ್ಯ ಕಾರ್ಯ ನಿರ್ವಹಿಸದೆ ಇರುವದರಿಂದ ಸ್ಥಗಿತಗೊಂಡಿರುತ್ತದೆ. ಈ ಸ್ಥಗಿತಗೊಂಡ ಸಹಕಾರಿಗಳನ್ನು ಸಮಾಪನೆ ಮಾಡಲು ಕ್ರಮವಿಡಲಾಗುತ್ತಿದೆ. ಈ ಬಗ್ಗೆ ತಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು ಯಾದಗಿರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ ಯಾದಗಿರಿ ಇಲ್ಲಿಗೆ ದಾಖಲಾತಿಗಳೊಂದಿಗೆ ಈ ಪ್ರಕಟಣೆ ಹೊರಡಿಸಿದೆ 15 ದಿನಗಳ ಒಳಗೆ ಸಲ್ಲಿಸಬೇಕು ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ಗೆಲವು: ಡಾ.ಕಾಮರಡ್ಡಿ ಹರ್ಷ

ಕಲಬುರಗಿ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯಲ್ಲಿ ಭರ್ಜರಿ ಜಯ ದಾಖಲಿಸಿರುವ ಕಾಂಗ್ರೆಸ್‌ನ ಉಮೇಶ್ ಮೇಟಿ ಹಾಗೂ ದಾವಣಗೆರೆ ವಿಧಾನಸಭಾ ಉಪಚುನಾವಣೆಯಲ್ಲಿ ಗೆಲವು ಸಾಧಿಸಿರುವ ಸಮರ್ಥ್ ಶಾಮನೂರು ಅವರಿಗೆ ಅಭಿನಂದಿಸಿರುವ ಕಾಂಗ್ರೆಸ್ ಮುಖಂಡ ಡಾ. ಎಸ್.ಬಿ.ಕಾಮರಡ್ಡಿ, ಸರ್ಕಾರದ ಪಂಚ ಗ್ಯಾರಂಟಿಗೆ ಜನರ ಅಭೂತಪೂರ್ವ ಬೆಂಬಲ ದೊರಕಿದೆ ಎಂಬುದನ್ನು ಈ ಫಲಿತಾಂಶಗಳು ಸಾಬೀತು ಮಾಡಿವೆ ಎಂದಿದ್ದಾರೆ. ಅಭಿವೃದ್ಧಿ ಮತ್ತು ಜನರ ಹಿತಕ್ಕಾಗಿ ನೀವು ತೋರಿದ ಶ್ರಮಕ್ಕೆ ಮತದಾರ ಪ್ರಭುಗಳು ಬೆಂಬಲ ನೀಡಿದ್ದಾರೆ. ನಿಮ್ಮ ನಾಯಕತ್ವದಲ್ಲಿ ಬಾಗಲಕೋಟೆ ಹಾಗೂ ದಾವಣಗೇರೆ ಕ್ಷೇತ್ರಗಳು ಮಾದರಿಯಾಗಿ ಬೆಳೆಯಲಿ. ಕಾಂಗ್ರೆಸ್ ಪಕ್ಷದ ಸಿದ್ಧಾಂತ ಹಾಗೂ ಜನಪರ ಯೋಜನೆಗಳಿಗೆ ಈ ಗೆಲುವು ಸಾಕ್ಷಿಯಾಗಿದೆ ಎಂದೂ ಡಾ. ಕಾಮರಡ್ಡಿ ಹೇಳಿದ್ದಾರೆ.



ಡಾ. ಶರಣಬಸಪ್ಪ ಕಾಮರೆಡ್ಡಿ

ಕಲಬುರಗಿ-ದಾಂಡೇಲಿ ಬಸ್ ಸಂಚಾರ ಆರಂಭ

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-1ರ ವ್ಯಾಪ್ತಿಯ ಕಲಬುರಗಿ ಘಟಕ-1ರಿಂದ ಕಲಬುರಗಿಯಿಂದ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಗೆ ಪ್ರೇಕ್ಷಣಿಯ ಸ್ಥಳಗಳ ವೀಕ್ಷಣೆಗಾಗಿ ಪ್ರಯಾಣಿಕರ ಅನುಕೂಲಕ್ಕಾಗಿ ಮೇ 1ರಿಂದ ಕಲಬುರಗಿ-ದಾಂಡೇಲಿ ನಾನ್ ಎಸಿ ಸ್ಲೀಪರ್ ಬಸ್ ಪ್ರಾರಂಭಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಅನುತ್ತೀರ್ಣ ವಿದ್ಯಾರ್ಥಿಗಳ ಬಗ್ಗೆಯೂ ನಿಗಾವಹಿಸಿ

ಶಾಸಕ ಚೆನ್ನಾರೆಡ್ಡಿ ಪಾಟೀಲ್ ಸಲಹೆ | ನೂರರಷ್ಟು ಫಲಿತಾಂಶ ತಂದ ಮುಖ್ಯ ಶಿಕ್ಷಕರಿಗೂ ಅಭಿನಂದನಾ ಸಮಾರಂಭ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಜಿಲ್ಲಾಡಳಿತ , ಜಿ.ಪಂ ಹಾಗೂ ಶಾಲಾ ಶಿಕ್ಷಣ ಇಲಾಖೆಯಿಂದ, 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ-1 ರಲ್ಲಿ ಪ್ರತಿಶತ ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರು ಹಾಗೂ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವನ್ನು ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ, ಈ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರಲ್ಲದೆ, ಅನುತ್ತೀರ್ಣ ವಿದ್ಯಾರ್ಥಿಗಳನ್ನು ಗುರುತಿಸಿ, ತರಬೇತಿಗೊಳಿಸಿ ಮುಂದೆ ಸಾಧನೆ ಮಾಡುವಂತೆ ಪ್ರೇರೇಪಿಸಲು ಹಾಗೂ ಮುಂದಿನ ವರ್ಷ ಜಿಲ್ಲೆಯಾದ್ಯಂತ ಶೇಕಡಾ ನೂರು ರಷ್ಟು ಫಲಿತಾಂಶ ತರಲು ಪ್ರಯತ್ನಿಸುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ಶಿಕ್ಷಕರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ಈ ವರ್ಷ ಜಿಲ್ಲೆಗೆ ಹರ್ಷ ತಂದಿದೆ. ನಾಲ್ವರು ಯುಪಿಎಸ್ಸಿ ಯಲ್ಲಿ ಯಶಸ್ವಿಯಾಗಿರುವುದು ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯ 86 ಶಾಲೆಗಳು ಶೇಕಡಾ ನೂರರಷ್ಟು ಫಲಿತಾಂಶ ತಂದಿರುವುದಕ್ಕೆ ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿ ಸಿಬ್ಬಂದಿ ತಂಡಕ್ಕೆ ಅಭಿನಂದಿಸಿದರು.





ಯಾದಗಿರಿ ಜಿಲ್ಲಾಡಳಿತ , ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ, 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ-1 ರಲ್ಲಿ ಪ್ರತಿಶತ ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರು ಹಾಗೂ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವನ್ನು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಬಾಲ್ಯ ವಿವಾಹದ ಶಿಕ್ಷೆ ಬೇಡ: ಸಿಇಒ ಲವೀಶ್

ಜಿ.ಪಂ ಸಿಇಒ ಲವೀಶ್ ಒರಡಿಯಾ, ಪರೀಕ್ಷೆಯಲ್ಲಿ ಶೇ 91.8 ರಷ್ಟು ಪಾಸಿಂಗ್ ಫಲಿತಾಂಶ ಬಂದಿದೆ. ಕಳೆದ ಬಾರಿ ಫಲಿತಾಂಶದಲ್ಲಿ ಕೊನೆಯಲ್ಲಿದ್ದ ಈ ಜಿಲ್ಲೆ ಈ ಬಾರಿ ರ್‍ಯಾಂಕಿಂಗ್ ಸ್ಥಾನದಲ್ಲಿ ಸುಧಾರಣೆ ಕಂಡಿದೆ. ಶಿಕ್ಷಣ ಸಚಿವರು ಸಹ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಡಿಡಿಪಿಐ ಚನ್ನಬಸಪ್ಪ ಮುಧೋಳ ಅವರ ಅವಿರತ ಪರಿಶ್ರಮದ ಬಗ್ಗೆ ಪ್ರಶಂಸಿಸಿದ ಅವರು, ಸಮಾಜದಲ್ಲಿ ಅನುತ್ತೀರ್ಣ ವಿದ್ಯಾರ್ಥಿನಿಯರಿಗೆ ಬಾಲ್ಯ ವಿವಾಹದಂತಹ ಶಿಕ್ಷೆ, ಅನೈತಿಕ ಚಟುವಟಿಕೆಗಳಲ್ಲಿ ತೊಡಗಲು ಕಾರಣ ವಾಗುವುದರಿಂದ, ಇಂತಹ ವಿದ್ಯಾರ್ಥಿಗಳ ಬಗ್ಗೆಯೂ ವಿಶೇಷ ನಿಗಾವಹಿಸಿ, ಅವರಿಗೆ ಪ್ರೋತ್ಸಾಹಿ ಸುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಶಿಕ್ಷಣ ಸಚಿವರು ಸಹ ಜಿಲ್ಲೆಯ ಸಾಧನೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದು, ಮುಂದಿನ ವರ್ಷಗಳಲ್ಲಿ ಎಲ್ಲ ಶಾಲೆಗಳಲ್ಲಿ ಪ್ರತಿಶತ ನೂರರಷ್ಟು ಫಲಿತಾಂಶ ತರಲು ಪ್ರಯತ್ನಿಸಬೇಕು ಎಂದು ಹೇಳಿದರು. ವಿದ್ಯಾರ್ಥಿಗಳು ಭವಿಷ್ಯತ್ತಿನ ಸವಾಲುಗಳನ್ನು ಮೆಟ್ಟಿ ನಿಲ್ಲುವ ದಿಸೆಯಲ್ಲಿ ಅವರನ್ನು ಸನ್ನದ್ಧಗೊಳಿಸಬೇಕು. ಉದ್ಯೋಗವನ್ನು ಸಕಾಲಕ್ಕೆ ಅವರು ಪಡೆಯಲು ಅನುಕೂಲವಾಗುವಂತೆ, ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಇಂದು ತಾಂತ್ರಿಕ ಕೌಶಲ್ಯ ಹೆಚ್ಚಿಸುವ ಕಾರ್ಯ ಪರಿಣಾಮಕಾರಿಯಾಗಿ ಆಗಬೇಕು. ಇಂಟರ್‌ನೆಟ್ ಕ್ರಾಂತಿಕಾರಿ ಮತ್ತು ಸದೃಢ ಟೂಲ್ ಆಗಿರುವುದರಿಂದ ಶಿಕ್ಷಕರು ತಮ್ಮನ್ನು ತಾವು ಅಪ್‌ಗ್ರೇಡ್ ಮಾಡಿಕೊಳ್ಳುವ ಜೊತೆಗೆ ಆಸಕ್ತ ವಿದ್ಯಾರ್ಥಿಗಳ ತಾಂತ್ರಿಕ ಕೌಶಲ್ಯತೆ ಹೆಚ್ಚಿಸಲು ಪ್ರಯತ್ನಿಸಬೇಕು. ಮೊಬೈಲ್, ಆ್ಯಪ್ ಮತ್ತು ಅಂತರ್ಜಾಲ ವ್ಯವಸ್ಥೆಗಳ ಸದ್ಬಳಕೆಗೆ ಅವರ ಕೌಶಲ್ಯತೆಗೆ ತಕ್ಕಂತೆ ಸಶಕ್ತಗೊಳಿಸಬೇಕು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಜಿಲ್ಲೆಯಲ್ಲಿ ಖಾಸಗಿ ಶಾಲೆಗಳ ಪ್ರಮಾಣ ಕಡಿಮೆ ಇದ್ದರೂ ವಿದ್ಯಾರ್ಥಿಗಳು ಅಭೂತಪೂರ್ವ ಸಾಧನೆ ಮಾಡಿದ್ದಾರೆ. ಜಿಲ್ಲೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ಅವರ ಭವಿಷ್ಯ ರೂಪಿಸುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ ಕೆಂಭಾವಿ ಮಾತನಾಡಿದರು.

ಡಿಡಿಪಿಐ ಚೆನ್ನಬಸಪ್ಪ ಮುಧೋಳ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಚನ್ನಬಸಪ್ಪ ಉಪಸ್ಥಿತರಿದ್ದರು. ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ಶೇಕಡಾ ನೂರರಷ್ಟು ಫಲಿತಾಂಶ ತಂದ ಮುಖ್ಯ ಶಿಕ್ಷಕರಿಗೆ, ಅತಿಥಿ ಶಿಕ್ಷಕರಿಗೆ ಸನ್ಮಾನಿಸಲಾಯಿತು.

ಜಿಲ್ಲಾ ನೋಡಲ್ ಅಧಿಕಾರಿ ಹನುಮಂತ ಅವರು ಸ್ವಾಗತಿಸಿದರು, ಕಿಶನ್ ಪವಾರ್ ಕಾರ್ಯಕ್ರಮ ನಿರೂಪಿಸಿದರು, ಸಂಗೀತಾ ಪ್ರಾರ್ಥಿಸಿದರು.

ಮೇ 10ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಸಹಾಯಕ ಆಯುಕ್ತ ಶ್ರೀಧರ್ ಗೋಟೂರ್ ಅಧ್ಯಕ್ಷತೆಯ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ನಿರ್ಣಯ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಇದೇ ಮೇ 10 ರಂದು ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿಯನ್ನು ಅರ್ಥ ಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಹಾಯಕ ಆಯುಕ್ತ ಶ್ರೀಧರ್ ಗೋಟೂರ್ ಅವರ ಅಧ್ಯಕ್ಷತೆಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸುವ ಕುರಿತು ನಡೆದ ಪೂರ್ವ ಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಅಂದು ನಗರದ ಸರ್ಕಾರಿ ಪದವಿ ಮಹಾ ವಿದ್ಯಾಲಯದ ಸಭಾಂಗಣ ದಲ್ಲಿ ಬೆಳಿಗ್ಗೆ 11 ಗಂಟೆಗೆ ಈ ಜಯಂತಿ ಆಯೋಜಿಸಲು, ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಲು, ನಿರ್ಧರಿಸಲಾಯಿತು.



ಮೇ 10 ರಂದು ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಆಚರಿಸುವ ಕುರಿತು, ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಹಾಯಕ ಆಯುಕ್ತ ಶ್ರೀಧರ್‌ಗೋಟೂರ್ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು.

ಅದರಂತೆ ವೇದಿಕೆ, ಆಸನದ ವ್ಯವಸ್ಥೆ, ಶಿಷ್ಟಾಚಾರದಂತೆ ಗಣ್ಯರನ್ನು, ನುರಿತ ಉಪನ್ಯಾಸಕರನ್ನು ಆಹ್ವಾನಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಹಾಯಕ ಆಯುಕ್ತ ಶ್ರೀಧರ್‌ಗೋಟೂರ್ ಅವರು, ಕಾರ್ಯಕ್ರಮದ ಸಂದರ್ಭದಲ್ಲಿ, ಸೂಕ್ತ ಪೊಲೀಸ್ ಬಂದೋಬಸ್ತ್, ವೇದಿಕೆ ಸಿದ್ಧತೆ ನೋಡಿಕೊಳ್ಳಲು, ಸಂಬಂಧಿಸಿದ ಅಧಿಕಾರಿ ಗಳಿಗೆ ಸೂಚಿಸಿ, ಆಮಂತ್ರಣ ಪತ್ರಿಕೆ ವಿತರಿ ಸುವ ವ್ಯವಸ್ಥೆ ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ತಾಲೂಕ ಮಟ್ಟದಲ್ಲಿ ಶಾಲಾ, ಕಾಲೇಜು, ಗ್ರಾಮ ಪಂಚಾಯಿತಿ, ವಿವಿಧ ಕಚೇರಿಗಳಲ್ಲಿ ಈ ಜಯಂತಿ ಆಚರಣೆ, ಮುಖ್ಯ ಕಾರ್ಯಕ್ರಮಕ್ಕೆ, ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರಿಗೆ ಸನ್ಮಾನಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಮಾಜದ ಮೂಲಕ ಹಮ್ಮಿಕೊಳ್ಳಲಾಗುವ ಮೆರವಣಿಗೆ ಕಾರ್ಯಕ್ರಮದ ಬಗ್ಗೆ ಮುಂಚಿತವಾಗಿ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಲು ಸೂಚಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರ ದೇವಿ ಮಠಪತಿ ಸ್ವಾಗತಿಸಿದರು. ಸಾಮಾಜದ ಮುಖಂಡರಾದ ಅಮ್ಮಣಗೌಡ ಅನಸೂಗೂರ, ಮಲ್ಲಿಕಾರ್ಜುನ ತಳಕ್, ರುದ್ರಗೌಡ ಗುರುಸುಣಿಗಿ, ಚೆನ್ನಾರೆಡ್ಡಿಗೌಡ ಪಾಟೀಲ್, ಮಲ್ಲಣಗೌಡ, ಅಮರೇಶ್ ಬಿಲ್ಹಾರ್, ವಿಶ್ವನಾಥ ರೆಡ್ಡಿ ಅಬ್ಬೆತುಮಕೂರು, ಮಲ್ಲಿಕಾರ್ಜುನ ರೆಡ್ಡಿ ಇತರರು ಉಪಸ್ಥಿತರಿದ್ದರು.

ನಾಳೆ ರಾಜ್ಯಮಟ್ಟದ 4ನೇ ಬೃಹತ್ ರೈತ ಜಾಗೃತಿ ಸಮಾವೇಶ: ನಗನೂರ

• **ಕನ್ನಡಪ್ರಭ ವಾರ್ತೆ** ಹುಣಸಗಿ

ಕರ್ನಾಟಕ ರಾಜ್ಯ ರೈತ ಹಾಗೂ ಹಸಿರು ಸೇನೆ ವತಿಯಿಂದ 4ನೇ ರಾಜ್ಯ ಮಟ್ಟದ ಬೃಹತ್ ರೈತ ಜಾಗೃತಿ ಸಮಾವೇಶ ವಿಜಯಪುರದಲ್ಲಿ ಮೇ 8 ರಂದು ಹಮ್ಮಿಕೊಳ್ಳಲಾಗಿದೆ ಎಂದು ಹುಣಸಗಿ ತಾಲೂಕು ಅಧ್ಯಕ್ಷ ಮಲ್ಲನಗೌಡ ನಗನೂರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಮಲ್ಲನಗೌಡ ನಗನೂರು

ಈ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತ ಸಾಧಕರಿಗೆ ನೇಗಿಲಯೋಗಿ ಪ್ರಶಸ್ತಿ, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ರಾಷ್ಟ್ರೀಯ ಸಮಾಜ ಸೇವೆ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭದ ಜೊತೆಗೆ ವಿವಿ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಲಾಗುವದು.

ಆಲಮಟ್ಟಿಯ ಲಾಲ್ ಬಹದ್ದೂರ ಶಾಸ್ತ್ರಿ ಆಣೆಕಟ್ಟು 524.256 ಮೀಟರ್ ಎತ್ತರಿಸಿ ಅದಕ್ಕೆ ಬೇಕಾಗುವ ಸಂಪೂರ್ಣ ಭೂ ಪರಿಹಾರ, ಪುನರ್ವಸತಿ ಕಲ್ಪಿಸಿ ಏಳು ಜಿಲ್ಲೆಗಳಿಗೆ ಸಮಗ್ರ ನೀರಾವರಿ ಮಾಡುವದು. ಆಲಮಟ್ಟಿಯ ನೀರಾವರಿ ಯೋಜನೆಗೆ ಮುಳಗಡೆಗೆ ಗುರುತಿಸಿರುವ ಜಮೀನಿಗಿಂತ ಹೆಚ್ಚು ಭೂಮಿಯನ್ನು ಕಳೆದುಕೊಂಡ ರೈತರಿಗೆ ಇಲ್ಲಿಯವರೆಗೆ ಪರಿಹಾರ ನೀಡಿಲ್ಲ. ಕೂಡಲೇ ಮಂಜೂರು ಮಾಡಬೇಕು. ರಾಜ್ಯದಲ್ಲಿ ಅತಿಹೆಚ್ಚು ಬೆಳೆಯುವ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ಬೆಂಬಲ ಬೆಲೆಯೊಂದಿಗೆ ಖರೀದಿಸಬೇಕು.

ರಾಜ್ಯದಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಕಳಪೆ ಗುಣಮಟ್ಟದ ಹಾಗೂ ಅನಧಿಕೃತ ಬೀಜ ಗೊಬ್ಬರ, ಕಿಟನಾಶಕಗಳ ಮಾರಾಟ ರೈತರಿಗೆ ಹಗಲು 12 ಗಂಟೆ ತ್ರೀಫೇಸ್ ಹಾಗೂ ರಾತ್ರಿ ಸಿಂಗಲ್ ಫೇಸ್ ಉಚಿತ ವಿದ್ಯುತ್ ನೀಡಬೇಕು. 60 ವರ್ಷ ಮೇಲ್ಪಟ್ಟ ಹಿರಿಯ ರೈತರಿಗೆ ಮಾಸಿಕ 10 ಸಾವಿರ ರೂ. ಪಿಂಚಣಿ ನೀಡಬೇಕು ಎಂದು ಅವರು ತಿಳಿಸಿದರು.

ಕೇಂದ್ರ ಸರ್ಕಾರವು ತಂದಿರುವ ಕರಾಳ ಕೃಷಿ ಕಾಯ್ದೆ ಭೂಸುಧಾರಣಾ ಕಾಯ್ದೆ ಎಪಿಎಂಸಿ ಕಾಯ್ದೆಯನ್ನು ರಾಜ್ಯ ಸರ್ಕಾರ ರದ್ದು ಪಡಿಸಬೇಕು. ಪ್ರತಿ ತಾಲೂಕಿನಲ್ಲಿ ಸುಸಜ್ಜಿತವಾದ ರೈತಭವನ ನಿರ್ಮಾಣ ಸೇರಿದಂತೆ ಇನ್ನಿತರ ಬೇಡಿಕೆಯನ್ನು ಈಡೇರಿಸಲು ಈ ಸಮಾರಂಭದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗುವದು ಎಂದು ಅವರು ತಿಳಿಸಿದ್ದಾರೆ.



ಕಲಬುರಗಿ ಹೊರವಲಯ ಅಜಾದ್ಪುರ್ 33 ಕೆವಿ ಸ್ಟೇಷನ್‌ನಲ್ಲಿ ಸಂಭವಿಸಿದ ವಿದ್ಯುತ್ ಅವಘಡದಲ್ಲಿ ಕೈ ಕಳೆದುಕೊಂಡಿರುವ ಕಡಗಂಚಿಯ ನಿವಾಸಿ ಸದಾಶಿವ ಸಿದ್ದರೂಢ ಅವರಿಗೆ ಶಾಸಕ ಅಲ್ಲಮಪ್ರಭು ಪಾಟೀಲ್, ಡಿಸಿ ಫೌಜಿಯಾ ತರನ್ನುಮ್ ಅವರು ಮುಖ್ಯ ಮಂತ್ರಿಗಳ ಪರಿಹಾರದ 2 ಲಕ್ಷ ರೂಪಾಯಿ ಚೆಕ್ ವಿತರಿಸಿದರು.

ಪಂಚ ರಾಜ್ಯ ಚುನಾವಣಾ ಫಲಿತಾಂಶ: ಬಿಜೆಪಿ ವಿಜಯೋತ್ಸವ

ಸುರಪುರ ಮಹಾತ್ಮಾಗಾಂಧಿ ವೃತ್ತದಲ್ಲಿ ಬಿಜೆಪಿ ತಾಲೂಕು ಘಟಕದಿಂದ ಗೆಲುವಿನ ಸಂಭ್ರಮಾಚರಣೆ

• **ಕನ್ನಡಪ್ರಭ ವಾರ್ತೆ** ಸುರಪುರ

ಪಂಚರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶಗಳಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಗೆಲವು ಸಾಧಿಸಿದ ಹಿನ್ನಲೆಯಲ್ಲಿ, ನಗರದ ಮಹಾತ್ಮಾಗಾಂಧಿ ವೃತ್ತದಲ್ಲಿ ಬಿಜೆಪಿ ತಾಲೂಕುಘಟಕದಿಂದ ಸಂಭ್ರಮಾಚರಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಕಾರ್ಯಕರ್ತರು ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪಟಾಕಿ ಸಿಡಿಸಿ ಹಾಗೂ ಪರಸ್ಪರ ಸಿಹಿ ಹಂಚಿಕೊಂಡು ಸಂತಸ ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಪರವಾಗಿ ಜಯಕಾರಗಳನ್ನು ಕೂಗಿದರು. ಬಳಿಕ ಮಾತನಾಡಿದ ಬಿಜೆಪಿಯ ಮುಖಂಡರು, ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಆಡಳಿತಕ್ಕೆ ಜನತೆ ಮೆಚ್ಚುಗೆ ವ್ಯಕ್ತಪಡಿಸಿ ಬಿಜೆಪಿಗೆ ಆಶೀರ್ವಾದ ನೀಡಿದ್ದಾರೆ ಎಂದು ಹೇಳಿದರು.



ಇದೇ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿಯೂ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿ ದರು.

ಈ ಸಂಭ್ರಮಾಚರಣೆಯಲ್ಲಿ ಸುರಪುರ ಬಿಜೆಪಿ ಮಂಡಲ ಅಧ್ಯಕ್ಷ ವೇಣುಮಾಧವ ನಾಯಕ ಮುಖಂಡರುಗಳಾದ ಶಂಕರನಾಯಕ, ಶ್ರೀನಿವಾಸ ನಾಯಕ ದರಬಾರಿ, ಶರಣುನಾಯಕ, ವೆಂಕಟೇಶ ನಾಯಕ ಬೈರಮಡ್ಡಿ, ಈಶ್ವರನಾಯಕ, ಪಾರಪ್ಪ ಗುತ್ತೇದಾರ, ರಾಜಾ ರಂಗಪ್ಪ ನಾಯಕ, ರಾಜಾ ಜಯರಾಮ ನಾಯಕ, ಭೀಮಣ್ಣ ಬೇವಿನಾಳ, ಜಗದೀಶ ಪಾಟೀಲ ಸೂಗೂರು, ದೇವಿಂದ್ರ ದೊರೆ, ಸಂಗನಗೌಡ, ವಿಜಯಕುಮಾರ ಚಿಟ್ಟಿ, ಚಂದ್ರಶೇಖರ ಮಡಿವಾಳ, ಅಂಬ್ರೇಶ್ ಡೊಣ್ಣೆಗೇರಿ, ಶರಣು ತಿಮ್ಮಾಪುರ, ಮಲ್ಲು ವಿಷ್ಣುಸೇನಾ, ಚಂದ್ರು ಎಲಿಗಾರ ಸೇರಿದಂತೆ ಇತರರು ಇದ್ದರು.

ಮೇ, ಜೂನ್ ತಿಂಗಳ ಆಹಾರಧಾನ್ಯ ಬಿಡುಗಡೆ: ಡಿಸಿ ಹರ್ಷಲ್ ಬೋಯರ್

ಯಾದಗಿರಿ: ಕೇಂದ್ರ ಸರ್ಕಾರವು ದೇಶದಲ್ಲಿ ಮುಂಬರುವ ಖರೀದಿ ಋತುವಿನ ಹಿನ್ನಲೆ, ಪರಿಣಾಮಕಾರಿ ಲಾಜಿಸ್ಟಿಕ್ಸ್ ಮತ್ತು ಸಂಗ್ರಹಣೆಗಾಗಿ ರಾಜ್ಯಗಳು ಎದುರಿಸುತ್ತಿರುವ ಅಡಚಣೆಗೆ ಎನ್‌ಎಫ್‌ಎಸ್‌ಎ ಅಡಿ ಮೇ, ಜೂನ್ ತಿಂಗಳುಗಳವರೆಗಿನ ಆಹಾರಧಾನ್ಯ ಹಂಚಿಕೆ ಮುಂಗಡವಾಗಿ ಎತ್ತುವಳಿ ಮಾಡಿ, ಕೂಡಲೇ ವಿತರಿಸುವಂತೆ ರಾಜ್ಯಗಳಿಗೆ ಸೂಚಿಸಲಾಗಿದೆ. ಮೇ, ಜೂನ್ ಎರಡು ತಿಂಗಳ ಹಂಚಿಕೆಯನ್ನು ಮೇ ತಿಂಗಳಲ್ಲಿ ವಿತರಿಸಲು ಸರ್ಕಾರವು ನಿರ್ದೇಶನ ನೀಡಿದೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ತಿಳಿಸಿದ್ದಾರೆ. ಜಿಲ್ಲೆಯ ಪ್ರತಿ ಅಂತ್ಯೋದಯ (ಎಎವೈ) ಪಡಿತರ ಚೀಟಿಗೆ 70 ಕೆ.ಜಿ (ಮೇ 35 ಜೂನ್ 35) ಅಕ್ಕಿ ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 10 ಕೆ.ಜಿ (ಮೇ 5 ಜೂನ್ 5) ಉಚಿತವಾಗಿ ವಿತರಿಸಲಾಗುತ್ತದೆ. ವಿತರಣಾ ಸಂದರ್ಭದಲ್ಲಿ ಪ್ರತಿ ತಿಂಗಳ ವಿತರಣೆಗೆ ಫಲಾನುಭವಿಗಳಿಂದ ಪ್ರತ್ಯೇಕ ಬಯೋಮೆಟ್ರಿಕ್ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಪಡಿತರ ಚೀಟಿ ಫಲಾನುಭವಿಗಳು ಎರಡು ಬಾರಿ ಬಯೋ ಮೆಟ್ರಿಕ್ ನೀಡಿ ಆಹಾರಧಾನ್ಯ ಪಡೆಯಲು ಜಿಲ್ಲೆಯ ಎಲ್ಲ ಪಡಿತರ ಚೀಟಿದಾರರಿಗೆ ತಿಳಿಸಿದೆ. ರಾಜ್ಯ ಸರ್ಕಾರದ ಮಹತ್ವ ಯೋಜನೆಯಾದ ಅನ್ನಭಾಗ್ಯ ಯೋಜನೆಯಡಿ ರಾಜ್ಯ ಸರ್ಕಾರದ ವತಿಯಿಂದ ವಿತರಿಸಲಾಗುತ್ತಿರುವ ಹೆಚ್ಚುವರಿ 5ಕೆ.ಜಿ ಆಹಾರಧಾನ್ಯವನ್ನು ಮೇ ಮತ್ತು ಜೂನ್ ಮಾಹೆಗಳ ಆಹಾರಧಾನ್ಯವನ್ನು ಆದ್ಯತಾ ಮತ್ತು ಅಂತ್ಯೋದಯ ಪಡಿತರ ಚೀಟಿಯ ಫಲಾನುಭವಿಗಳಿಗೆ ಈಗಾಗಲೇ ವಿತರಿಸುವ ರೀತಿಯಲ್ಲಿ ಜೂನ್ ಮಾಹೆಯಲ್ಲಿ ಎತ್ತುವಳಿ ಮಾಡಿ ವಿತರಿಸಲು ಸರ್ಕಾರವು ನಿರ್ದೇಶಿಸಿದೆ.

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ

ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಸರ್ಕಾವಸ್ ಮಾಹಿತಿ



• **ಕನ್ನಡಪ್ರಭ ವಾರ್ತೆ** ಸುರಪುರ

ಹೇಮರೆಡ್ಡಿ ಮಲ್ಲಮ್ಮನವರ ಜಯಂತಿಯನ್ನು ಮೇ 10ರಂದು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ತಹಸೀಲ್ದಾರ್ ಹೆಚ್.ಎ.ಸರ್ಕಾವಸ್ ತಿಳಿಸಿದ್ದಾರೆ.

ತಾಲೂಕು ಆಡಳಿತ ಸೌಧದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಹೇಮರೆಡ್ಡಿ ಮಲ್ಲಮ್ಮನವರ ತತ್ವ, ಕಾರ್ಯಗಳು ಸಮಾಜಕ್ಕೆ ಅತ್ಯಂತ ಅಗತ್ಯ. ಮೇ 10ರಂದು ಭಾನುವಾರ ಬಂದಿದ್ದರೂ, ಅದನ್ನು ರಜೆ ಎಂದು ಪರಿಗಣಿಸದೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಅಂದು ಬೆಳಿಗ್ಗೆ 9ಕ್ಕೆ ಎಲ್ಲ ಸರ್ಕಾರಿ ಕಚೇರಿ, ಶಾಲಾ, ಕಾಲೇಜು, ಅಂಗನವಾಡಿ ಕೇಂದ್ರ, ಗ್ರಾ.ಪಂ, ವಸತಿ ನಿಲಯಗಳಲ್ಲಿ ಕಡ್ಡಾಯವಾಗಿ ಆಚರಿಸಲು ಸೂಚಿಸಲಾಗಿದೆ.

ತಾಲೂಕು ಆಡಳಿತದಿಂದ ತಹಸೀಲ್ದಾರ್‌ಕಚೇರಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪೂಜೆ, ಪುಷ್ಪಾರ್ಚನೆ ಮೂಲಕ ಗೌರವ ಸಲ್ಲಿಸಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಕಡ್ಡಾಯ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.ಈ ನಿಮಿತ್ತ ವೇದಿಕೆ, ಆಸನ ವ್ಯವಸ್ಥೆ, ಗಣ್ಯರು ಹಾಗೂ ಉಪನ್ಯಾಸಕರ ಆಹ್ವಾನ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲು ತೀರ್ಮಾನಿಸಲಾಗಿದೆ.

ಮುಖಂಡರು ಮಾತನಾಡಿ, ಸರ್ಕಾರಿ ಜಾಗದಲ್ಲಿ ಹೇಮರೆಡ್ಡಿ ಮಲ್ಲಮ್ಮ ವೃತ್ತ ನಿರ್ಮಾಣಕ್ಕೆ ಅನುಕೂಲ ಕಲ್ಪಿಸುವಂತೆ ತಹಸೀಲ್ದಾರ್‌ಗೆ ಮನವಿ ಮಾಡಿದರು. ಇದಕ್ಕೆ ತಹಸೀಲ್ದಾರ್ ಹೆಚ್.ಎ.ಸರಕಾವಸ್, ನಿಯಮಾನುಸಾರ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಸಭೆಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ. ರಾಜಾ ವೆಂಕಪ್ಪನಾಯಕ, ಯಲ್ಲಪ್ಪ ಹುಲಿಕಲ್, ಶರಣಪ್ಪ, ರಾಜ, ರಾಜೇಂದ್ರ ಬಿ. ವಗ್ಗಿನ್, ಸೋಮರಾಯ, ಬಾಲರಾಜ್ ಚಂದುಕರ್, ವಿಜಯಕುಮಾರ ಜೋಕಿ, ಪ್ರತೀಮಾ, ನಿಂಗಣ್ಣ ಬುಡ್ಡ, ಆನಂದ ಎಂಟಮನ, ಪ್ರಕಾಶ್, ಮಲ್ಲಿಕಾರ್ಜುನ ರೆಡ್ಡಿ, ಮಲ್ಲು ಬಾದ್ಯಾಪುರ, ಲಕ್ಷ್ಮೀಕಾಂತ ರೆಡ್ಡಿ ಹವಾಲ್ದಾರ್, ಮಲ್ಲರೆಡ್ಡಿ ಕಮತಗಿ, ಹುಲಿಗೆಮ್ಮ, ಅಶೋಕ, ಪ್ರದೀಪ್ ಕುಮಾರ್ ಇದ್ದರು.

ಅಡಿಗಲ್ಲು ಸಮಾರಂಭ | ₹2 ಕೋಟಿ ವೆಚ್ಚದಲ್ಲಿ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು ಅಡಿಗಲ್ಲು

ಗುಣಮಟ್ಟದ ರಸ್ತೆ ಕಾಮಗಾರಿ ಕೈಗೊಳ್ಳಿ: ಶಾಸಕ ತುನ್ನೂರು

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಮತಕ್ಷೇತ್ರದಲ್ಲಿ ಯಾವುದೇ ಇಲಾಖೆಯಿಂದ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಗುಣಮಟ್ಟದಿಂದ ಕೆಲಸ ಮಾಡಿದಾಗ ಮಾತ್ರ ಅದು ಹಲವಾರು ವರ್ಷಗಳ ಕಾಲ ಜನರಿಗೆ ಅನುಕೂಲವಾಗುತ್ತದೆ ಎಂದು ಶಾಸಕ ಚೆನ್ನಾರಡ್ಡಿ ಪಾಟೀಲ್ ತುನ್ನೂರ ಸೂಚಿಸಿದರು.

ವಡಗೇರಾ ತಾಲೂಕಿನ ಗುರಸುಣಗಿ ಗ್ರಾಮದ ಆರಾಧ್ಯ ದೈವನಾದ ಸಿದ್ದಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ಲೋಕೋಪಯೋಗಿ ಇಲಾಖೆಯಿಂದ ದೇವಸ್ಥಾನದಿಂದ ಮುಖ್ಯ ರಸ್ತೆ ಯವರೆಗೆ ₹2 ಕೋಟಿ ವೆಚ್ಚದಲ್ಲಿ ಸಿಮೆಂಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದರು.

ನನ್ನ ಮತಕ್ಷೇತ್ರದಲ್ಲಿಯೇ ಈ ದೇವಸ್ಥಾನಕ್ಕೆ ಸಾವಿರಾರು ವರ್ಷಗಳ ಭವ್ಯ ಇತಿಹಾಸವಿದೆ, ಈ ಸ್ಥಳದಲ್ಲಿ ಹಲವಾರು ಮಠಾಧೀಶರು ಶ್ರಾವಣ ಮಾಸದಲ್ಲಿ ಅನುಷ್ಠಾನ ಕೈಗೊಂಡು ಆಧ್ಯಾತ್ಮಿಕ ಶಕ್ತಿ ಪಡೆದಿದ್ದಾರೆ, ಇದು ಭಾವೈಕ್ಯತೆಯ ಕ್ಷೇತ್ರವಾಗಿದೆ. ಈ ಕ್ಷೇತ್ರಕ್ಕೆ ಹಿಂದೂಗಳು ಹಾಗೂ ಮುಸ್ಲಿಮರು ಸಹಸ್ರಾರು ಸಂಖ್ಯೆಯಲ್ಲಿ ಭೇಟಿ ನೀಡಿ, ಬೆಟ್ಟದ ಮೇಲಿರುವ ಸಿದ್ದಲಿಂಗೇಶ್ವರ ಹಾಗೂ ಕೆಳಗಿರುವ ಸೂಫಿ ಸಂತ ಚಂದಾ ಹುಸೇನಿ ದರ್ಗಾ ದರ್ಶನ ಪಡೆದು ಪುನೀತರಾಗುತ್ತಾರೆ ಎಂದು ತಿಳಿಸಿದರು.



ವಡಗೇರಾದಲ್ಲಿ ₹2 ಕೋಟಿ ವೆಚ್ಚದಲ್ಲಿ ಸಿಮೆಂಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು ಅಡಿಗಲ್ಲು ನೆರವೇರಿಸಿದರು.

ಈ ಸ್ಥಳ ಹಸಿರು ಬೆಟ್ಟಗಳ ಮಧ್ಯ ಇರುವುದರಿಂದ ನಾನಾ ಭಾಗಗಳಿಂದ ಭಕ್ತರು ಹಾಗೂ ಪ್ರವಾಸಿಗರು, ವಿದ್ಯಾರ್ಥಿಗಳು ಆಗಮಿಸಿ, ಕೆಲ ಕಾಲ ತಂಗಿ, ನಿಸರ್ಗದ ಸೌಂದರ್ಯ ಸವಿದು, ದೇವರ ದರ್ಶನ ಪಡೆದು ತೆರಳುತ್ತಾರೆ, ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ನಾನು ಹಂತ-ಹಂತವಾಗಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿ, ನಿಮ್ಮೆಲ್ಲರ ಸಹಕಾರದಿಂದ ಹೊಸ ಕಾಯಕಲ್ಪ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಜನರಿಗೆ ನೀಡಿದ ಭರವಸೆಯಂತೆ ಪಂಚ ಗ್ಯಾರಂಟಿಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಮೂಲಕ ಅದರ ಲಾಭ ಎಲ್ಲಾ ವರ್ಗದ ಜನರಿಗೆ ತಲುಪಿವೆ, ಅಲ್ಲದೇ ಅಭಿವೃದ್ಧಿಗೆ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಸಾಕಷ್ಟು ಅನುದಾನ ನೀಡುತ್ತಿದ್ದಾರೆ, ಈಗಾಗಲೇ ನಗರದಲ್ಲಿ ಜನರ ಬೇಡಿಕೆಯಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ, ಬರುವ ದಿನಗಳಲ್ಲಿ ಮತಕ್ಷೇತ್ರದ ಎಲ್ಲಾ ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಜನರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ದೇವಸ್ಥಾನದ ಕಾರ್ಯದರ್ಶಿ ಮಲ್ಲಿಕಾರ್ಜುನಸ್ವಾಮಿ ಹೊಸಮಠ ಮಾತ ನಾಡಿ, ಈ ದೇವಸ್ಥಾನಕ್ಕೆ ಭಕ್ತರೇ ನಿಜವಾದ ಆಸ್ತಿಯಾಗಿದ್ದಾರೆ, ದೇವಸ್ಥಾನದ ರಕ್ಷಣೆಗೆ ತಡೆಗೋಡೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ, ಆ ಕಾಮಗಾರಿ ಮಳೆಗಾಲದೊಳಗೆ ಮುಗಿಸಲು ಶಾಸಕರು ಅನುದಾನ ನೀಡಬೇಕೆಂದು ತಿಳಿಸಿ, ಹಲವಾರು ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದರು.

ಲೋಕೋಪಯೋಗಿ ಇಂಜಿನಿಯರ್ ರಮೇಶ ರಾಠೋಡ ಮಾತನಾಡಿ, ಕಾಮಗಾರಿ ಮಾಹಿತಿ ನೀಡಿದರು.

ವೇದಿಕೆ ಮೇಲೆ ಸಿದ್ದಣ್ಣಗೌಡ ಹಿರೇಗೌಡ, ಶರಣಭೂಪಾಲರಡ್ಡಿ, ಮಲ್ಲಿಕಾರ್ಜುನರಡ್ಡಿ ಗೋಸ್ವಾಮಿ ನಾಯ್ಕಲ್, ಬಸರಾಜಪ್ಪಗೌಡ ಶಾಂತವೀರ, ಖಾಜಾಮೈನುದ್ದೀನ್ ಮಿರ್ಚಿ ನಾಯ್ಕಲ್, ಶಿವರಾಜಪ್ಪಗೌಡ, ಗುತ್ತಿಗೆದಾರ ಶಿವಬಸವರಡ್ಡಿ ನಾಯ್ಕಲ್, ಲೋಕೋಪಯೋಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸೂಗೂರೆಡ್ಡಿ ಬೆಂಡೆಬೆಂಬಳಿ, ಸಹಾಯಕ ಇಂಜಿನಿಯರ ದೇವದಾಸ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಶಿಕ್ಷಕ ಚಂದ್ರಾಯಗೌಡ ನಿರೂಪಿಸಿ, ಸ್ವಾಗತಿಸಿದರು, ಸಿದ್ದಲಿಂಗಯ್ಯಸ್ವಾಮಿ ವಂದಿಸಿದರು.

ಸುದ್ದಿ ಸಿಂಚನ

ಮಹಿಳೆ ಕಾಣೆ: ಪತ್ತೆಗೆ ಮನವಿ

ರಾಯಚೂರು: ಇಲ್ಲಿನ ದೇವಿನಗರದ ನಿವಾಸಿಯಾದ ಲಕ್ಷ್ಮೀ ತಿಮ್ಮಪ್ಪ (43) ಎಂಬ ಮಹಿಳೆಯು ಕಳೆದ ಮಾ.27 ರಂದು ಕೆಲಸ ಮಾಡಿದ ಸಂಬಳವನ್ನು ತೆಗೆದುಕೊಂಡು ಬರುವುದಾಗಿ ಹೇಳಿ ಹೋದವಳು



ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ನೇತಾಜಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಕಾಣೆಯಾದ ಮಹಿಳೆ ಪತಿ ವರ್ಷದ ಹಿಂದೆ ಸಾವನ್ನಪ್ಪಿದ್ದು, ಪೂರ್ಣಿಮಾ, ತಾನು, ಶ್ರೀಧರ್, ಚರಣ ಕುಮಾರ್, ವಿನಯ ಕುಮಾರ್‌ಎಂಬ ಮಕ್ಕಳಿದ್ದಾರೆ. ಕೋಲು ಮುಖ, ಕಪ್ಪು ಮೈಬಣ್ಣ, ಕಪ್ಪು ಕೂದಲು, ಬಲಗೈ ಮುಂಗೈ ಮೇಲೆ ಟಿಎಲ್ ಅಂತಾ ಹಚ್ಚೆ ಇರುತ್ತದೆ. ಬಂಗಾರದ ಬಣ್ಣದ ಸೀರೆ, ಕೆಂಪು ಬಣ್ಣದ ಕುಬುಸ ಉಡುಪು ಧರಿಸಲಾಗಿದೆ. ಕನ್ನಡ, ತೆಲುಗು ಹಾಗೂ ಹಿಂದಿ ಭಾಷೆ ಮಾತನಾಡುವ ಮಹಿಳೆಯ ಸುಳಿವು ಸಿಕ್ಕಲ್ಲಿ ನೇತಾಜಿನಗರ ಪೊಲೀಸ್ ಠಾಣೆ ದೂ.ಸಂ. 08532-240222 ಅಥವಾ ರಾಯಚೂರು ನಗರ ಪೊಲೀಸ್ ಕಂಟ್ರೋಲ್ ರೂಂ ದೂ.ಸಂ. 08532-235635, 08532-235100, 9480803800 ಅಥವಾ ಠಾಣೆ ಪಿಎಸ್‌ಐ (9480803846) ಪಶ್ಚಿಮ ವೃತ್ತದ ಸಿಪಿಐ(9480803831) ರನ್ನು ಸಂಪರ್ಕ ಮಾಡಬಹುದು ಎಂದು ಠಾಣೆ ಪ್ರಕಟಣೆ ತಿಳಿಸಿದೆ.

ಬಾದರ್ಲಿಯವರಿಗೆ ಸಚಿವ ಸ್ಥಾನ ನೀಡಲು ಒತ್ತಾಯ


ಸಿಂಧನೂರು: ಕಾಂಗ್ರೆಸ್ ಯುವ ಘಟಕದ ರಾಜ್ಯ ಅಧ್ಯಕ್ಷರಾಗಿ ರಾಜ್ಯದಲ್ಲಿ ಒಬ್ಬ ಯುವ ನಾಯಕನಾಗಿ ಹೊರಹೊಮ್ಮಿರುವ ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿ ಅವರಿಗೆ ಮುಂಬರುವ ಸಚಿವ ಸಂಪುಟ ವಿಸ್ತರಣೆ ವೇಳೆ ಸಚಿವ ಸ್ಥಾನ ನೀಡಬೇಕು ಎಂದು ಮಾದಿಗ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಅಮರೇಶ ಗಿರಿಜಾಲಿ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಡೀ ಸಿಂಧನೂರು ಕ್ಷೇತ್ರದ ಚಿತ್ರಣವನ್ನು ಬದಲಾಯಿಸುವ ಕನಸು ಕಾಣುತ್ತಿರುವ ಬಾದರ್ಲಿ ಅವರಿಗೆ ಕಾಂಗ್ರೆಸ್ ಹೈಕಮಾಂಡ್‌ನ ಹಿರಿಯ ಮುಖಂಡರು, ಸಿಎಂ, ಡಿಸಿಎಂ ಅವರು ಯುವ ನಾಯಕನಿಗೆ ಸಚಿವ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿದರು. ಮುಖಂಡ ಹನುಮೇಶ ಕರ್ನಿ ಮಾತನಾಡಿದರು. ಈ ವೇಳೆ ಅಶೋಕ ಗೋರೇಬಾಳ, ಪಾಮೇಶ ಹೊಸಳ್ಳಿ ಕ್ಯಾಂಪ್, ಮಂಜುನಾಥ ಗೋರೇಬಾಳ, ಸಣ್ಣ ಹುಸೇನಪ್ಪ, ಯೇಸುರಾಜ, ಹನುಮೇಶ ಗೀತಾ ಕ್ಯಾಂಪ್, ಮಂಜುನಾಥ ಉಪಸ್ಥಿತರಿದ್ದರು.

13ಕ್ಕೆ ವಿದ್ಯುತ್ ವ್ಯತ್ಯಯ

ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿ ಕಲ್ಮಲಾ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ 13ರ ಬೆಳಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಕಲ್ಮಲಾ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಗತಿಪರ ರೈತ, ಯೋಗ ಗುರು ಬಾಲಿರೆಡ್ಡಿ ನಿಧನ

ರಾಯಚೂರು: ಜಿಲ್ಲೆ ಸಿಂಧನೂರಿನ ರೈತನಗರ (ತಿಮ್ಮಾರೆಡ್ಡಿ)ಕ್ಯಾಂಪ್ ನಿವಾಸಿ, ಪ್ರಗತಿಪರ ರೈತ,



ಯೋಗ ಗುರು ಬಾಲಿ ರೆಡ್ಡಿ (90) ಅವರು ಬುಧವಾರ ಬೆಳಗ್ಗೆ ಲಿಂಗೈಕ್ಯರಾಗಿದ್ದಾರೆ. ಪ್ರಗತಿಪರ ಕೃಷಿಕರಾಗಿರುವ ಬಾಲಿ ರೆಡ್ಡಿ ಅವರು ರೈತನಗರ ಗ್ರಾಮ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದಾರೆ. ಕೃಷಿ, ಆಧ್ಯಾತ್ಮ ಹಾಗೂ ಕುಟುಂಬಸ್ಥರು ಹಾಗೂ ಸಮಾಜಕ್ಕೆ ಉತ್ತಮ ಮಾರ್ಗದರ್ಶನ ನೀಡಿದ್ದ ಬಾಲಿರೆಡ್ಡಿ ಅವರು ನಿಜವಾದ ಯೋಗಿಯಾಗಿ ತಮ್ಮ ಬದುಕನ್ನು ನಡೆಸಿದ್ದರು. ಮೃತರು ರಾಯಚೂರಿನ ಬಾಲಂಕು ಆಸ್ಪತ್ರೆಯ ವೈದ್ಯ ಡಾ.ವಿ.ಶ್ರೀಧರ ರೆಡ್ಡಿ, ವಿ.ಎಂ.ರೆಡ್ಡಿ, ವಿ.ನಾಗಲಕ್ಷ್ಮೀ, ವಿ.ಪಿ.ರವೀಂದ್ರರೆಡ್ಡಿ ಸೇರಿದಂತೆ ಅಪಾರ ಬಂಧು-ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವ-ಗ್ರಾಮ ರೈತನಗರ (ತಿಮ್ಮಾರೆಡ್ಡಿ ಕ್ಯಾಂಪ್)ನಲ್ಲಿ ಬುಧವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಸಂತಾಪ: ಬಾಲಿರೆಡ್ಡಿ ನಿಧನಕ್ಕೆ ಬಾಲಂಕು ಆಸ್ಪತ್ರೆ ವೈದ್ಯರು, ಅಧಿಕಾರಿ, ಸಿಬ್ಬಂದಿ ಹಾಗೂ ಬಾಲಂಕು ಇಂಡಸ್ಟ್ರೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ರೈತನಗರ ಕ್ಯಾಂಪಿನ ನಿವಾಸಿಗಳು ತೀವ್ರ ಸಂತಾಪ ಸೂಚಿಸಿದ್ದಾರೆ.

ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿರಲಿ

ಶಾಸಕ ಆರ್. ಬಸನಗೌಡ ತುರ್ವಿಹಾಳ ಸೂಚನೆ | ಮಸ್ಕಿ ಪಪಂ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಕುಡಿಯುವ ನೀರಿನ ಸಭೆ

• **ಕನ್ನಡಪ್ರಭ ವಾರ್ತೆ** ಮಸ್ಕಿ

ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ನೀರಿನ ತೊಟ್ಟಿ, ಶುದ್ದ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಗಮನಹರಿಸಬೇಕು ಎಂದು ಖಾದಿ ಮತ್ತು ಗ್ರಾಮದ್ಯೋಗ ಮಂಡಳಿಯ ಅಧ್ಯಕ್ಷರು ಮತ್ತು ಶಾಸಕರಾದ ಬಸನಗೌಡ ತುರ್ವಿಹಾಳ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಮಸ್ಕಿಯ ತಾಪಂ ಕಾರ್ಯಾಲಯದಲ್ಲಿ ಶಾಸಕ ಆರ್. ಬಸನಗೌಡ ತುರ್ವಿಹಾಳ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಕುಡಿಯುವ ನೀರಿನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,

ಕ್ಷೇತ್ರದ ಎಲ್ಲಾ ಕೆರೆಗಳನ್ನು ಕಳೆದ ತಿಂಗಳು ಭರ್ತಿಗೊಳಿಸಿದ್ದು, ಸಮರ್ಪಕವಾಗಿ ನೀರು ಪೂರೈಸಬೇಕು. ಪೈಪ್ ಲೈನ್ ಒಡೆದರೆ ತಕ್ಷಣ ರಿಪೇರಿ ಕಾರ್ಯ ಕೈಗೊಂಡು ನೀರು ಪೋಲಾಗುವುದನ್ನು ತಡೆಯಬೇಕು. ನೀರಿನ ತೊಟ್ಟಿಗಳನ್ನು ಪ್ರತಿ ವಾರ ಶುಚಿಗೊಳಿಸಬೇಕು. ಶುದ್ದ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಸಂಬಂಧಿಸಿದಂತೆ ಗ್ರಾ.ಪಂ ಅಧಿಕಾರಿಗಳು ಗಮನಹರಿಸಬೇಕು ಎಂದರು.

ನಂತರ ತಾ.ಪಂ ಆಡಳಿತ ಅಧಿಕಾರಿಗಳು ಮತ್ತು ಜಿ.ಪಂ ಮುಖ್ಯ ಯೋಜನಾಧಿಕಾರಿಗಳಾದ ಡಾ. ಟಿ.ರೋಣಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ತಾಪಂಯಲ್ಲಿ ಆರಂಭಿಸಿದ ಸಹಾಯವಾಣಿ 08537-270122 ಬೆಳಗ್ಗೆ 8.30 ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಬಹುದು. ಟಾಸ್ಕ್ ಫೋರ್ಸ್ ಸಭೆಗಳನ್ನು ಏರ್ಪಡಿಸಿ, ಕುಡಿಯುವ ನೀರಿನ ಸಮಸ್ಯೆಯಾಗದಂತೆ ನಿಗಾ ವಹಿಸಲಾಗುತ್ತಿದೆ ಎಂದರು.

ತದ ನಂತರ ಪ್ರತಿ ಗ್ರಾಮ ಪಂಚಾಯಿತಿವಾರು ಕುಡಿಯುವ ನೀರಿನ ಪೂರೈಕೆ ಕುರಿತು ಮಾಹಿತಿ ಪಡೆದರು. ಕೆರೆಯಲ್ಲಿ ಲಭ್ಯ ಇರುವ ನೀರಿನ ಪ್ರಮಾಣ ಕುರಿತು ಮಾಹಿತಿ ಪಡೆದರು. ಲಭ್ಯ ಇರುವ ಬೋರ್‌ವೆಲ್‌ಗಳಿಂದ ನೀರು ಪೂರೈಸಬೇಕು. ಒಂದು ವೇಳೆ ಸಮಸ್ಯೆಯಾದರೆ, ಬಾಡಿಗೆ ಬೋರ್‌ವೆಲ್ ಪಡೆಯಬೇಕು. ಕಡ್ಡಾಯವಾಗಿ ನೀರಿನ ತೊಟ್ಟಿಗಳನ್ನು ಶುಚಿಗೊಳಿಸಬೇಕು. ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಗಮನಹರಿಸಬೇಕು ಎಂದರು.

ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ ಯಾದವ, ತಹಸೀಲ್ದಾರ್ ಮಂಜುನಾಥ ಭೋಗಾವತಿ, ಮಾನ್ವಿ, ಸಿಂಧನೂರು, ಲಿಂಗಸುಗೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಇಂಜಿನಿಯರ್‌ಗಳು, ವಿವಿಧ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಶುದ್ಧ ಕುಡಿಯುವ ನೀರು ಪೂರೈಸಿ: ಶಾಸಕಿ



ದೇವದುರ್ಗ: ಕ್ಷೇತ್ರದಲ್ಲಿ ಜಲಜೀವನ್ ಮಿಷನ್ ಸೇರಿದಂತೆ ಕೈಗೊಳ್ಳಲಾಗಿರುವ ಕುಡಿಯುವ ನೀರಿನ ಕಾಮಗಾರಿಗಳು ವಿಳಂಬವಾಗುತ್ತಿದ್ದು, ನೀರಿನ ಸಮಸ್ಯೆ ಉದ್ಭವಿಸುತ್ತಿದೆ. ಕೂಡಲೇ ಕಾಮಗಾರಿಗಳನ್ನು ಪೂರ್ಣಗೊಳಿಸಿ ಶುದ್ಧ ನೀರು ಪೂರೈಕೆ ಮಾಡಬೇಕೆಂದು ಶಾಸಕಿ ಕರೆಮ್ಮ ಜಿ.ನಾಯಕ ತಿಳಿಸಿದರು.

ಸ್ಥಳೀಯ ತಾಪಂ ಸಭಾಂಗಣದಲ್ಲಿ ಬುಧವಾರ ಜರುಗಿದ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಭೆಯಲ್ಲಿ ಕಾಮಗಾರಿಗಳ ಪ್ರಗತಿ ಮತ್ತು ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು. ವಿಕಲಚೇತನರಿಗೆ ಮೀಸಲಾಗಿರುವ ಅನುದಾನ ಕೆಲ ಗ್ರಾ.ಪಂಗಳಲ್ಲಿ ದುರ್ಬಳಕೆಯಾಗುತ್ತಿದೆ. ನಿಗದಿತ ಸಮಯಕ್ಕೆ ಖರ್ಚಾಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ. ಇಓರವರು ವಿಶೇಷ ಗಮನ ಹರಿಸಿ ವಿಕಲಚೇತನರಿಗೆ ಸರ್ಕಾರದ ಸೌಲಭ್ಯಗಳನ್ನು ನಿಗದಿತ ಅವಧಿಯಲ್ಲಿ ದೊರಕುವಂತೆ ನಿಗಾವಹಿಸಬೇಕು.

ಗ್ರಾಪಂಗಳಲ್ಲಿ ಆಡಳಿತ ಮಂಡಳಿ ಇರದೇ ಇರುವ ಹಿನ್ನಲೆಯಲ್ಲಿ ಆಡಳಿತಾಧಿಕಾರಿಗಳನ್ನು ಈಗಾಗಲೇ ನಿಯೋಜಿಸಲಾಗಿದೆ. ಆದರೆ ಪರಿಣಾಮಕಾರಿ ಬದಲಾವಣೆ ಕಾಣುತ್ತಿಲ್ಲ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು. ಗ್ರಾಮೀಣ ಪ್ರದೇಶದಲ್ಲಿ ಸಮಸ್ಯೆಗಳನ್ನು ಸ್ಥಳದಲ್ಲಿ ಪರಿಹಾರ ಕಲ್ಪಿಸುವ ಉದ್ದೇಶದಿಂದ ಜನಸ್ಪಂದನಾ ಕಾರ್ಯಕ್ರಮಕ್ಕೆ ಎಲ್ಲಾ ಇಲಾಖೆ ಅಧಿಕಾರಿಗಳು ಪಾಲ್ಗೊಳ್ಳಬೇಕು ಎಂದರು.

ಜಿಲ್ಲಾ ಯೋಜನಾಧಿಕಾರಿ ಶರಣಬಸವ, ತಹಸೀಲ್ದಾರ್ ನಾಗಮ್ಮ ಎಂ.ಕಟ್ಟೀಮನಿ, ತಾ.ಪಂ ಇಓ ರಾಜೇಂದ್ರಕುಮಾರ, ಅರಕೇರಾ ತಾ.ಪಂ ಇಓ ವಾಲ್ಮೀಕಿ ನಾಯಕ, ವ್ಯವಸ್ಥಾಪಕಿ ಮಹೇಶ್ವರಿ ಹಾಗೂ ಇತರೆ ಇಲಾಖೆ ಅಧಿಕಾರಿಗಳು ಇದ್ದರು.

ಕನ್ನಡ ಭಾಷೆ ಶುದ್ಧತೆಯ ಬಗ್ಗೆ ಗಮನಹರಿಸಿ: ಇರ್ಫಾನ್

ಸನ್‌ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಸಿಂಧನೂರು

ಕನ್ನಡ ಸಾಹಿತ್ಯ ಉಳಿಸಿ ಬೆಳೆಸಬೇಕಾದದ್ದು, ಎಲ್ಲರ ಜವಾಬ್ದಾರಿಯಾಗಿದೆ. ಪ್ರತಿನಿತ್ಯ ಕನ್ನಡ ಭಾಷೆಯನ್ನು ಬಳಸಬೇಕು, ಭಾಷಾ ಶುದ್ಧತೆಯ ಕಡೆ ಗಮನ ಹರಿಸಬೇಕು ಎಂದು ಸನ್‌ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನ ಅಧ್ಯಕ್ಷ ಕೆ.ಇರ್ಫಾನ್ ಸಲಹೆ ನೀಡಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ 112ನೇ ಸಂಸ್ಥಾಪನಾ ದಿನಾಚರಣೆಯನ್ನು ಸನ್‌ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳು, ಕವಿಗಳು ಸಾಹಿತ್ಯ ಆಸಕ್ತಿಗಳನ್ನು ಬೆಳೆಸಿಕೊಳ್ಳಬೇಕು. ಕನ್ನಡ ಭಾಷೆ ಬೆಳೆದು ಬಂದ ಪರಂಪರೆ ನೆನಪಿಸಿಕೊಂಡು ಭಾಷಾ ಪ್ರೀತಿಯೊಂದಿಗೆ ಕನ್ನಡದ ತೇರು ಎಳೆಯೋಣ ಎಂದರು. ತಾಲೂಕು ಕಸಾಪ ಮಾಜಿ ಅಧ್ಯಕ್ಷರಾದ ಬೀರಪ್ಪ ಶಂಭೋಜಿ ಹಾಗೂ ವೆಂಕನಗೌಡ ವಟಗಲ್ ಮಾತನಾಡಿದರು.



ಸಿಂಧನೂರಿನ ಸನ್‌ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ನಡೆದ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡದಲ್ಲಿ ಅತಿಹೆಚ್ಚು ಅಂಕ ಪಡೆದ ಕನ್ನಡ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಸಾಪ ಜಿಲ್ಲಾ ಪ್ರತಿನಿಧಿ ರಮಾದೇವಿ, ಶಂಭೋಜಿ ಜಿಲ್ಲಾ ಮಹಿಳಾ ಪ್ರತಿನಿಧಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಪರೀಕ್ಷೆಗಳು, ಪುಸ್ತಕ ಧನಸಹಾಯ, ಪ್ರಶಸ್ತಿ, ಪುರಸ್ಕಾರಗಳ ಮಹತ್ವವನ್ನು ವಿವರಿಸಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡದಲ್ಲಿ ಅತಿಹೆಚ್ಚು ಅಂಕಪಡೆದ ಕನ್ನಡ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವನಸಿರಿ ಫೌಂಡೇಶನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ, ಬಸವ ಕೇಂದ್ರದ ಚಂದ್ರೇಗೌಡ ಹರೇಟನೂರ, ಸಾಹಿತ್ಯ ಪರಿಷತ್ ತಾಲೂಕು ಸಮಿತಿಯ ಸದಸ್ಯೆ ಲಕ್ಷ್ಮಿ ಪತ್ತಾರ್‌ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಎಚ್.ಎಫ್.ಮಸ್ಕಿ ಅಧ್ಯಕ್ಷತೆ ವಹಿಸಿದ್ದರು. ಶಾಂತ ಒಳಗಿನಮನಿ ನಿರೂಪಿಸಿದರು. ಎಚ್.ಎಂ.ಶ್ರೀಶೈಲ ವಂದಿಸಿದರು.

ಮುದಗಲ್‌ನಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ; ವಶಕ್ಕೆ



ಮುದಗಲ್: ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡುತ್ತಿರುವ ವಾಹನದ ಮೇಲೆ ದಾಳಿ ಮಾಡಿದ ಅಧಿಕಾರಿಗಳು ಪಡಿತರ ಅಕ್ಕಿ ವಶಪಡಿಸಿಕೊಂಡಿರುವ ಘಟನೆ ಪಟ್ಟಣದ ಹೊರವಲಯದಲ್ಲಿ ಬುಧವಾರ ನಡೆದಿದೆ.

ಸರಕು ಸಾಗಾಣೆ ವಾಹನದಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದರ ಕುರಿತು ಖಚಿತ ಮಾಹಿತಿ ಪಡೆದ ಮುದಗಲ್ ಠಾಣೆ ಪೊಲೀಸರು ಹಾಗೂ ಲಿಂಗಸುಗೂರ ಆಹಾರ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳ ತಂಡವು ದಾಳಿ ನಡೆಸಿ ಸುಮಾರು 31,360 ಸಾವಿರ ರು. ಮೌಲ್ಯದ 1,120 ಕ್ವಿಂಟಲ್ ತೂಕದ ಪಡಿತರ ಅಕ್ಕಿ ಹಾಗೂ ವಾಹನವನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಪಿಎಸ್‌ಐ ವೆಂಕಟೇಶ ಮಾಡಗೇರಿ, ಆಹಾರ ಇಲಾಖೆ ಸಿಬ್ಬಂದಿಗಳಾದ ರಾಮಕೃಷ್ಣ ನಾಯ್ಕ, ಅಬ್ದುಲ್ ರೌಫ್, ಪೊಲೀಸ್ ಸಿಬ್ಬಂದಿ ಅಮರೇಶ, ಎಚ್, ಕೆ ಇದ್ದರು.

ಯುವಜನತೆ ದುಶ್ಚಟಗಳಿಂದ ದೂರವಿರಿ: ಶಾಸಕ ವಜ್ಜಲ್

ಲಿಂಗಸುಗೂರು: ವಿದ್ಯಾರ್ಥಿಗಳು ಭವಿಷ್ಯದ ಕನಸನ್ನು ನನಸಾಗಿಸಿಕೊಳ್ಳಲು ದುಶ್ಚಟಗಳಿಂದ ದೂರವಿರಬೇಕೆಂದು ಶಾಸಕ ಮಾನಪ್ಪ ವಜ್ಜಲ್ ಸಲಹೆ ನೀಡಿದರು.



ಲಿಂಗಸುಗೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ಕಾರ್ಯ ಚಟುವಟಿಕೆಗಳ ಸಮಾರೋಪ ಹಾಗೂ ಚಿನ್ನದ ಭಾವಣೆ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭವನ್ನು ಶಾಸಕ ಮಾನಪ್ಪ ವಜ್ಜಲ್ ಉದ್ಘಾಟಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎ, ಬಿಕಾಂ, ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡಗೆ ಮತ್ತು ವಾರ್ಷಿಕ ಕಾರ್ಯ ಚಟುವಟಿಕೆಗಳ ಸಮಾರೋಪ ಹಾಗೂ ಚಿನ್ನದ ಭಾವಣೆ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸೃಜನಶೀಲ ಬರವಣಿಗೆಗೆ ಕಾಲೇಜು ಅವಕಾಶ ಕಲ್ಪಿಸಿದೆ, ಹೆಚ್ಚಿನ ಅಧ್ಯಯನದಿಂದ ಬರಹಗಾರರಾಗಲು ಸಾಧ್ಯ. ಆ ದಿಶೆಯಲ್ಲಿ ವಾರ್ಷಿಕ ಸಂಚಿಕೆ ತರುವ ಮೂಲಕ ನಿಮ್ಮ ಪ್ರತಿಭಾನ್ವೇಷಣೆಗೆ ಕಾಲೇಜು ಅವಕಾಶ ಒದಗಿಸಿದೆ ಎಂದರು.

ಇದೇ ಸಂದರ್ಭದಲ್ಲಿ ಕಾಲೇಜಿನ ಲೋಗೋ ಬಿಡುಗಡೆ ಮಾಡಿದರು. ಸಿಂಧನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹನುಮಗೌಡ ಅವರು ವಿದ್ಯಾರ್ಥಿಗಳಿಗೆ ಮನೋಸ್ಥೈರ್ಯ ತುಂಬುವ ಮಾತುಗಳನ್ನಾಡಿದರು.

ಈ ವೇಳೆ ಪ್ರಾಂಶುಪಾಲ ಡಾ. ವೆಂಕಟನಾರಾಯಣ, ಸಹ ಪ್ರಾಧ್ಯಾಪಕರಾದ ಡಾ. ಹನುಮಂತಪ್ಪ, ಡಾ. ಸಯ್ಯದ್ ಆರೀಫ್ ಉಲ್ಲಾ, ಡಾ.ಸಂಗನಗೌಡ, ಐಕ್ಯೂಎಸಿ ಸಂಯೋಜಕ ಗಣೇಶ ದರ್ಬಿ, ಸಾಂಸ್ಕೃತಿಕ ಸಂಯೋಜಕ ಆಂಜನೇಯ ರಾಮತ್ನಾಳ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ನಾರಾಯಣಪ್ಪ ನಾಯಕ, ಮುದುಕಪ್ಪ ನಾಯಕ, ಭೀಮಸೇನ್ ಕುಲಕರ್ಣಿ, ಪರಶುರಾಮ ಕೆಂಬಾವಿ, ಅಮರೇಶ ಅಂಗಡಿ, ಯಮನೂರ ಭೋವಿ, ಸುಜಾತ ಶಿವುಕುಮಾರ ಮಲ್ಲಿಕಾರ್ಜುನಗೌಡ ಮೇಲಿನಮನಿ ಇತರರಿದ್ದರು.

ಐಟಿಐ ಪ್ರವೇಶಕ್ಕೆ ಅಭ್ಯರ್ಥಿಗಳಿಂದ ಅರ್ಜಿ

ಮುದಗಲ್: ಇಲ್ಲಿನ ಸರ್ಕಾರಿ ಐಟಿಐ ಕಾಲೇಜಿನಲ್ಲಿ 2026ನೇ ಸಾಲಿನಲ್ಲಿ ಪ್ರಥಮ ವರ್ಷದ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕಾಲೇಜಿನಲ್ಲಿ ವಿವಿಧ ವೃತ್ತಿಗಳಾದ ವಿದ್ಯುತ್ ಕರ್ಮಿ ಮತ್ತು ಜೋಡಣೆಗಾರ 2 ವರ್ಷಗಳ ಕೋರ್ಸುಗಳಿದ್ದು, ಸಂಸ್ಥೆಯು ಅತ್ಯಾಧುನಿಕ ಯಂತ್ರೋಪಕರಣಗಳು, ಸುಸಜ್ಜಿತವಾದ ಕಂಪ್ಯೂಟರ್‌ಲ್ಯಾಬ್ ಹೊಂದಿದ್ದು, ಆಸಕ್ತರು ವೆಬ್ಸೈಟ್ ವಿಳಾಸ: det.karnataka.gov.inನಲ್ಲಿ ಆನ್ಲೈನ್ ಅಥವಾ ನೇರವಾಗಿ ಸಂಸ್ಥೆಗೆ ಭೇಟಿ ನೀಡಿ, ಮೇ.8 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ತರಬೇತಿ ಅಧಿಕಾರಿಗಳಾದ ಮಹಾ ದೇವ ಕೆ. ಸರ್ಜಾಪುರ (7892955100) ಅಥವಾ ಪ್ರಥಮ ದರ್ಜೆ ಸಹಾಯಕರ (9742063355)ನ್ನ ಸಂಪರ್ಕ ಮಾಡಬಹುದಾಗಿದೆ ಎಂದು ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಸಿಂಧನೂರು: ನಗರದ ಶಿವಶರಣೆ ಅಕ್ಕಮಹಾದೇವಿ ಶಿಕ್ಷಣ ಪ್ರತಿಷ್ಠಾನ ಟ್ರಸ್ಟ್ ಹಾಗೂ ರಾವ್ ಬಹದ್ದೂರ್‌ಧರ್ಮ ಪ್ರವರ್ತಕ ಗುಬ್ಬಿ ತೋಟದಪ್ಪ ಧರ್ಮ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ವೀರಶೈವ ಲಿಂಗಾಯತ ವಿದ್ಯಾರ್ಥಿನಿಯರ ವಸತಿ ನಿಲಯ ಉಚಿತ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಟಿ.ಎಂ.ಪಾಟೀಲ್ ಹಾಗೂ ಕಾರ್ಯಾಧ್ಯಕ್ಷ ಅಶೋಕಗೌಡ ಗದ್ರಟಗಿ ತಿಳಿಸಿದ್ದಾರೆ. ಈ ಕುರಿತು ಬುಧವಾರ ಹೇಳಿಕೆ ನೀಡಿರುವ ಅವರು 2026-27ನೇ ಸಾಲಿನಲ್ಲಿ ಪಿ.ಯು.ಸಿ., ಡಿಪ್ಲೋಮಾ, ಪದವಿ, ಪ್ಯಾರಾಮೆಡಿಕಲ್, ನರ್ಸಿಂಗ್, ಸ್ನಾತಕೋತ್ತರ, ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದಾಗಿದೆ. ಮೇ.10ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ನಿಲಯ ಪಾಲಕಿ ಶರಣಮ್ಮ ಪಾಟೀಲ ಮೊ - 9019470457 ಇವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಜಿಗಳ ಆಹ್ವಾನ

ರಾಯಚೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2026-27ನೇ ಶೈಕ್ಷಣಿಕ ಸಾಲಿನಿಂದ ನೂತನವಾಗಿ ಮಹಿಳಾ ಪದವಿ ಪೂರ್ವ ಕಾಲೇಜನ್ನು ಚಂದ್ರಬಂಡಾ ರಸ್ತೆಯಲ್ಲಿರುವ ಇಲಾಖೆಯ ಕಟ್ಟಡದಲ್ಲಿ ಆರಂಭಿಸಲಾಗುತ್ತಿದ್ದು, ವಿವಿಧ ವಿಷಯಗಳ ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕನ್ನಡ ವಿಷಯದ 1 ಉಪನ್ಯಾಸಕರ ಹುದ್ದೆಗೆ ಎಂ.ಎ. ಬಿ.ಎಡ್, ಇಂಗ್ಲೀಷ್ ವಿಷಯದ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿಎಡ್, ಹಿಂದಿ 11 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಉರ್ದು 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಇತಿಹಾಸ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಅರ್ಥಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ರಾಜ್ಯಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಸಮಾಜಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಕಂಪ್ಯೂಟರ್‌ಸೈನ್ಸ್ 1 ಉಪನ್ಯಾಸಕರ ಹುದ್ದೆಗೆ ಎಂ.ಕಾಂ, ಬಿ.ಎಡ್, ವ್ಯವಹಾರ ಅಧ್ಯಯನ 1 ಉಪನ್ಯಾಸಕರ ಹುದ್ದೆಗೆ ಎಂ.ಕಾಂ, ಬಿ.ಎಡ್, ಅಕೌಂಟೆನ್ಸಿ/ ಲೆಕ್ಕಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಕಾಂ, ಬಿ.ಎಡ್, ಭೌತಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್, ರಸಾಯನಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್, ಗಣಿತಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್, ಜೀವಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್ ಪಡೆದ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಡಿಗ್ರಿ ಅಂಕಪಟ್ಟಿ, ಸ್ನಾತಕೋತ್ತರ ಪದವಿಯ ಅಂಕಪಟ್ಟಿ, ಬಿಇಡಿ ಅಂಕಪಟ್ಟಿ ಮತ್ತು ಆಧಾರ್ ಕಾರ್ಡ್‌ಗಳ ಜೆರಾಕ್ಸ್ ಪ್ರತಿಗಳೊಂದಿಗೆ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಲಗತ್ತಿಸಿ ಮೇ.11ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಾಹಿತಿ ಸಂಪರ್ಕ ಕೇಂದ್ರದ ಸಂಖ್ಯೆ: 9731028420 ಅಥವಾ 9845494630ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ | ನಿತೀಶ್ ಕೆ. ಅವರಿಂದ ಅಧಿಕಾರ ಹಸ್ತಾಂತರಿಸಿ ಶುಭಹಾರೈಕೆ

ಜಿಲ್ಲೆಗೆ ಪೂವಿತಾ ಎಸ್. ನೂತನ ಡೀಸಿ

• **ಕನ್ನಡಪ್ರಭ ವಾರ್ತೆ** ರಾಯಚೂರು

ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ ಎಸ್. ಅವರು ಮೇ. 6 ರಂದು ಬುಧವಾರ ಸಂಜೆ ಅಧಿಕಾರ ಸ್ವೀಕರಿಸಿದರು. ನೂತನ ಜಿಲ್ಲಾಧಿಕಾರಿಗಳಿಗೆ ನಿರ್ಗಮಿತ ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಅಧಿಕಾರ ಹಸ್ತಾಂತರಿಸಿ ಶುಭ ಕೋರಿದರು.

ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಮೂಲತಃ ತಮಿಳುನಾಡು ರಾಜ್ಯದವರಾಗಿದ್ದು, 2016 ಕರ್ನಾಟಕ ಬ್ಯಾಚ್‌ನ ಐ.ಎ.ಎಸ್. ಅಧಿಕಾರಿಯಾಗಿದ್ದು ಅವರು ಮೊದಲು ತಮ್ಮ ಪ್ರೊಬೇಷನರಿ ಅವಧಿಯನ್ನು ಉಡುಪಿಯಲ್ಲಿ ಮುಗಿಸಿ, ನಂತರ ತಿಪಟೂರಿನಲ್ಲಿ ಸಹಾಯಕ ಆಯುಕ್ತರಾಗಿ, ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಹಾಗೂ ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ಜಂಟಿ ನಿರ್ದೇಶಕರಾಗಿ, ಚಾಮರಾಜನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ



ರಾಯಚೂರು ಜಿಲ್ಲಾ ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್.ಅವರಿಗೆ ನಿರ್ಗಮಿತ ಡಿಸಿ ನಿತೀಶ್ ಕೆ.ಅವರು ಅಧಿಕಾರ ಹಸ್ತಾಂತರಿಸಿ ಶುಭ ಕೋರಿದರು.

ಕಾರ್ಯನಿರ್ವಾಹಕ ಅಧಿಕಾರಿಯಾಗಿ ಮತ್ತು ಕೆಯುಐಡಿಎಫ್‌ಸಿ ಬೆಂಗಳೂರಿನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್‌ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದು, ಇದೀಗ ಜಿಲ್ಲೆಗೆ ಹೊಸ ಡಿಸಿಯಾಗಿ ನಿಯುಕ್ತಿಗೊಂಡಿದ್ದಾರೆ.

ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಹೊಸ ಡಿಸಿ ಪೂವಿತಾ ಎಸ್. ಅವರು, ಐತಿಹಾಸಿಕ ರಾಯಚೂರು ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದಿರುವುದಕ್ಕೆ ನನಗೆ ತುಂಬಾ ಹೆಮ್ಮೆಯಾಗುತ್ತಿದೆ. ಜಿಲ್ಲೆಯ ಜ್ವಲಂತ ಸಮಸ್ಯೆಗಳಿಗೆ ಮೊದಲ ಆಧ್ಯತೆ ನೀಡುವುದರ ಜೊತೆಗೆ ಹಿಂದಿನ ಜಿಲ್ಲಾಧಿಕಾರಿಯವರ ಕೆಲಸಗಳನ್ನು ಮುಂದುವರೆಸುತ್ತೇನೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನನ್ನ ಮೊದಲ ಆದ್ಯತೆಯಾಗಿದೆ. ಜಿಲ್ಲೆಯ ಚುನಾಯಿತ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಸಹಕಾರವನ್ನು ಕೋರುತ್ತೇನೆ ಎಂದು ಹೇಳಿದರು.

ನಿರ್ಗಮಿತ ಡಿಸಿ ನಿತೀಶ್ ಕೆ., ಎಡಿಸಿ ಶಿವಾನಂದ, ಎಸಿ ಡಾ.ಹಂಪಣ್ಣ ಸಜ್ಜನ, ತಹಸೀಲ್ದಾರ್ ಸುರೇಶ ಮರ್ಮಾ ಸೇರಿ ವಿವಿಧ ಇಲಾಖೆಗಳ ಅಧಿಕಾರಿ,ಸಿಬ್ಬಂದಿ ಇದ್ದರು.

ಅಂತಾರಾಷ್ಟ್ರೀಯ ಕಾರ್ಮಿಕ ದಿನ: ಕಾನೂನು ಅರಿವು ನೆರವು

ಮಾನ್ವಿ: ಪಟ್ಟಣದ ತಾಪಂ ಕಚೇರಿ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ದಿನದ ಪ್ರಯುಕ್ತ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ತಾಲೂಕಾಡಳಿತ, ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ತಾಲೂಕು ನ್ಯಾಯವಾದಿಗಳ ಸಂಘ ಮತ್ತು ಕಾರ್ಮಿಕ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಸಿವಿಲ್ ನ್ಯಾಯಾಧೀಶರಾದ ಆನಂದ ಎಚ್. ಕೊಣ್ಣೂರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ದೇಶದ ಬೆನ್ನೆಲುಬು, ಶೋಷಿತ ವರ್ಗಕ್ಕೆ ಸೇರಿದ ಕಾರ್ಮಿಕರಿಗೆ ಸಂವಿಧಾನದಲ್ಲಿ ಕಾರ್ಮಿಕ ಕಾಯ್ದೆಯಡಿಯಲ್ಲಿ ಅನೇಕ ಹಕ್ಕು, ಗೌರವ ಹಾಗೂ ಸವಲತ್ತುಗಳನ್ನು ಒದಗಿಸಿದ್ದು, ಕಾರ್ಮಿಕರು ಅವುಗಳನ್ನು ಅರಿತುಕೊಂಡು ನ್ಯಾಯಯುತವಾಗಿ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ತಾಲೂಕು ಕಾರ್ಮಿಕ ನಿರೀಕ್ಷಕ ಮಲ್ಲಪ್ಪ ದೊರೆ ಮಾತನಾಡಿ, ದೈಹಿಕ, ಮಾನಸಿಕ, ಬೌದ್ಧಿಕವಾಗಿ ಶ್ರಮವಹಿಸಿ ದುಡಿಯುವ ಕಾರ್ಮಿಕರು ಶೇ.30ರಷ್ಟು ಇದ್ದರೆ. ಕಟ್ಟಡ ಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಅವುಗಳ ಸದುಪಯೋಗವನ್ನು ಕಾರ್ಮಿಕರು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಸಹಾಯಕ ಸರ್ಕಾರಿ ಅಭಿಯೋಜಕರಾದ ಅರ್ಚನಾ ಯಾದವ್ ಮಾತನಾಡಿದರು.

ತಾಪಂ ಇಓ ಖಾಲಿದ್ ಅಹ್ಮದ್, ಪಿಐ ಸೋಮಶೇಖರ ಎಸ್.ಕೆಂಚರೆಡ್ಡಿ, ತಾಲೂಕು ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷ ವಿಶ್ವನಾಥ ರಾಯಪ್ಪ, ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ಹಿರೆಬಾದರದಿನ್ನಿ, ಹಿರಿಯ ವಕೀಲರಾದ ಶ್ರೀದೇವಿ ಬಳಿಗಾರ, ಅಮೃತ, ಕಾರ್ಮಿಕ ಮುಖಂಡರಾದ ಪರಶುರಾಮ ಬಾಗಲವಾಡ, ಎಂ.ಡಿ.ಜಾಫರ್, ತಾಯಪ್ಪ, ಆಂಜಿನೇಯ್ಯ ಕೋಟೆ, ವೆಂಕಣ್ಣ ಸೇರಿ ನೂರಾರು ಕಾರ್ಮಿಕರು ಇದ್ದರು.

ಬೇಸಿಗೇಲಿ ಸಾರ್ವಜನಿಕರು ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಿ: ಡಾ.ಸುರೇಂದ್ರ

ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಪಾಲಿಸಲು ಸಲಹೆ

ದೇವದುರ್ಗ: ಜಿಲ್ಲೆಯಾದ್ಯಂತ ಪ್ರಸ್ತುತ ದಿನಗಳಲ್ಲಿ ಬಿಸಿಲಿನ ಪ್ರಕರತೆ ಮತ್ತು ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು, ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಹಾಗೂ ವಯೋವೃದ್ದರು ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವ ಮೂಲಕ ಆರೋಗ್ಯದ ರಕ್ಷಣೆಗೆ ಹೆಚ್ಚಿನ ಆಧ್ಯತೆ ನೀಡಬೇಕೆಂದು ಜಿಲ್ಲಾ



ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಹೇಳಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಬೇಸಿಗೆ ಶಾಖಾಘಾತ ನಿರ್ವಹಣೆಯ ವಾರ್ಡ್ ಹಾಗೂ ಇತರೆ ವಾಡ್‌ಗಳಿಗೆ ಭೇಟಿ ನೀಡಿ ಮಾತನಾಡಿ, ಜಿಲ್ಲೆಯಲ್ಲಿ ಪ್ರತಿದಿನ ಮಧ್ಯಾಹ್ನದಲ್ಲಿ ಬಿಸಿಲು 40 ಡಿಗ್ರಿ ಮೇಲ್ಪಟ್ಟು ಹಾಗೂ ಪ್ರಖರವಾಗಿರುವ ಹಿನ್ನೆಲೆಯಲ್ಲಿ ಮನೆಯಿಂದ ಹೊರಗೆ ಹೋಗುವಾಗ ಆದಷ್ಟು ಹತ್ತಿ ಬಟ್ಟೆ ಉಡುಗೆ, ಜೊತೆಯಲ್ಲಿ ಕುಡಿಯುವ ನೀರು, ಛತ್ರಿ ಬಳಸಲು ಆಧ್ಯತೆ ನೀಡಿ, ಆದಷ್ಟು ದ್ರವ ಆಹಾರ ಸೇವನೆ ಮತ್ತು ಮನೆಯಲ್ಲಿ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ದೀರ್ಘಕಾಲಿನ ಚಿಕಿತ್ಸೆಗೆ ಒಳಪಟ್ಟವರು, ವಯೋವೃದ್ದರ ಕಾಳಜಿಗಾಗಿ ಕುಟುಂಬದ ಸದಸ್ಯರು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಓಆರ್‌ಎಸ್ ಜೀವ ಜಲ ಪ್ಯಾಕೇಟ್ ಸೇರಿದಂತೆ ಅಗತ್ಯ ಮುಂಜಾಗ್ರತಾ ಔಷಧಿಗಳು ಲಭ್ಯವಿವೆ. ಯಾವುದೇ ತುರ್ತು ಸಂದರ್ಭದಲ್ಲಿ 108ಕ್ಕೆ ಕರೆ ಮಾಡಿ ಆಂಬ್ಯುಲೆನ್ಸ್ ಸದುಪಯೋಗ ಪಡೆಯಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ.ಗಣೇಶ ಕೆ., ತಾಲೂಕು ಆರೋಗ್ಯಾಧಿಕಾರಿ ಡಾ.ಬನದೇಶ್ವರ, ಸಾರ್ವಜನಿಕ ಆಸ್ಪತ್ರೆಯ ವೈದ್ಯರಾದ ಡಾ. ಗಂಗಾಧರ್, ಡಾ.ಶಿವಕುಮಾರ್, ಡಾ.ನಾಗರಾಜ ಮಲ್ಕಾಪೂರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಪ್ಪ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸೋಮಪ್ಪ ಸೇರಿದಂತೆ ಸಿಬ್ಬಂದಿಯವರು ಹಾಗೂ ಸಾರ್ವಜನಿಕರು ಇದ್ದರು.

ರಾಜ್ಯದಲ್ಲಿ ತಾಪಮಾನ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಕಲಬುರಗಿ	ರಾಯಚೂರು	ಬೀದರ್	ವಿಜಯಪುರ	ಬಾಗಲಕೋಟೆ
ಗರಿಷ್ಠ	41.6	40.6	40.2	39.0	38.8
ಕನಿಷ್ಠ	28.4	25.6	25.2	24.8	24.4

ಕನ್ನಡಪ್ರಭ
ಗುರುವಾರ 7.05.2026

ಆ್ಯಂಬುಲೆನ್ಸ್‌ನಲ್ಲೇ ಅವಳಿ ಗಂಡು ಮಕ್ಕಳಿಗೆ ಜನ್ಮ ನೀಡಿದ ಮಹಿಳೆ

ವಿಜಯನಗರ: ಆ್ಯಂಬುಲೆನ್ಸ್‌ನಲ್ಲಿ ಮಹಿಳೆಯೊಬ್ಬರು ಅವಳಿ ಗಂಡು ಮಕ್ಕಳಿಗೆ ಜನ್ಮ ನೀಡಿದ ಘಟನೆ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಸಮೀಪದ ಹಂಪಿನಕಟ್ಟಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. ಶಕೀಲಾ ಅವಳಿ




ಮಕ್ಕಳಿಗೆ ಜನ್ಮ ನೀಡಿದವರು. ಬುಧವಾರ ಬೆಳಗಿನ ಜಾವ ಮನೆಯಲ್ಲಿ ಹೆರಿಗೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಹಂಪಿನಕಟ್ಟಿ ಗ್ರಾಮದಿಂದ ಹೊಸಪೇಟೆಗೆ ಆ್ಯಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಗುತ್ತಿತ್ತು. ಆದರೆ ಮಾರ್ಗ ಮಧ್ಯೆ ಶಕೀಲಾಗೆ ನೋವು ಹೆಚ್ಚಾಗಿದೆ. ಆಗ ಆ್ಯಂಬುಲೆನ್ಸ್ ಸಿಬ್ಬಂದಿ ಹೆರಿಗೆ ಮಾಡಿಸಿದ್ದಾರೆ. ಬೆಳಗಿನ ಜಾವ 4ಕ್ಕೆ ಒಂದು ಮಗು ಹಾಗೂ 4-20ಕ್ಕೆ ಇನ್ನೊಂದು ಮಗು ಜನನವಾಗಿದೆ.

ವಿತ್ತ ಸಚಿವೆ ನಿರ್ಮಲಾ ಹೆಸರಲ್ಲಿ ವೃದ್ಧನಿಗೆ 7.9 ಲಕ್ಷ ರು. ವಂಚನೆ

ಬೆಳಗಾವಿ: ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಹೆಸರನ್ನು ದುರುಪಯೋಗಪಡಿಸಿಕೊಂಡು ಡೀಪ್‌ಫೇಕ್ ವಿಡಿಯೋಗಳ ಮೂಲಕ ಷೇರು ಮಾರುಕಟ್ಟೆ ಹೂಡಿಕೆ ಹೆಸರಿನಲ್ಲಿ ಹಿರಿಯ ನಾಗರಿಕರೊಬ್ಬರಿಗೆ 7.9 ಲಕ್ಷ ರು. ವಂಚಿಸಿರುವ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ. ನಗರದ ಪ್ರಕಾಶ ಗುಬ್ಬಿ (76) ವಂಚನೆಗೆ ಒಳಗಾದವರು. ಈ ಸಂಬಂಧ ಕೊಲ್ಲಾಪುರ ಮೂಲದ ಆದರ್ಶ ಆನಂದ ಹಾಗೂ ಮಹಾರಾಷ್ಟ್ರದ ಬುಲ್ಡಾಣಾ ಮೂಲದ ದಾಮೋದರ ವಿರುದ್ಧ ಸೈಬರ್‌ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೇಂದ್ರ ಸಚಿವರ ಹೆಸರಿನಲ್ಲಿ ಡೀಪ್‌ಫೇಕ್ ವಿಡಿಯೋಗಳನ್ನು ಬಳಸಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಕಡಿಮೆ ಅವಧಿಯಲ್ಲಿ ಲಾಭ ಗಳಿಸಿ ಎಂಬ ಆಮಿಷ ನೀಡಲಾಗುತ್ತಿತ್ತು. ಜಾಹೀರಾತಿನ ಲಿಂಕ್ ಕ್ಲಿಕ್ ಮಾಡಿದ್ದ ಪ್ರಕಾಶ ತಮ್ಮ ವಿವರಗಳನ್ನು ನಮೂದಿಸಿದ್ದರು. ಬಳಿಕ ಆರೋಪಿಗಳು ಕರೆ ಮಾಡಿ, ಹೂಡಿಕೆ ಮಾಡಲು ಪ್ರೇರೇಪಿಸಿ ವಂಚಿಸಿದ್ದರು.

ಬಾರ್ಕೂರಿನಲ್ಲಿ ವರ್ಷಕ್ಕೆ ಕನಿಷ್ಠ 100 ರಥೋತ್ಸವಕ್ಕೆ ಪರಿಶೀಲನೆ: ಎಚ್ಕೆಪಿ

ಉಡುಪಿ: ಇತಿಹಾಸ ಕಾಲದಲ್ಲಿ ಪ್ರತಿದಿನವೂ ರಥೋತ್ಸವಗಳು ನಡೆಯುತ್ತಿದ್ದ ಬಾರ್ಕೂರಿನಲ್ಲಿ, ಇನ್ನು ಮುಂದೆ ವರ್ಷಕ್ಕೆ ಕನಿಷ್ಠ 100 ರಥೋತ್ಸವಗಳನ್ನಾದರೂ ಆಯೋಜಿಸುವ ಸಾಧ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತದೆ ಎಂದು ಪ್ರವಾಸೋದ್ಯಮ



ಇಲಾಖೆ ಸಚಿವ ಎಚ್.ಕೆ.ಪಾಟೀಲ್ ಹೇಳಿದರು. ಅವರು ಬುಧವಾರ ನಡೆದ ಸಭೆಯಲ್ಲಿ ಮಾತನಾಡಿ, ಬಾರ್ಕೂರು ಆಳುಪ ವಂಶದ ರಾಜಧಾನಿಯಾಗಿತ್ತು. ಇಲ್ಲಿದ್ದ 365 ದೇವಸ್ಥಾನಗಳಲ್ಲಿ ಪ್ರತಿದಿನವೂ ರಥೋತ್ಸವ ನಡೆಯುತ್ತಿದ್ದುದಾಗಿ ದಾಖಲೆಗಳಲ್ಲಿ ಉಲ್ಲೇಖಗಳಿವೆ, ಈ ಪ್ರದೇಶವನ್ನು ಪುನರುಜ್ಜೀವನಗೊಳಿಸಿ, ಇತಿಹಾಸವನ್ನು ನೆನಪಿಸಲು ವರ್ಷದಲ್ಲಿ 100 ರಥೋತ್ಸವಗಳನ್ನು ನಡೆಸಲು ಯೋಜನೆ ರೂಪಿಸಲಾಗುತ್ತದೆ. ಇದರ ಪ್ರಮುಖ ಉದ್ದೇಶ ಬಾರ್ಕೂರನ್ನು ಪ್ರಮುಖ ಸಾಂಸ್ಕೃತಿಕ ಪ್ರವಾಸೋದ್ಯಮ ತಾಣವಾಗಿಸುವುದು ಎಂದರು.

ಪ್ರತಿ ಟನ್ ಕಬ್ಬಿಗೆ ₹4500 ಕೊಡಿ: ಕಬ್ಬು ಬೆಳೆಗಾರರ ಸಂಘ ಆಗ್ರಹ

ಬೆಂಗಳೂರು: ಕೇಂದ್ರ ಸರ್ಕಾರವು ಟನ್ ಕಬ್ಬಿಗೆ 3650 ರು. ಎಫ್‌ಆರ್‌ಪಿ (ನ್ಯಾಯಯುತ ಮತ್ತು ಲಾಭದಾಯಕ ಬೆಲೆ) ದರ ಘೋಷಿಸಿದೆ. ರೈತರಿಗೆ ಅನ್ಯಾಯ ಆಗುವುದರಿಂದ ಇದನ್ನು 4500 ರುಪಾಯಿಗೆ ಹೆಚ್ಚಳ ಮಾಡಬೇಕು



ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಒತ್ತಾಯಿಸಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಕೇಂದ್ರ ಸಚಿವ ಸಂಪುಟವು 2026-27ನೇ ಸಾಲಿನಲ್ಲಿ ಟನ್ ಕಬ್ಬಿಗೆ 3650 ರು. ನಿಗದಿ ಮಾಡಿದ್ದು ಇದು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾಗಿದೆ. 4450 ರು. ನಿಗದಿ ಮಾಡಬೇಕು ಎಂದು ಕರ್ನಾಟಕ ಸರ್ಕಾರ ವರದಿ ನೀಡಿದೆ. ಇದನ್ನು ಗಮನಿಸಿ ಹೆಚ್ಚುವರಿ ಬೆಲೆ ನಿಗದಿ ಮಾಡಬೇಕಿತ್ತು. ಆದರೆ ಕಡಿಮೆ ಬೆಲೆ ನಿಗದಿಪಡಿಸಿ ರೈತರನ್ನು ಕಬ್ಬು ಬೆಳೆಯಿಂದ ಒಕ್ಕಲೆಬ್ಬಿಸುವ ಕಾರ್ಯ ಮಾಡಲಾಗಿದೆ ಎಂದರು.

ಸುದ್ದಿ ಸಿಂಚನ

ಡಿ.ಇಡಿ, ಡಿಪಿಇಡಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯದ ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿನ 2026-27ನೇ ಸಾಲಿನ ಡಿ.ಇಡಿ, ಡಿಪಿಇಡಿ ಮತ್ತು ಡಿಪಿಎಸ್‌ಇ ಕೋರ್ಸ್‌ಗಳ ಪ್ರವೇಶಕ್ಕೆ ಲಭ್ಯ ಸರ್ಕಾರಿ ಕೋಟಾ ಸೀಟುಗಳ ದಾಖಲಾತಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 6ರಿಂದ ಜೂ.1ರವರೆಗೆ ಅವಕಾಶ ನೀಡಲಾಗಿದೆ. ಶಾಲಾ ಶಿಕ್ಷಣ ಇಲಾಖೆಯು ವೆಬ್‌ಸೈಟ್ www.schooleducation.karnataka.gov.in ನಲ್ಲಿ ಪ್ರಕಟಿಸಲಾದ ಅಧಿಸೂಚನೆಯಲ್ಲಿ ಅರ್ಹತೆ, ಮೀಸಲಾತಿ, ಶುಲ್ಕದ ವಿವರಗಳು ಹಾಗೂ ಜಿಲ್ಲಾವಾರು ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಪ್ರೌಢಶಾಲಾ ಶಿಕ್ಷಕರ ಬಡ್ತಿಗೆ 26ರಿಂದ ಅರ್ಹತಾ ಪರೀಕ್ಷೆ

ಬೆಂಗಳೂರು: ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕ ವೃಂದದಿಂದ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕ ವೃಂದಕ್ಕೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆಯನ್ನು ಮೇ 26ರಿಂದ 29ರವರೆಗೆ ನಡೆಸಲು ತೀರ್ಮಾನಿಸಿರುವುದಾಗಿ ಶಾಲಾ ಶಿಕ್ಷಣ ಆಯುಕ್ತರು ತಿಳಿಸಿದ್ದಾರೆ. ಪ್ರತಿದಿನ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಮತ್ತು ಮಧ್ಯಾಹ್ನ 2ರಿಂದ ಸಂಜೆ 5ರವರೆಗೆ ಎರಡು ಹಂತದಲ್ಲಿ ಪರೀಕ್ಷೆಗಳು ನಡೆಯಲಿವೆ.

ಪಿಯು ಪರೀಕ್ಷಾ ವೆಚ್ಚ ಪಾವತಿಗೆ ₹81.20 ಕೋಟಿ ಬಿಡುಗಡೆ ಮಾಡಿದ ಸರ್ಕಾರ

ಬೆಂಗಳೂರು: ಕಳೆದ ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷಾ ಸಂಬಂಧಿತ ಎಲ್ಲ ವೆಚ್ಚಗಳ ಪಾವತಿಗಾಗಿ ರಾಜ್ಯ ಸರ್ಕಾರ ಬುಧವಾರ ಒಂದೇ ಕಂತಿನಲ್ಲಿ 81.20 ಕೋಟಿ ರು. ಅನುದಾನ ಬಿಡುಗಡೆಗೊಳಿಸಿದೆ. ಬಜೆಟ್‌ನಲ್ಲಿ 2026-27ನೇ ಸಾಲಿನ ಪದವಿ ಪೂರ್ವ ಪರೀಕ್ಷಾ ಕಾರ್ಯಗಳ ವೇತನೇತರ ವೆಚ್ಚಗಳಿಗಾಗಿ 101.50 ಕೋಟಿ ರು. ನಿಗದಿ ಮಾಡಲಾಗಿತ್ತು. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷರ ಪ್ರಸ್ತಾವನೆ ಮೇರೆಗೆ ರಾಜ್ಯ ಸರ್ಕಾರ ಈ 101.50 ಕೋಟಿ ರು. ಅನುದಾನದ ಪೈಕಿ ಪೂರಕ ವೆಚ್ಚಕ್ಕೆ 30.40 ಕೋಟಿ ರು. ಪ್ರಯಾಣ ವೆಚ್ಚಕ್ಕೆ 24.80 ಕೋಟಿ ರು. ರಹಸ್ಯ ಸೇವಾ ವೆಚ್ಚಕ್ಕೆ 15.20 ಕೋಟಿ ರು. ಸಾಮಗ್ರಿ ಮತ್ತು ಸರಬರಾಜಿಗೆ 10.80 ಕೋಟಿ ರು. ಸೇರಿ ಒಟ್ಟು 81.20 ಕೋಟಿ ರು. ಬಿಡುಗಡೆಗೊಳಿಸಿದೆ.

ಅಣ್ಣನ ಅಂತ್ಯಸಂಸ್ಕಾರ ಮುಗಿಸಿ ಸ್ನಾನ ಮಾಡಲು ಹೋದ ತಮ್ಮ ನದಿಪಾಲು

ನ್ಯಾಮತಿ(ದಾವಣಗೆರೆ): ಅಣ್ಣನ ಅಂತಿಮ ಸಂಸ್ಕಾರದ ನಂತರ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಲು ಹೋದ ತಮ್ಮ ಕಾಲು ಜಾರಿ ಮೃತಪಟ್ಟಿರುವ ಘಟನೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ಕೋಟೆಹಾಳ್ ಗ್ರಾಮದಲ್ಲಿ ಸೋಮವಾರ ನಡೆದಿದೆ. ಪರಶಪ್ಪ ಜಿ. (58) ಮೃತ ವ್ಯಕ್ತಿ.

ಜನಗಣತಿ ವೇಳೆ ಶಿಕ್ಷಕಗೆ ಹೃದಯಾಘಾತ: ಸಾವು

ಕೆ.ಆರ್.ನಗರ(ಮೈಸೂರು): ಜನಗಣತಿ ವೇಳೆ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ ನಗರದ ಕುವೆಂಪು ಬಡಾವಣೆಯಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. ಸಿ.ಕೆ.ರಂಗನಾಥ್ (53) ಮೃತ ಶಿಕ್ಷಕ. ಇವರು ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಬುಧವಾರ ಬೆಳಗ್ಗೆ ಜನಗಣತಿ ಮಾಡುವಾಗ ಹೃದಯಾಘಾತವಾಗಿದೆ. ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆಯೇ ಮೃತಪಟ್ಟಿದ್ದಾರೆ.

ಸರ್ಕಾರಿ ಪಿಯು ಕಾಲೇಜಿಗೆ ಈ ವರ್ಷ ಶುಕ್ರದೆಸೆ?

ಪ್ರತಿ ವರ್ಷ ಕುಸಿಯುತ್ತಿರುವ ದಾಖಲಾತಿ | ಎಸ್ಸೆಸ್ಸೆಲ್ಸಿಯಲ್ಲಿ ದಾಖಲೆ ಫಲಿತಾಂಶ ಬಂದ ಹಿನ್ನೆಲೆ: ಈ ಬಾರಿ ಪ್ರವೇಶಾತಿ ಜಿಗಿಯುವ ನಿರೀಕ್ಷೆ

• **ಲಿಂಗರಾಜು ಕೋರಾ**
ಕನ್ನಡಪ್ರಭ ವಾರ್ತೆ ಬೆಂಗಳೂರು

ರಾಜ್ಯದಲ್ಲಿ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯ ದಾಖಲೆ ಫಲಿತಾಂಶ ಹಾಗೂ ಸರಾಸರಿ ಫಲಿತಾಂಶದಲ್ಲಿ ಆಗಿರುವ ಭಾರೀ ಪ್ರಮಾಣದ ಹೆಚ್ಚಳ ಕಳೆದ ಕೆಲ ವರ್ಷಗಳಿಂದ ನಿರಂತರವಾಗಿ ಕುಸಿಯುತ್ತಿರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳ ದಾಖಲಾತಿಯನ್ನೂ ಹೆಚ್ಚಿಸುವ ನಿರೀಕ್ಷೆ ಮೂಡಿಸಿದೆ.

ಕಳೆದ ವರ್ಷಕ್ಕಿಂತ ಈ ವರ್ಷ 2.35 ಲಕ್ಷಕ್ಕೂ ಹೆಚ್ಚು ಮಕ್ಕಳು ಪಿಯು ಪ್ರವೇಶಕ್ಕೆ ಅರ್ಹತೆ ಪಡೆದಿದ್ದು, ಇದು ಖಾಸಗಿ ಕಾಲೇಜುಗಳ ಜೊತೆಗೆ ಸರ್ಕಾರಿ ಪಿಯು ಕಾಲೇಜುಗಳಲ್ಲೂ ಪ್ರವೇಶಕ್ಕೆ ಬೇಡಿಕೆ ಹೆಚ್ಚುವಂತೆ ಮಾಡಿದೆ. ಅದರಲ್ಲೂ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಓದಿದ ಬಡ ಕುಟುಂಬದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗಿದ್ದಾರೆ. ಅವರಲ್ಲಿ



ಬಹುತೇಕರು ಪಿಯು ಶಿಕ್ಷಣಕ್ಕೂ ಸರ್ಕಾರಿ ಪಿಯು ಕಾಲೇಜುಗಳನ್ನೇ ಆಯ್ಕೆ ಮಾಡಿಕೊಳ್ಳ ಬಹುದಾದ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಪಿಯು ಕಾಲೇಜು ಆವರಣಗಳು ವಿದ್ಯಾರ್ಥಿಗಳಿಂದ ಕಳೆಗಟ್ಟಿರುವುದು ರಾಜ್ಯದೆಲ್ಲೆಡೆ ಕಂಡುಬರುತ್ತಿದೆ.

ಕಳೆದ ಬಾರಿಗಿಂತ ಈ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ.25ರಷ್ಟು ಏರಿಕೆಯಾಗಿದ್ದರೆ, ಕಳೆದ ಹತ್ತು ವರ್ಷಗಳ ಸರಾಸರಿಗೆ ಹೋಲಿಸಿದರೆ ಶೇ.20ರಷ್ಟು ಹೆಚ್ಚಳವಾಗಿದೆ. 2024-25ನೇ ಸಾಲಿನಲ್ಲಿ ಒಟ್ಟಾರೆ 8.42 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ -1 ಬರೆದಿದ್ದರಾದರೂ ಪಾಸಾದವರು ಮಾತ್ರ 5.24 ಲಕ್ಷ (ಶೇ.62.34) ಮಕ್ಕಳು. ಅಂದರೆ ಬರೋಬ್ಬರಿ 3.17 ಲಕ್ಷ ಮಕ್ಕಳು ಫೇಲಾಗಿದ್ದರು. ಆದರೆ, ಈ ಬಾರಿ (2025-26) ಪರೀಕ್ಷೆ ಬರೆದ 8.56 ಲಕ್ಷಕ್ಕೂ ಹೆಚ್ಚು ಮಕ್ಕಳಲ್ಲಿ 7.60 ಲಕ್ಷಕ್ಕೂ (ಶೇ.88.73) ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಪದವಿ ಪೂರ್ವ ಶಿಕ್ಷಣ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ. ಕೇವಲ 95 ಸಾವಿರ ಮಕ್ಕಳು ಮಾತ್ರ ಅನುತ್ತೀರ್ಣರಾಗಿದ್ದಾರೆ. ಅದರಲ್ಲೂ ಒಂದಷ್ಟು ಮಕ್ಕಳು ಶೀಘ್ರ ಆರಂಭವಾಗಲಿರುವ ಪರೀಕ್ಷೆ 2ರಲ್ಲಿ ಉತ್ತೀರ್ಣರಾಗುತ್ತಾರೆ. ಇದರಿಂದ ರಾಜ್ಯದ ಪಿಯು ಕಾಲೇಜುಗಳಿಗೆ ಕಳೆದ ಬಾರಿಗಿಂತ ಈ ಬಾರಿ 2.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿಯಾಗುವ ಸಾಧ್ಯತೆ ಇದೆ.

ಸರ್ಕಾರಿ ಕಾಲೇಜುಗಳಲ್ಲಿನ ದಾಖಲಾತಿ ನಿರಂತರ ಕುಸಿತ

ಸರ್ಕಾರಿ ಪಿಯು ಕಾಲೇಜುಗಳಿಗೆ ಕೆಲ ವರ್ಷಗಳಿಂದ ವಿದ್ಯಾರ್ಥಿಗಳ ದಾಖಲಾತಿ ಗಣನೀಯವಾಗಿ ಇಳಿಕೆಯಾಗುತ್ತಿದೆ. ಶಿಕ್ಷಣ ಇಲಾಖೆಯ ಅಂಕಿ- ಅಂಶಗಳ ಪ್ರಕಾರ, ಸರ್ಕಾರಿ ಪಿಯು ಕಾಲೇಜುಗಳಲ್ಲಿ 2023ರಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದ ಮಕ್ಕಳ ಸಂಖ್ಯೆ 2.29 ಲಕ್ಷ ಇದ್ದರೆ, 2024ರಲ್ಲಿ ಅದು ಏಕಾಏಕಿ 1.55 ಲಕ್ಷಕ್ಕೆ ಇಳಿದಿದೆ, 2025ರಲ್ಲಿ ಮತ್ತೆ 1.44 ಲಕ್ಷಕ್ಕೆ, 2026ರಲ್ಲಿ 1.32 ಲಕ್ಷಕ್ಕೆ ಇಳಿಕೆಯಾಗಿದೆ. ಇನ್ನು, ಕಳೆದ ವರ್ಷ ಪ್ರಥಮ ಪಿಯುಸಿಗೆ ದಾಖಲಾದ ಮಕ್ಕಳ ಸಂಖ್ಯೆ ಇನ್ನಷ್ಟು ಕುಸಿದಿದ್ದು 1 ಲಕ್ಷ ಕೂಡ ದಾಟಿಲ್ಲ ಎನ್ನಲಾಗುತ್ತಿದೆ. ಒಂದೇ ವರ್ಷದಲ್ಲಿ ಸುಮಾರು 65 ಸಾವಿರದಷ್ಟು ಮಕ್ಕಳ ದಾಖಲಾತಿ ಕುಸಿದಿದೆ ಎನ್ನಲಾಗಿದೆ.

5000 ಉಪನ್ಯಾಸಕ ಹುದ್ದೆ ಖಾಲಿ,

ರಾಜ್ಯದಲ್ಲಿ ಒಟ್ಟು 6000 ಪಿಯು ಕಾಲೇಜುಗಳಿದ್ದರೆ, ಈ ಪೈಕಿ 1320ಕ್ಕೂ ಹೆಚ್ಚು ಸರ್ಕಾರಿ ಪಿಯು ಕಾಲೇಜುಗಳಿವೆ. ಇವುಗಳಲ್ಲಿ 12,922 ಮಂಜೂರಾದ ಉಪನ್ಯಾಸಕ ಹುದ್ದೆಗಳಿದ್ದರೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾಯಂ ಉಪನ್ಯಾ ಸಕರ ಸಂಖ್ಯೆ ಸುಮಾರು 7440. ಇನ್ನೂ 5000 ಕಾಯಂ ಉಪನ್ಯಾಸಕರ ಕೊರತೆ ಇದೆ. ಇನ್ನು, 550ಕ್ಕೂ ಹೆಚ್ಚು ಕಾಲೇಜುಗಳಿಗೆ ಕಾಯಂ ಪ್ರಾಂಶು ಪಾಲರೇ ಇಲ್ಲ. ಇನ್ನು ಮೂಲಸೌಕರ್ಯ ಕೊರತೆ ಸಾಕಷ್ಟಿದೆ. ಈ ಎಲ್ಲ ನ್ಯೂನತೆ ಸರಿಪಡಿಸಿದರೆ ಮಕ್ಕಳು ತಾನಾಗೇ ಬರುತ್ತಾರೆ ಎನ್ನುತ್ತಾರೆ ಬೋಧಕರು.

ಅರ್ಜುನ ಆನೆ ಸ್ಮರಣಾರ್ಥ ರಾಜ್ಯ ಪ್ರಶಸ್ತಿ: ಖಂಡ್ರೆ

ಹಾಸನದ ದಬ್ಬಳ್ಳಿಕಟ್ಟೆ ಅರಣ್ಯ ಪ್ರದೇಶದಲ್ಲಿ ಅರ್ಜುನ ಆನೆ ಸ್ಮಾರಕ ಉದ್ಘಾಟಿಸಿದ ಸಚಿವ

• **ಕನ್ನಡಪ್ರಭ ವಾರ್ತೆ** ಸಕಲೇಶಪುರ

ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ವೀರ ಮರಣವನ್ನಪ್ಪಿದ ಅರ್ಜುನ ಆನೆ ಹೆಸರಿನಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಹಾಸನ ಜಿಲ್ಲೆ ಸಕಲೇಶಪುರ ತಾಲೂಕಿನ ದಬ್ಬಳ್ಳಿಕಟ್ಟೆ ಅರಣ್ಯ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಅರ್ಜುನನ ಸ್ಮಾರಕವನ್ನು ಬುಧವಾರ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಶೌರ್ಯಕ್ಕೆ ಹೆಸರಾದ ಅರ್ಜುನ ಆನೆ ದಾಖಲೆಯ 8 ಬಾರಿ ಚಿನ್ನದ ಅಂಬಾರಿ ಹೊರುವ ಮೂಲಕ 7 ಕೋಟಿ ಕನ್ನಡಿಗರ ಪ್ರೀತಿಗೆ ಪಾತ್ರವಾಗಿತ್ತು. ಇದಲ್ಲದೆ ರಾಜ್ಯದ ಎಲ್ಲೇ ವನ್ಯಪ್ರಾಣಿಗಳ ಸೆರೆಹಿಡಿಯುವ ಕಾರ್ಯಚರಣೆ ಆರಂಭಿಸುವ ಮುನ್ನ ಅರ್ಜುನ ಆನೆ ಹೆಸರು ಮೊದಲಿರುತ್ತಿತ್ತು. ಶೌರ್ಯಕ್ಕೆ ಹೆಸರಾಗಿದ್ದ ಅರ್ಜುನ ಕೇವಲ ಕಾಡಾನೆ ಕಾರ್ಯಾಚರಣೆ ಮಾತ್ರವಲ್ಲದೆ ಹುಲಿ ಕಾರ್ಯಾಚರಣೆಯಲ್ಲೂ ಪಾಲ್ಗೊಳ್ಳುವ ಮೂಲಕ ರಾಜ್ಯದ ಜನರ ಮನೆಮಾತಾಗಿತ್ತು. ಇಂತಹ ಆನೆ ದುರದೃಷ್ಟವಶಾತ್ ಕಾಡಾನೆ ಕಾರ್ಯಾಚರಣೆಯಲ್ಲಿ ಮೃತಪಟ್ಟಿದ್ದು ಬೇಸರದ ವಿಚಾರ ಎಂದರು.

ಅರ್ಜುನ ಮೃತಪಟ್ಟ ವೇಳೆ ಸಮಾಧಿಗೆ ಭೇಟಿಗೆ ನೀಡಿ ಗೌರವ ಸಲ್ಲಿಸಿ ಸ್ಮಾರಕ ನಿರ್ಮಾಣದ ಭರವಸೆ ನೀಡಿದ್ದೆ. ಇದರಂತೆ ಸ್ಮಾರಕ ನಿರ್ಮಾಣ ಮಾಡಲಾಗಿದೆ. ಇನ್ನೂ ಕೆಲವು ಮೂಲಭೂತ ಸೌಕರ್ಯದ ಬೇಡಿಕೆ ಇದ್ದು ಹಂತ ಹಂತವಾಗಿ ಕಲ್ಪಿಸಲಾಗುವುದು. ಕಾಡಾನೆಗಳಿಂದ ಸ್ಮಾರಕ ಹಾನಿಗೊಳಗಾಗದಂತೆ ರಕ್ಷಿಸಲು ರೈಲ್ವೆ ಬ್ಯಾರಿಕೇಡ್ ಸೇರಿದಂತೆ ಹಲವು ಮಾರ್ಗಗಳನ್ನು ರೂಪಿಸಲಾಗುತ್ತಿದೆ ಎಂದು ಸಚಿವ ಖಂಡ್ರೆ ಹೇಳಿದರು. ಸಚಿವ ಕೃಷ್ಣಬೈರೇಗೌಡ, ಸಂಸದ ಶ್ರೇಯಸ್ ಪಟೇಲ್, ಇತರರಿದ್ದರು.



ಸಕಲೇಶಪುರದ ದಬ್ಬಳ್ಳಿಕಟ್ಟೆಯಲ್ಲಿ ನಿರ್ಮಿಸಲಾಗಿರುವ ಅರ್ಜುನ ಆನೆಯ ಸ್ಮಾರಕವನ್ನು ಸಚಿವ ಖಂಡ್ರೆ ಉದ್ಘಾಟಿಸಿದರು.

ರೈಲಲ್ಲಿ ಸೀಟಿನ ವಿಚಾರಕ್ಕೆ 3 ಮಂದಿಗೆ ಚಾಕು ಇರಿತ

ರಾಜ್ಯರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಘಟನೆ
ಆರೋಪಿಗಳಿಗೆ ಪ್ರಯಾಣಿಕರಿಂದ ಥಳಿತ

• **ಕನ್ನಡಪ್ರಭ ವಾರ್ತೆ** ಮದ್ದೂರು(ಮಂಡ್ಯ)

ರೈಲಿನಲ್ಲಿ ಸೀಟಿನ ವಿಚಾರಕ್ಕೆ ಮೂವರು ಯುವಕರು ಹಾಗೂ ಪ್ರಯಾಣಿಕರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಯುವಕರ ಗುಂಪು ಪ್ರಯಾಣಿಕರ ಮೇಲೆ ಚಾಕುವಿನಿಂದ ಇರಿದ ಘಟನೆ ನಡೆದಿದೆ. ಮದ್ದೂರು ಸಮೀಪ ಬುಧವಾರ ಮಧ್ಯಾಹ್ನ ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ರಾಜ್ಯರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಈ ಘಟನೆ ನಡೆದಿದೆ.

ಮಂಡ್ಯದಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದ ಮಧುಗಿರಿಯ ಶಿವಕುಮಾರ್ (44), ಕುಮಾರ (36), ಶಿವಕುಮಾರ್ (40) ಗಾಯಾಳುಗಳು. ಮೈಸೂರಿನ ಖುರೇಶಿ (27), ವಾಸಿಂ (23), ಸೊಯೇಬ್ (20) ಆರೋಪಿಗಳು.

ಸೀಟಿನ ವಿಚಾರವಾಗಿ ಸಹಪ್ರಯಾಣಿಕರ ಜತೆ ಆರೋಪಿಗಳು ಜಗಳ ತೆಗೆದಿದ್ದಾರೆ. ಆ ವೇಳೆ ಮಹಿಳೆ ಮೇಲೆ ಹಲ್ಲೆ ನಡೆಸಿದ್ದಾರೆ. ಆಗ ಶಿವಕುಮಾರ್ ಪ್ರಶ್ನಿಸಿದ್ದಾರೆ. ಇದರಿಂದ ಕೋಪಗೊಂಡ ಆರೋಪಿಗಳು ಅವರ ಕುತ್ತಿಗೆ, ಕಿಬ್ಬೊಟ್ಟೆ, ತೋಳಿಗೆ ಚಾಕುವಿನಿಂದ ಇರಿದಿದ್ದಾರೆ. ಭಯಗೊಂಡ ಶಿವಕುಮಾರ್ ರೈಲಿನ ಚೈನನ್ನು ಎಳೆದಿದ್ದಾರೆ. ರೈಲು ನಿಲ್ಲುತ್ತಿದ್ದಂತೆ ಆರೋಪಿಗಳು ಪರಾರಿ ಆಗುವಾಗ ಕುಮಾರ ಅವರ ಮೇಲೂ ದಾಳಿ ಮಾಡಿದ್ದಾರೆ. ಇದನ್ನು ಕಂಡ ಸಾರ್ವಜನಿಕರು ತಕ್ಷಣ ಆರೋಪಿಗಳನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿದ್ದಾರೆ.

‘ಎಲ್‌ನಿನೊ’ ಎದುರಿಸಲು ರಾಜ್ಯಸರ್ಕಾರ ತಯಾರಿ

ಜಲಭದ್ರತೆ, ಬರ ನಿರ್ವಹಣೆಗಾಗಿ ವಿಜ್ಞಾನಿಗಳು, ತಜ್ಞರ ಜತೆ ಸಚಿವ ಬೋಸರಾಜು ಸಭೆ
ಕೆರೆ, ಅಣೆಕಟ್ಟೆಗಳಲ್ಲಿ ಜಲ ಸೋರಿಕೆಯನ್ನ ತಡೆಯಿರಿ | ನೀರಿನ ಅಭಾವ ತಪ್ಪಿಸಿ: ಸಚಿವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

‘ಪ್ರಸಕ್ತ ವರ್ಷ ಎಲ್‌ನಿನೊ ಪರಿಣಾಮದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮಳೆ ಅಭಾವದ ಸಾಧ್ಯತೆಯಿದೆ. ಹೀಗಾಗಿ ಜಲಭದ್ರತೆ ಹಾಗೂ ಬರ ನಿರ್ವಹಣೆಗೆ ಅಧಿಕಾರಿಗಳು ಒತ್ತು ನೀಡಬೇಕು. ಸಣ್ಣ ನೀರಾವರಿ ಇಲಾಖೆಯ ಕೆರೆಗಳು, ಅಣೆಕಟ್ಟುಗಳಲ್ಲಿ ಜಲಸೋರಿಕೆ ತಡೆಯಬೇಕು’ ಎಂದು ಸಣ್ಣ ನೀರಾವರಿ ಇಲಾಖೆ ಸಚಿವ ಎನ್.ಎಸ್. ಬೋಸರಾಜು ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಎಲ್‌ನಿನೊ ಹಿನ್ನೆಲೆಯಲ್ಲಿ ಜಲಭದ್ರತೆ ಮತ್ತು ಬರ ನಿರ್ವಹಣೆ ಕುರಿತು ಐಐಎಸ್ಸಿ ವಿಜ್ಞಾನಿಗಳು ಹಾಗೂ ತಜ್ಞರ ಜತೆ ಬುಧವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಎದುರಾಗಬಹುದಾದ ಜಲ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಜಲ ಭದ್ರತೆ ಒದಗಿಸಲು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಕುರಿತು ಚರ್ಚಿಸಲು ಸಭೆ ಕರೆಯಲಾಗಿದೆ. ನೀರು ಅತ್ಯಮೂಲ್ಯವಾಗಿದ್ದು, ನೀರಿನ ಸಂರಕ್ಷಣೆಗೆ ಎಲ್ಲರೂ ಒತ್ತು ನೀಡಬೇಕು. ಎಲ್‌ನಿನೊ ಪ್ರಭಾವವನ್ನು ಸಮರ್ಥವಾಗಿ ಎದುರಿಸಲು ನಾವು ಇಂದಿನಿಂದಲೇ ಸಜ್ಜಾಗಬೇಕಿದೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳು, ಪಿಕ್-ಅಪ್ ಡ್ಯಾಂಗಳು ಹಾಗೂ ಕಿಂಡಿ ಅಣೆಕಟ್ಟುಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಸೋರಿಕೆಯಾಗದಂತೆ ಎಚ್ಚರ ವಹಿಸಬೇಕು ಎಂದು 18 ವಲಯಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಂತರ್ಜಲ ವೃದ್ಧಿಗೆ ಆದ್ಯತೆ ನೀಡಿ- ತಜ್ಞರು: ಸಭೆಯಲ್ಲಿ ಭಾಗವಹಿಸಿದ್ದ ತಜ್ಞರು, ರಾಜ್ಯದಲ್ಲಿ ಪ್ರಸ್ತುತ ಲಭ್ಯವಿರುವ ನೀರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇದಕ್ಕಾಗಿ ಕೆರೆಗಳ ಸಂರಕ್ಷಣೆ, ಪುನಶ್ಚೇತನಕ್ಕೆ ಒತ್ತು ನೀಡಬೇಕು. ಜತೆಗೆ ಸಾರ್ವಜನಿಕರಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಿ ಅಳವಡಿಕೆ ಕಡ್ಡಾಯಗೊಳಿಸಬೇಕು ಎಂದು ಸಲಹೆ ನೀಡಿದರು.

ತಜ್ಞರ ಸಲಹೆಗಳಿಗೆ ಸ್ಪಂದಿಸಿದ ಸಚಿವ ಬೋಸರಾಜು, ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳು, ಅಣೆಕಟ್ಟುಗಳು ಹಾಗೂ ಜಲಾಶಯಗಳ ನಿರ್ವಹಣೆಯ ಸಂಪೂರ್ಣ ಉಸ್ತುವಾರಿಯನ್ನು ಕಾರ್ಯಪಾಲಕ ಎಂಜಿನಿಯರ್‌ಗಳು ವಹಿಸಿಕೊಳ್ಳಬೇಕು. ಜತೆಗೆ ಈಗಾಗಲೇ ಇಲಾಖೆಯ ವತಿಯಿಂದ ಪ್ರಾರಂಭಿಸಲಾಗಿರುವ ನೀರಿದ್ದರೆ ನಾಳೆ ಯೋಜನೆಯನ್ನು ಜನರ ಬಳಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಕೆರೆಗಳ ಪುನಶ್ಚೇತನಕ್ಕೆ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಕೆಎಸ್‌ಆರ್‌ಎಸ್‌ಎಸಿ, ಕೆಎಸ್‌ಎನ್‌ಡಿಎಂಸಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಅಧಿಕಾರಿಗಳು ಹಾಗೂ ತಜ್ಞರು ಭಾಗವಹಿಸಿದ್ದರು.

ಪ.ಬಂಗಾಳ ಗೆದ್ದ ಮೋದಿಗೆ 10ಕ್ಕೆ ಬೆಂಗ್ಳೂರಲ್ಲಿ ಅಭಿನಂದನೆ

ಏರ್‌ಪೋರ್ಟ್‌ನಲ್ಲಿ ಬಿಜೆಪಿ ಆಯೋಜನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಜಯಭೇರಿ ಬಾರಿಸಿದ ಬಳಿಕ ಇದೇ ಭಾನುವಾರ (ಮೇ 10) ಕರ್ನಾಟಕಕ್ಕೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಜ್ಯ ಬಿಜೆಪಿ ವತಿಯಿಂದ ಬೃಹತ್ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.



ಅಂದು ಬೆಳಗ್ಗೆ ಮೋದಿ ಅವರಿಗೆ ನಗರದ ಎಚ್‌ಎಎಲ್ ವಿಮಾನ ನಿಲ್ದಾಣದ ಬಳಿ ಅಭಿನಂದನೆ ಸಲ್ಲಿಸಲಾಗುತ್ತದೆ. ಸುಮಾರು 15 ಸಾವಿರಕ್ಕೂ ಪಕ್ಷದ ಕಾರ್ಯಕರ್ತರು ಸೇರಲಿದ್ದಾರೆ. ಇದಕ್ಕಾಗಿ ಮೋದಿ ಅವರ ಕಚೇರಿ ಸುಮಾರು ಅರ್ಧ ಗಂಟೆ ಕಾಲ ಸಮಯ ನಿಗದಿಪಡಿಸಿದೆ. ಮೋದಿ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಮೋದಿ ಅವರು ನಗರದ ಕನಕಪುರ ರಸ್ತೆಯಲ್ಲಿನ ಆರ್ಟ್ ಆಫ್ ಲಿವಿಂಗ್‌ನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿದ್ದಾರೆ. ಅದೇ ವೇಳೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಪೂರ್ವಭಾವಿ ಸಭೆ ನಡೆಸಲಾಯಿತು. ಆರ್.ಅಶೋಕ್ ನೇತೃತ್ವದ ಸಭೆಯಲ್ಲಿ ಮಾಜಿ ಸಚಿವರಾದ ಲಿಂಬಾವಳಿ, ಡಾ.ಅಶ್ವತ್ಥ್, ಗೋಪಾಲಯ್ಯ, ವಿಶ್ವನಾಥ್, ಎಸ್.ಮುನಿರಾಜು, ಸಿ.ಕೆ.ರಾಮಮೂರ್ತಿ, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಹೊಸತು ಸುರಕ್ಷಿತೆ, ಬಾಳಿಕೆ, ಕೃತಕ ಬುದ್ಧಿಮತ್ತೆ ಆಧಾರಿತ ಲ್ಯಾಪ್‌ಟಾಪ್ | ವಿಶ್ವಾಸಾರ್ಹ, ಚಿಂತೆ ಇಲ್ಲದ ವ್ಯವಹಾರ ಸಾಧ್ಯ

ಏಸೂಸ್‌ನಿಂದ ಎಐ ಆಧಾರಿತ ಲ್ಯಾಪ್‌ಟಾಪ್ ಬಿಡುಗಡೆ

• **ಮಂಜುನಾಥ ಪ್ಯಾಟಿ**
ಕನ್ನಡಪ್ರಭ ವಾರ್ತೆ ನವದೆಹಲಿ

ನಾವು ಹೊಸ ಸಂಪೂರ್ಣ ಉದ್ಯಮದ ಪ್ರಮುಖ ಮಾನದಂಡ ಹೊಂದಿದ್ದು, ಭಾರತದಲ್ಲಿ ಎಕ್ಸ್‌ಪರ್ಟ್ ಬುಕ್ ಅಲ್ಟ್ರಾದೊಂದಿಗೆ ಎಐ (ಕೃತಕ ಬುದ್ಧಿಮತ್ತೆ) ಚಾಲಿತ ಕ್ರಾಂತಿ ಮುನ್ನಡೆಸಲು ಹೆಮ್ಮೆಪಡುತ್ತೇವೆ ಎಂದು ಏಸೂಸ್ (ASUS)ನ ಜಾಗತಿಕ ಸಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಯಾಮ್ಸನ್ ಹೇಳಿದರು.

ನವದೆಹಲಿಯಲ್ಲಿ ನಡೆದ ಎಕ್ಸ್‌ಪರ್ಟ್ ಬುಕ್ ಅಲ್ಟ್ರಾ ಆ್ಯಂಡ್ ನ್ಯೂ ಎಕ್ಸ್‌ಪರ್ಟ್ ಬುಕ್ ಮಾಡಲ್ಸ್ ಬಿಡುಗಡೆ ಕಾರ್ಯಕ್ರಮದಲ್ಲಿ ಲ್ಯಾಪ್‌ಟಾಪ್ ಬಿಡುಗಡೆ ಮಾಡಿ ಮಾತನಾಡಿದರು. ನಾವು ಭಾರತೀಯ ವ್ಯವಹಾರಗಳಿಗೆ ಎಐ ಯುಗದಲ್ಲಿ ಸಂಪೂರ್ಣ ವಿಶ್ವಾಸದಿಂದ ಆಳೆಯಲು ಸುರಕ್ಷಿತ, ಬಾಳಿಕೆ ಬರುವ ಮತ್ತು ಬುದ್ಧಿವಂತ ಅಡಿಪಾಯ ಒದಗಿಸುತ್ತಿದ್ದೇವೆ ಎಂದು ಭರವಸೆ ನೀಡಿದರು.

ಭಾರತದ ದಾರ್ಶನಿಕ ನಾಯಕರ ಉಜ್ವಲತೆಯೊಂದಿಗೆ ಕಾರ್ಯನಿರ್ವಹಿಸಲು, ಸಬಲೀಕರಣಗೊಳಿಸಲು ಎಕ್ಸ್‌ಪರ್ಟ್ ಬುಕ್ ವಿನ್ಯಾಸಗೊಳಿಸಲಾಗಿದೆ. ಐಟಿ ತಜ್ಞರಿಂದ ವಿಶ್ವಾಸಾರ್ಹ, ಚಿಂತೆಯಿಲ್ಲದ ವ್ಯವಹಾರಕ್ಕಾಗಿ ನಿರ್ಮಿಸಲಾಗಿದೆ. ಭಾರತದಲ್ಲಿ ಬೆಳೆಯುತ್ತಿರುವ ಆರ್ಥಿಕತೆಯ ವೈವಿಧ್ಯಮಯ ಅಗತ್ಯಗಳನ್ನು ಗುರುತಿಸಿ ನಾವು ಎಕ್ಸ್‌ಪರ್ಟ್ ಬುಕ್ ಪಿ ಸರಣಿಯನ್ನು ಗಮನಾರ್ಹವಾಗಿ ವಿಸ್ತರಿಸುತ್ತಿದ್ದೇವೆ. ಈ ಶ್ರೇಣಿಯು ಭಾರತದ ವೃತ್ತಿಪರರು ಮತ್ತು ಸಣ್ಣ ಮತ್ತು ಮಧ್ಯಮ ಗಾತ್ರದ ವ್ಯವಹಾರಗಳಿಗೆ ಬಹುಮುಖ ಎಂಜಿನ್ ಆಗಿದ್ದು, ನಮ್ಮ ದೃಢವಾದ ಚಿಂತೆ ಮುಕ್ತ ವ್ಯಾಪಾರ ಭರವಸೆ ನೀಡುವಾಗ ಬಹು ಸಂರಚನೆಗಳಲ್ಲಿ ಆಯ್ಕೆಯ ಶಕ್ತಿಯನ್ನು ನೀಡುತ್ತದೆ ಎಂದು ಹೇಳಿದರು. ಭಾರತದ ಅತ್ಯಂತ ವ್ಯಾಪಕವಾದ ಸೇವಾ ಪರಿಸರ ವ್ಯವಸ್ಥೆಗಳಲ್ಲಿ ಬೆಂಬಲಿತವಾದ ಏಸೂಸ್ ವ್ಯಾಪಾರ ಬಳಕೆದಾರರಿಗೆ ಮೀಸಲಾದ ಟೋಲ್ ಫ್ರೀ ಬೆಂಬಲ (ಬೆಳಗ್ಗೆ 9 ರಿಂದ ರಾತ್ರಿ 9, ಸೋಮವಾರದಿಂದ ಶನಿವಾರದವರೆಗೆ), 15,500 ಅಧಿಕ ಪಿನ್ ಕೋಡ್‌ಗಳಲ್ಲಿ ಡೀಫಾಲ್ಟ್ ಆನ್‌ಸೈಟ್ ಸೇವೆ, 80 ದೇಶಗಳಲ್ಲಿ ಮಾನ್ಯವಾಗಿರುವ ಡೀಫಾಲ್ಟ್ ಅಂತಾರಾಷ್ಟ್ರೀಯ ಖಾತರಿ, ಅಡಾಪ್ಟರ್ ಖಾತರಿಯು ಉತ್ಪನ್ನ ಖಾತರಿಗೆ ಸಮನಾಗಿರುತ್ತದೆ. 5 ವರ್ಷಗಳವರೆಗೆ ವಿಸ್ತೃತ ಸೇವಾ ಪ್ಯಾಕ್‌ಗಳು (ಖಾತರಿ ವಿಸ್ತರಣೆ, ಮುಂದಿನ ವ್ಯವಹಾರ ದಿನದ ಬೆಂಬಲ, ಸ್ಥಳೀಯ ಅಪಘಾತ ಹಾನಿ ರಕ್ಷಣೆ, ಬ್ಯಾಟರಿ ಖಾತರಿ ವಿಸ್ತರಣೆ) ಮತ್ತು ಪೋಸ್ಟ್ ವಾರಂಟಿ ಸೇವಾ ಪ್ಯಾಕ್‌ಗಳೊಂದಿಗೆ ಸಕ್ರಿಯಗೊಳಿಸಲಾಗಿದೆ ಎಂದರು.



ಇನ್‌ಟೆಲ್ ಇಂಡಿಯಾದ ಗ್ಲೋಬಲ್ ಅಕೌಂಟ್ಸ್‌ನ ಹಿರಿಯ ನಿರ್ದೇಶಕ ಪಿ.ಪಿ.ಸುನಿಲ ಆಚಾರ್ಯ ಮಾತನಾಡಿ, INTEL® CORE™ ULTRA ಸರಣಿ 3 ಪ್ರೊಸೆಸರ್‌ಗಳಿಂದ ನಡೆಸಲ್ಪಡುವ ಏಸೂಸ್ ಎಕ್ಸ್‌ಪರ್ಟ್ ಬುಕ್. ಆಳವಾದ ಪ್ಲಾಟ್‌ಫಾರ್ಮ್ ಎಂಜಿನಿಯರಿಂಗ್ ನೈಜ ಪ್ರಪಂಚದ ವ್ಯವಹಾರ ಅಗತ್ಯ ಗಳನ್ನು ಪೂರೈಸಿದಾಗ ಏನು ಸಾಧ್ಯ ಎಂಬುವುದನ್ನು ಪ್ರತಿನಿಧಿಸುತ್ತದೆ. ಏಸೂಸ್ ಜೊತೆಗಿನ ನಿಕಟ ಸಹ ಎಂಜಿನಿಯರಿಂಗ್ ಮೂಲಕ ಅಸಾಧಾರಣ ಕಾರ್ಯಕ್ಷಮತೆ, ಅಂತರ್ನಿರ್ಮಿತ ಎಐ ವೇಗವರ್ಧನೆ ಮತ್ತು ಅತ್ಯುತ್ತಮ ದಕ್ಷತೆಯನ್ನು ಸಂಯೋಜಿಸುವ ಲ್ಯಾಪ್‌ಟಾಪನ್ನು ನಾವು ತಲುಪಿಸಿದ್ದೇವೆ ಎಂದರು.

ಏನು ವಿಶೇಷ ಹೊಂದಿದೆ?

- ಏಸೂಸ್ ಎಕ್ಸ್‌ಪರ್ಟ್ ಬುಕ್ ಅಲ್ಟ್ರಾ ಫೆದರ್‌ಲೈಟ್ 0.99 ಕೆಜಿ ಮೆಗ್ನೀಸಿಯಮ್ ಚಾಸಿಸ್
- ಇಂಟೆಲ್ ಕೋರ್ ಅಲ್ಟ್ರಾ ಸೀರೀಸ್‌ನ 3 ಪ್ರೊಸೆಸರ್
- 14.0 ಇಂಚಿನ 3ಕೆ 120ಹ್ಜ ಆಂಟಿ-ಗ್ಲೇರ್‌ಟಚ್‌ಸ್ಕ್ರೀನ್ ಟ್ಯಾಂಡೆಮ್ ಒಎಲ್‌ಇಡಿ ಡಿಸ್‌ಪ್ಲೆ
- 6-ಸ್ಪೀಕರ್‌ಡಾಲ್ಬಿ ಪ್ರಮಾಣೀಕೃತ ಪ್ರಾದೇಶಿಕ ಧ್ವನಿ ವ್ಯವಸ್ಥೆ
- 26 ಗಂಟೆಗಳ ಬ್ಯಾಟರಿ ಬಾಳಿಕೆ ನೀಡುವ 70ಡಬ್ಲ್ಯುಎಚ್ ಬ್ಯಾಟರಿ

‘ಕಾಮು’ಚಂದ್ರರಾವ್ ಅಮಾನತು ಆದೇಶ ಹಿಂಪಡೆದ ರಾಜ್ಯ ಸರ್ಕಾರ

ಮಾಸಾಂತ್ಯಕ್ಕೆ ನಿವೃತ್ತಿ ಆಗಬೇಕಿರುವ ಅಧಿಕಾರಿಗೆ ರಿಲೀಫ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಲೈಂಗಿಕ ಹಗರಣ ಸಂಬಂಧ ಐದು ತಿಂಗಳ ಹಿಂದೆ ತಲೆದಂಡಕ್ಕೆ ಗುರಿಯಾಗಿದ್ದ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಡಾ.ಕೆ.ರಾಮಚಂದ್ರರಾವ್ ಅವರ ಅಮಾನತು ಆದೇಶವನ್ನು ರಾಜ್ಯ ಸರ್ಕಾರ ಬುಧವಾರ ಹಿಂಪಡೆದಿದೆ.



ಇದರೊಂದಿಗೆ ಇದೇ ತಿಂಗಳಾಂತ್ಯಕ್ಕೆ ಸೇವೆಯಿಂದ ನಿವೃತ್ತರಾಗಲಿದ್ದ ರಾಮಚಂದ್ರರಾವ್ ಅವರಿಗೆ ರಿಲೀಫ್ ಸಿಕ್ಕಂತಾಗಿದೆ. ತಮ್ಮ ಸರ್ಕಾರಿ ಕಚೇರಿಯಲ್ಲೇ ಮಹಿಳೆಯರ ಜತೆ ಲೈಂಗಿಕ ನಡವಳಿಕೆ ತೋರಿದ ಆರೋಪಕ್ಕೆ ರಾವ್ ತುತ್ತಾಗಿದ್ದರು. ಕಳೆದ ಜನವರಿಯಲ್ಲಿ ಲೈಂಗಿಕ ಹಗರಣ ಸಂಬಂಧ ವಿಡಿಯೋಗಳು ಬಹಿರಂಗವಾಗಿದ್ದವು. ಈ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರವು, ರಾಮಚಂದ್ರರಾವ್‌ರನ್ನು ಜ.19 ರಂದು ಅಮಾನತುಗೊಳಿಸಿ ಆದೇಶಿಸಿತ್ತು. ಐದು ತಿಂಗಳ ನಂತರ ಅವರ ಅಮಾನತು ಹಿಂಪಡೆದ ಸರ್ಕಾರವು, ಪೊಲೀಸ್ ನಿಯಾಮವಳಿ ಡಿಜಿಪಿಯಾಗಿ ಅವರನ್ನು ನೇಮಿಸಿದೆ.

ಇಲಾಖೆ ವಿಚಾರಣೆ ಅನಿಶ್ಚಿತತೆ?: ಲೈಂಗಿಕ ಹಗರಣ ಬೆಳಕಿಗೆ ಬಂದಾಗ ತಮ್ಮ ಮೇಲಿನ ಆರೋಪವನ್ನು ರಾಮಚಂದ್ರರಾವ್ ನಿರಾಕರಿಸಿದ್ದರು. ವಿಡಿಯೋಗಳ ಸಾಚಾತನದ ಬಗ್ಗೆ ಪರಿಶೀಲನೆಗೆ ಸರ್ಕಾರ ಸಮಿತಿ ರಚಿಸಿತ್ತು. ಸಮಿತಿಯು ವಿಡಿಯೋ ಅಸಲಿ ಎಂದು ವರದಿ ನೀಡಿತ್ತು. ಈ ವರದಿ ಆಧರಿಸಿ ಇಲಾಖಾ ವಿಚಾರಣೆ ನಡೆಸುವ ಬಗ್ಗೆ ಸರ್ಕಾರ ಚಿಂತಿಸಿತ್ತು. ಆದರೆ ಈ ಬಗ್ಗೆ ಯಾವುದೇ ತೀರ್ಮಾನ ಹೊರಬೀಳದೆ ಅನಿಶ್ಚಿತವಾಗಿದೆ.

ರಾಜ್ಯದಲ್ಲಿ ತಾಪಮಾನ (ಡಿಗ್ರಿ ಸೆಲ್ಸಿಯಸ್‌ಗಳಲ್ಲಿ)

	ಗದಗ	ಹಾವೇರಿ	ಶಿವಮೊಗ್ಗ	ಕಾರವಾರ	ಬೆಳಗಾವಿ
ಗರಿಷ್ಠ	38.0	37.4	37.2	37.0	36.0
ಕನಿಷ್ಠ	22.6	22.4	22.8	27.4	19.4

ಹರಿಹರ ಶಾಸಕ ಹರೀಶ್ ವಿರುದ್ಧ ಕೋರ್ಟ್‌ನಿಂದ ಬಂಧನ ವಾರೆಂಟ್

ಹರಿಹರ: ಪೌರಕಾರ್ಮಿಕರನ್ನು ನಿಂದಿಸಿ, ಜಾತಿನಿಂದನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಗೈರಾದ ಹರಿಹರ ಶಾಸಕ ಬಿ.ಪಿ.ಹರೀಶ್ ಅವರಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಬಂಧನ ವಾರೆಂಟ್ ಜಾರಿ ಮಾಡಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದ ಹರೀಶ್ ಅವರನ್ನು ಅಭಿನಂದಿಸಲು 2023ರ ಮೇ 16ರಂದು ಹರಿಹರ ನಗರಸಭೆ ಪೌರಕಾರ್ಮಿಕರು ಹಾಗೂ ಮಾದಿಗ ಸಮಾಜದ ಮುಖಂಡರು ಬಂದಿದ್ದರು. ಆಗ ಶಾಸಕ ಪಕ್ಷಕ್ಕೆ ಬೆಂಬಲಿಸಿಲ್ಲ. ನಿಮಗೆ ಕೃತಜ್ಞತೆಯಿಲ್ಲ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎಂದು ಆರೋಪಿಸಲಾಗಿತ್ತು. ಮಾರನೇ ದಿನ ವೇದಿಕೆಯಲ್ಲಿ ಹರೀಶ್, ನಾನು ಆ ರೀತಿ ಹೇಳಿದ್ದು ನಿಜ ಮತ್ತು ಅದು ಸರಿಯಾಗಿಯೇ ಇದೆ ಎಂದಿದ್ದರು.



ಮರ್ಯಾದೆಗೇಡು ಹತ್ಯೆ ತಡೆವ 'ಇವ ನಮ್ಮವ ವಿಧೇಯಕ' ಜಾರಿ

ಬೆಂಗಳೂರು: ರಾಜ್ಯದಲ್ಲಿ ಮರ್ಯಾದೆಹತ್ಯೆ ನಿಷೇಧಿಸುವ ಹಾಗೂ ಅಂತರ್‌ಜಾತಿ, ಅಂತರ್ ಧರ್ಮದ ವಿವಾಹಕ್ಕೆ ಅಡ್ಡಿ, ಸಂಪ್ರದಾಯಗಳ ಹೆಸರಿನಲ್ಲಿ ಅಪರಾಧ ತಡೆಗಟ್ಟುವ ಸಲುವಾಗಿ ಬಜೆಟ್ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಅನುಮೋದನೆಗೊಂಡ ರಾಜ್ಯಪಾಲರ ಅಂಕಿತ ಪಡೆದಿದ್ದ 'ಇವ ನಮ್ಮವ ಇವ ನಮ್ಮವ ವಿಧೇಯಕ' ಮೇ 5 ರಿಂದ ಜಾರಿಯಾಗಿದೆ. ಬಜೆಟ್ ಅಧಿವೇಶನದಲ್ಲಿ ಉಭಯಸದನಗಳಲ್ಲಿ ಒಪ್ಪಿಗೆಪಡೆದಿದ್ದ ವಿಧೇಯಕಕ್ಕೆ ರಾಜ್ಯಪಾಲರು ಏ.9 ರಂದು ಅಂಗೀಕಾರ ಸೂಚಿಸಿದ್ದು, ಬೆನ್ನಲ್ಲೇ ಅಧಿಕೃತ ರಾಜ್ಯಪತ್ರ ಪ್ರಕಟ ಮಾಡಲಾಗಿತ್ತು. ತನ್ಮೂಲಕ 'ಕರ್ನಾಟಕ ವಿವಾಹದಲ್ಲಿ ಆಯ್ಕೆ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ತಡೆಗಟ್ಟುವಿಕೆ ಮತ್ತು ನಿಷೇಧ ವಿಧೇಯಕ - 2026' ಅಸ್ತಿತ್ವಕ್ಕೆ ಬಂದಿತ್ತು. ಮೇ 5 ರಂದು ಅಧಿಸೂಚನೆ ಹೊರಡಿಸಿರುವ ರಾಜ್ಯ ಸರ್ಕಾರವು ಮೇ 5 ರಿಂದ ವಿಧೇಯಕದ ಎಲ್ಲಾ ಉಪಬಂಧಗಳು ಜಾರಿಗೆ ಬರುವಂತೆ ಗೊತ್ತುಪಡಿಸಿರುವುದಾಗಿ ತಿಳಿಸಿದೆ.

ಐಜಿಪಿ ಸಂದೀಪ್ ಪಾಟೀಲ್ ಸೇರಿ ಮೂವರು ಐಪಿಎಸ್‌ಗಳು ವರ್ಗ


ಸಂದೀಪ್ ಪಾಟೀಲ್


ಅನುಪಮ್


ಡಾ.ಚೇತನ್ ಸಿಂಗ್

ಬೆಂಗಳೂರು: ರಾಜ್ಯ ಸಶಸ್ತ್ರ ಮೀಸಲು ಪಡೆಯ ಐಜಿಪಿ ಸಂದೀಪ್ ಪಾಟೀಲ್ ಸೇರಿ 3 ಹಿರಿಯ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಉತ್ತರವಲಯ ನೂತನ ಐಜಿಪಿಯಾಗಿ ಪಾಟೀಲ್ ನೇಮಕವಾಗಿದ್ದು, ಸಿಐಡಿ ಐಜಿಪಿ ಡಾ.ಚೇತನ್ ಸಿಂಗ್ ರಾಥೋಡ್ ನಿಯೋಜನೆಗೊಂಡಿದ್ದಾರೆ. ಸಂದೀಪ್ ರಿಂದ ತೆರವಾದ ಸ್ಥಾನಕ್ಕೆ ಅನುಪಮ್ ಅಗರ್ವಾಲ್‌ರನ್ನು ನೇಮಿಸಿದೆ.

ಬಿಜೆಪಿ ಮಾಜಿ ಕಾರ್ಯದರ್ಶಿ ಜಗದೀಶ್ ಹಿರೇಮನಿ ನಿಧನ

ಬೆಂಗಳೂರು: ರಾಜ್ಯ ಬಿಜೆಪಿ ನಿಕಟಪೂರ್ವ ಕಾರ್ಯದರ್ಶಿ ಜಗದೀಶ್ ಹಿರೇಮನಿ (52) ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಮೃತಪಟ್ಟಿದ್ದಾರೆ. ಬಾಗಲಕೋಟೆ ಮೂಲದ ಜಗದೀಶ್ ವಿದ್ಯಾರ್ಥಿ ದಿಸೆಯಲ್ಲಿ ಎಬಿವಿಪಿ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿದ್ದರು. ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಬಿಜೆಪಿಯ ಪ್ರಶಿಕ್ಷಣ ವಿಭಾಗದ ಸಂಚಾಲನಾ ತಂಡದಲ್ಲೂ ಕಾರ್ಯ ನಿರ್ವಹಿಸಿದ್ದರು. ಜಗದೀಶ್ ಹಿರೇಮನಿ ಅವರ ನಿಧನಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ತಿನ ಪ್ರತಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ. ಗುರುವಾರ ಬಾಗಲಕೋಟೆಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ.



ಸುದ್ದಿ ಸಿಂಚನ

ನಾಯಕತ್ವ ಬಗ್ಗೆ ಹೈಕಮಾಂಡ್ ಶೀಘ್ರ ತೀರ್ಮಾನ: ಡಾ| ಪರಂ

ಬೆಂಗಳೂರು: ರಾಜ್ಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಹೈಕಮಾಂಡ್ ಶೀಘ್ರ ತೀರ್ಮಾನ ತೆಗೆದುಕೊಳ್ಳಲಿದೆ ಯೆಂಬ ನಂಬಿಕೆ ಇದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪಂಚ ರಾಜ್ಯಗಳ ಚುನಾವಣೆಗಳು ಮುಗಿದಿವೆ. ಕರ್ನಾಟಕ ನಾಯಕತ್ವ ಗೊಂದಲಕ್ಕೆ ಸಂಬಂಧಿಸಿದ ವಿಷಯಕ್ಕೆ ಶೀಘ್ರದಲ್ಲೇ ತೆರೆ ಬೀಳಲಿದೆ ಎಂದರು.

ಶೃಂಗೇರಿ ಅಧಿಕಾರಿಗೆ ಒತ್ತಡ ಹೇರಿದ್ದು ಯಾರೆಂದು ಸಿಬಿಐ ತನಿಖೆ ಆಗಲಿ: ಅಶೋಕ್

ಬೆಂಗಳೂರು: ಶೃಂಗೇರಿ ಕ್ಷೇತ್ರದಲ್ಲಿ ಡಿ.ಎನ್.ಜೀವರಾಜ್ ಅವರ ಶಾಸಕ ಸ್ಥಾನದ ಫಲಿತಾಂಶ ಬಂದ ನಂತರವೂ ಪ್ರಕಟಿಸಲು ಒಂದು ದಿನ ತಡ ಮಾಡಲು ಚುನಾವಣಾಧಿಕಾರಿಗಳ ಮೇಲೆ ಒತ್ತಡ ಹಾಕಿದವರು ಯಾರೆಂಬುದನ್ನು ತಿಳಿಯಲು ಸಿಬಿಐ ತನಿಖೆ ಮಾಡಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ. ಕಾಂಗ್ರೆಸ್ ನಾಯಕರು ವೋಟ್ ಚೋರಿ ಬಗ್ಗೆ ಮಾತಾಡುತ್ತಾರೆ. ಶೃಂಗೇರಿಯಲ್ಲಿ ಕೊನೆಯಲ್ಲಿ ಅಂಚೆ ಮತಗಳನ್ನು ಎಣಿಸಲಾಗಿದೆ. ಚುನಾವಣಾ ಧಿಕಾರಿಗಳಿಗೆ ಕರೆ ಮಾಡಿ ಒತ್ತಡ ಹಾಕಿದವರು ಯಾರು ಎಂಬುದು ಸಿಬಿಐ ತನಿಖೆಯಿಂದ ಬಯಲಾಗ ಬೇಕಿದೆ ಎಂದರು.

ಪಕ್ಷಾಂತರ ನಿಷೇಧ ಕಾಯ್ದೆ ಪರಿಶೀಲನಾ ಸಮಿತಿ ಸಭೆ ಜೂನ್‌ನಲ್ಲಿ: ಖಾದರ್

ಮಂಗಳೂರು: ಪಕ್ಷಾಂತರ ನಿಷೇಧ ಕಾನೂನು ಪರಿಶೀಲನೆಗೆ ಲೋಕಸಭೆಯ ಸ್ಪೀಕರ್ ಅವರಿಂದ ರಚಿಸಲ್ಪಟ್ಟ ನಾಲ್ಕು ರಾಜ್ಯಗಳ ಸ್ಪೀಕರ್‌ಗಳ ಉನ್ನತ ಮಟ್ಟದ ಸಮಿತಿಯ 2 ಸಭೆಗಳು ಈಗಾಗಲೇ ನಡೆದಿದೆ. ಸಮಿತಿಯ ಅಂತಿಮ ಹಂತದ ಸಭೆ ಕರ್ನಾಟಕದಲ್ಲಿ ಜೂನ್ ಕೊನೆಯಲ್ಲಿ ನಡೆಯಲಿದೆ ಎಂದು ಸಮಿತಿಯ ಸದಸ್ಯರಾಗಿರುವ, ಕರ್ನಾಟಕ ವಿಧಾನ ಸಭೆಯ ಸ್ಪೀಕರ್ ಯು.ಟಿ.ಖಾದರ್ ಹೇಳಿದರು. ಮಹಾರಾಷ್ಟ್ರ ವಿಧಾನ ಸಭೆಯ ಸ್ಪೀಕರ್ ಅಧ್ಯಕ್ಷತೆಯಲ್ಲಿ ಕರ್ನಾಟಕ, ಒರಿಸ್ಸಾ, ನಾಗಲ್ಯಾಂಡ್ ರಾಜ್ಯಗಳ ಸ್ಪೀಕರ್‌ಗಳ ಸಮಿತಿ ಇದಾಗಿದೆ. ಚುನಾಯಿತ ಪ್ರತಿನಿಧಿಗಳು ಪದೇ ಪದೇ ಪಕ್ಷಾಂತರ ಮಾಡುವುದನ್ನು ತಡೆಯಲು ಈ ಸಮಿತಿ ರಚಿಸಲಾಗಿದೆ ಎಂದರು.

ರಾಜ್ಯ ಶಿಕ್ಷಣ ನೀತಿ ಬಗ್ಗೆ ಇಂದು ಸಂಪುಟ ಚರ್ಚೆ

ದ್ವಿಭಾಷಾ ನೀತಿ ಜಾರಿ ಬಗ್ಗೆ ನಿರ್ಧಾರವಾಗುತ್ತಾ?: ಕುತೂಹಲ | ಈ ಹಿಂದೆ 2 ಸಂಪುಟ ಸಭೆಗಳಲ್ಲಿ ಮುಂದೂಡಿಕೆಯಾಗಿದ್ದ ವಿಚಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯ ಶಿಕ್ಷಣ ನೀತಿ ಆಯೋಗದ ಅಂತಿಮ ವರದಿ ಬಗ್ಗೆ ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ವಿಶೇಷ ಚರ್ಚೆ ನಡೆಯಲಿದ್ದು, ದ್ವಿಭಾಷಾ ನೀತಿ ಅನುಷ್ಠಾನ ಸೇರಿದಂತೆ ವಿವಿಧ ವಿಷಯಗಳ ಕುರಿತ ವರದಿ ಬಗ್ಗೆ ಸಂಪುಟ ಸಭೆಯಲ್ಲಿ ಯಾವ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂಬುದು ಕುತೂಹಲ ಮೂಡಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಬದಲಿಗೆ ರಾಜ್ಯ ಮಟ್ಟದ ಶಿಕ್ಷಣ ನೀತಿ ಜಾರಿ ಮಾಡಲು ವರದಿ ನೀಡುವಂತೆ ರಾಜ್ಯ ಸರ್ಕಾರವು 2023ರಲ್ಲಿ ಪ್ರೊ. ಸುಖದೇವ್ ಥೋರಟ್ ನೇತೃತ್ವದಲ್ಲಿ ಆಯೋಗ ರಚನೆ ಮಾಡಿತ್ತು.

ಈ ಆಯೋಗವು ನೀಡಿದ್ದ ಮಧ್ಯಂತರ ವರದಿ ಆಧಾರದ ಮೇಲೆ ಎನ್‌ಇಪಿಯಲ್ಲಿನ ನಾಲ್ಕು ವರ್ಷಗಳ ಪದವಿ ಬದಲಿಗೆ ಮೂರು ವರ್ಷಗಳ ಪದವಿಯನ್ನು ಈಗಾಗಲೇ ರಾಜ್ಯ ಸರ್ಕಾರ ಜಾರಿ ಮಾಡಿದೆ. ಇದೀಗ ಅಂತಿಮ ವರದಿ ಆಧಾರದ ಮೇಲೆ ಯಾವೆಲ್ಲಾ ಶಿಫಾರಸುಗಳನ್ನು ಒಳಗೊಂಡಂತೆ ರಾಜ್ಯ ಶಿಕ್ಷಣ ನೀತಿ ಜಾರಿ ಮಾಡಲಿದೆ. ಈ ಬಗ್ಗೆ ಗುರುವಾರ ನಡೆಯಲಿರುವ ಸಂಪುಟ ಸಭೆಯಲ್ಲಿ ಅಂತಿಮ ನಿರ್ಧಾರ ಮಾಡಲಿದ್ದಾರೆಯೇ ಎಂಬುದು ಕುತೂಹಲ ಮೂಡಿಸಿದೆ.



ಏಕೆಂದರೆ, ರಾಜ್ಯ ಶಿಕ್ಷಣ ನೀತಿ ಆಯೋಗದ ಅಂತಿಮ ವರದಿ ಬಗ್ಗೆ ಈ ಮೊದಲೇ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪವಾಗಿತ್ತು. ಆದರೆ, ಕೆಲ ತಿದ್ದುಪಡಿಗಳೊಂದಿಗೆ ವರದಿ ಮಂಡಿಸುವಂತೆ ಎರಡು ಬಾರಿ ವಿಷಯವನ್ನು ಸಂಪುಟ ಸಭೆಯಲ್ಲಿ ಮುಂದೂಡಲಾಗಿತ್ತು. ಇದೀಗ ಸಂಪುಟ ಸಭೆಯಲ್ಲಿ ವಿಶೇಷ ಚರ್ಚೆ ನಡೆಸಲು ಉದ್ದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವರದಿಯಲ್ಲಿರುವ ಶಿಫಾರಸುಗಳೇನು?: ಮೂಲಗಳ ಪ್ರಕಾರ, ರಾಜ್ಯದ ಶಾಲೆಗಳಲ್ಲಿ ದ್ವಿಭಾಷಾ ನೀತಿಯನ್ನು ಅನುಷ್ಠಾನಗೊಳಿಸಬೇಕು. ಇದರಲ್ಲಿ ಒಂದು ಮಾತೃಭಾಷೆ ಅಥವಾ ಕನ್ನಡ ಕಡ್ಡಾಯವಾಗಿರಬೇಕು. ಜತೆಗೆ, ಖಾಸಗಿ ಅನುದಾನರಹಿತ ಸಂಸ್ಥೆಗಳಲ್ಲೂ ಎಸ್ಸಿ, ಎಸ್ಟಿ, ಒಬಿಸಿ ಮೀಸಲಾತಿ ನಿಯಮ ಅನ್ವಯಿಸಬೇಕು ಎಂದು ಎರಡು ಸಂಪುಟಗಳ 2,197 ಪುಟಗಳ ಶಿಕ್ಷಣ ನೀತಿಯ ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಜತೆಗೆ ಎಲ್ಲ ಬೋರ್ಡ್ ಶಾಲೆಗಳಲ್ಲಿ 5ನೇ ತರಗತಿ ಯವರೆಗೆ ಕನ್ನಡ/ಮಾತೃಭಾಷೆಯನ್ನು ಬೋಧನಾ ಮಾಧ್ಯಮವನ್ನಾಗಿ ಕಡ್ಡಾಯಗೊಳಿಸಬೇಕು.

ಶಾಲಾ ಶಿಕ್ಷಣದಲ್ಲಿ 2+8+4 ರಚನೆ (ಪೂರ್ವ ಪ್ರಾಥಮಿಕ- 2 ವರ್ಷ, ಪ್ರಾಥಮಿಕ- 8 ವರ್ಷ ಮತ್ತು ಮಾಧ್ಯಮಿಕ ಶಿಕ್ಷಣ- 4 ವರ್ಷ) ಅಳವಡಿಕೆ ಮಾಡಬೇಕು. ರಾಜ್ಯಾದ್ಯಂತ ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕು. ಕೆಲವು ಪರೋಕ್ಷ ತೆರಿಗೆಗಳ ಮೇಲೆ ಶಿಕ್ಷಣ ಸರ್ಚಾರ್ಜ್ ಪರಿಗಣಿಸಿ ಶಿಕ್ಷಣ ಬಜೆಟ್ ಹೆಚ್ಚಳ ಮಾಡಬೇಕು ಎಂದು ಹೇಳಲಾಗಿದೆ.

ಶುಲ್ಕ ನಿಯಂತ್ರಿಸಲು ಪ್ರಾಧಿಕಾರ: ಇನ್ನು ಪದವಿಪೂರ್ವ ಕಾರ್ಯಕ್ರಮಗಳಲ್ಲಿ ಸಮಗ್ರ ಲೈಂಗಿಕ ಶಿಕ್ಷಣವನ್ನು ಪರಿಚಯಿಸಬೇಕು. ಖಾಸಗಿ ಸಂಸ್ಥೆಗಳಲ್ಲಿ ಶುಲ್ಕ ನಿಯಂತ್ರಣಕ್ಕೆ ಶಾಶ್ವತ ನಿಯಂತ್ರಣ ವ್ಯವಸ್ಥೆ ಸ್ಥಾಪಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಇಷ್ಟೆಲ್ಲಾ ಅಂಶಗಳಿರುವ ವರದಿಯ ಬಗ್ಗೆ ಸಂಪುಟ ಸಭೆ ಯಾವ ರೀತಿ ನಿರ್ಧಾರ ಕೈಗೊಳ್ಳಲಿದೆ ಎಂಬುದು ಇದೀಗ ಚರ್ಚೆಗೆ ಕಾರಣವಾಗಿದೆ.

ಇತರೆ ವಿಷಯಗಳು: ಸಭೆಯಲ್ಲಿ ಶಿಕ್ಷಣ ನೀತಿ ಹೊರತುಪಡಿಸಿ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಟೌನ್‌ಶಿಪ್‌ಗೆ ಬಸವಸಾಗರ ಅಣೆಕಟ್ಟಿನಿಂದ 132 ಕೋಟಿ ರು. ವೆಚ್ಚದಲ್ಲಿ ಕುಡಿಯುವ ನೀರು ಒದಗಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆಯುವ ಸಾಧ್ಯತೆಯಿದೆ.

ಜತೆಗೆ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ತಿದ್ದುಪಡಿ ವಿಧೇಯಕ -2026ಕ್ಕೆ ಅಂಗೀಕಾರ ನೀಡುವ ನಿರೀಕ್ಷೆ ಇದೆ.

ಶೃಂಗೇರಿ ಶಾಸಕರಾಗಿ ಜೀವರಾಜ್ ಪ್ರಮಾಣ ವಚನ

ಚಪ್ಪಲಿ ಬಿಟ್ಟು, ಮೆಟ್ಟಿಲುಗಳಿಗೆ ನಮಿಸಿ ವಿಧಾನಸೌಧ ಪ್ರವೇಶಿಸಿದ ಬಿಜೆಪಿ ಪಕ್ಷದ ಶಾಸಕ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಂಚೆ ಮತಗಳ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ರಾಜ್ಯಪಾಲರ ಮೊರೆ ಹೋದ ಬಳಿಕ ಬುಧವಾರ ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದರು.

ವಿಧಾನಸೌಧದ ವಿಧಾನ ಮಂಡಲ ಕೊಠಡಿಯಲ್ಲಿ ಸ್ಪೀಕರ್ ಖಾದರ್ ಅವರ ಸಮ್ಮುಖದಲ್ಲಿ ಶೃಂಗೇರಿ ಶಾರದಾಂಬೆ ಮತ್ತು ಭಗವಂತನ ಹೆಸರಿನಲ್ಲಿ ಜೀವರಾಜ್ ಪ್ರಮಾಣವಚನ ಸ್ವೀಕರಿಸಿದರು.

ಈ ವೇಳೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಜೀವರಾಜ್ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

ಇದಕ್ಕೂ ಮೊದಲು ಜೀವರಾಜ್ ಅವರು ವಿಧಾನಸೌಧದ ಕೆಂಗಲ್ ದ್ವಾರದಲ್ಲಿ ಚಪ್ಪಲಿ ಬಿಟ್ಟು ವಿಧಾನಸೌಧದ ಮೆಟ್ಟಿಲುಗಳಿಗೆ ನಮಸ್ಕರಿಸಿ ಬಳಿಕ ವಿಧಾನಸೌಧ ಪ್ರವೇಶಿಸಿದರು.



ಕೋರ್ಟ್ ನ್ಯಾಯ ಕೊಟ್ಟಿದೆ- ಜೀವರಾಜ್: ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜೀವರಾಜ್, ನಾಲ್ಕನೇ ಬಾರಿಗೆ ಶಾಸಕನಾಗಿ ಪ್ರಮಾಣವಚನ ಸ್ವೀಕರಿಸಿದ್ದೇನೆ. ನನಗೆ ಅತ್ಯಂತ ಸಂತೋಷವಾಗಿದೆ. ಸತತ ಮೂರು ವರ್ಷಗಳ ಹೋರಾಟದ ಬಳಿಕ ನ್ಯಾಯಾಲಯ ನ್ಯಾಯ ಕೊಟ್ಟಿದೆ. ಮೂರು ವರ್ಷಗಳ ಮಧ್ಯದಲ್ಲಿ ಶಾಸಕನಾಗಿದ್ದೇನೆ. ಈ ಅವಧಿಯಲ್ಲಿ ವ್ಯವಸ್ಥೆಯಲ್ಲಿ ಏನೆಲ್ಲಾ ನಡೆದಿದೆ ಎಂಬುದನ್ನು ನೋಡುವುದು ಕಷ್ಟ. ಆದರೆ, ನನಗೆ ನನ್ನ ಸಾಮರ್ಥ್ಯದ ಮೇಲೆ ನಂಬಿಕೆ ಇದೆ. ಮೂರು ಬಾರಿ ಶಾಸಕನಾಗಿ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ ಶೃಂಗೇರಿ ಕ್ಷೇತ್ರದ ಸೇವಕನಾಗಿ ನ್ಯಾಯ ಕೊಡುವ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಪ್ರಮಾಣ ವಚನ ವಿಳಂಬವಿಲ್ಲ, ಯಾರ ಒತ್ತಡವೂ ಇಲ್ಲ: ಸ್ಪೀಕರ್


ಪ್ರಮಾಣ ವಚನ ಬೋಧನೆ ವಿಳಂಬವಾಗಿಲ್ಲ. ಇದೊಂದು ವಿಶೇಷ ಪ್ರಕರಣವಾದ್ದರಿಂದ ಕಾನೂನು ತಜ್ಞರ ಅಭಿಪ್ರಾಯ ಪಡೆದು ವಿಳಂಬ ಮಾಡದೆ ಪ್ರಮಾಣವಚನ ಬೋಧಿಸಿದ್ದೇವೆ ಎಂದು ಸ್ಪೀಕರ್ ಖಾದರ್ ಸ್ಪಷ್ಟಪಡಿಸಿದ್ದಾರೆ.

ಎಸ್‌ಡಿಪಿಐ ಪಡೆದಿದ್ದು ಕಾಂಗ್ರೆಸ್ ಮತ: ಜಬ್ಬಾರ್

ಇನ್ಮುಂದೆಯೂ ತಪ್ಪು ಸರಿಪಡಿಸದಿದ್ರೆ ಅನಾಹುತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ದಾವಣಗೆರೆ ದಕ್ಷಿಣದಲ್ಲಿ ಎಸ್‌ಡಿಪಿಐ ಪಡೆದಿರುವುದು ನೂರಕ್ಕೆ ನೂರರಷ್ಟು ಕಾಂಗ್ರೆಸ್ ಮತಗಳು. ಶಾಮನೂರು ಶಿವಶಂಕರಪ್ಪ ಅವರು ಇದ್ದಾಗಲೇ ಟಿಕೆಟ್ ಕೇಳಿದ್ದೆವು. ಈಗ 2ವರ್ಷಕ್ಕೆ ಕೇಳಿದರೂ ನೀಡಿಲ್ಲ. ಅದಕ್ಕೆ ಇಷ್ಟೆಲ್ಲಾ ಆಗಿದ್ದು, ತಪ್ಪು ಸರಿಪಡಿಸದೆ ಹೋದರೆ ಮತ್ತೆ ಅನಾಹುತಗಳಾಗುತ್ತವೆ' ಎಂದು ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಎಚ್ಚರಿಕೆ ನೀಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನೇನು ತಪ್ಪು ಮಾಡಿದ್ದೇನೆ ಎಂಬುದನ್ನು ಹೇಳಬೇಕಲ್ಲವೇ? ನಾನು ಎಸ್‌ಡಿಪಿಐಗೆ ಬೆಂಬಲ ನೀಡಿದ್ದರೆ ಯಾವ ರೀತಿ ಬೆಂಬಲ ನೀಡಿದ್ದೇನೆ ಎಂದು ಹೇಳಲಿ. ನೋಟಿಸ್ ನೀಡಿಲ್ಲ, ವಿವರಣೆ ಪಡೆದಿಲ್ಲ. ಆದರೂ ಆರೋಪಿಸಿದರೆ ಹೇಗೆ ಎಂದರು.

ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಅಂತರ ಕಡಿಮೆ ಆಗಬಹುದು ಆದರೆ ಕಾಂಗ್ರೆಸ್ ಗೆಲ್ಲುತ್ತೆ ಎಂದಿದ್ದೆ. ಗ್ಯಾರಂಟಿಗಳಿಂದ ಅಭ್ಯರ್ಥಿ ಗೆದ್ದಿದ್ದಾರೆ. ಮುಂದೆ ಎಲ್ಲ ಸರಿ ಹೋಗಬಹುದು, ಸರಿ ಮಾಡಲು ಅವಕಾಶವಿದೆ. ಸರಿಪಡಿಸದೆ ಹೋದರೆ ಮತ್ತೆ ಅನಾಹುತಗಳಾಗುತ್ತವೆ ಎಂದರು.

ಸಿಎಂ ಕೈಹಿಡಿವ ವಿಶ್ವಾಸವಿದೆ: ಅಮಾನತು ವಿಚಾರಕ್ಕೆ ಪ್ರತಿಕ್ರಿಯಿಸಿ, ಇಂದಿನವರೆಗೂ ನನಗೆ ನೋಟಿಸ್ ಬಂದಿಲ್ಲ, ಸಿಎಂ ಸಿದ್ದರಾಮಯ್ಯ ಸಹ ನಮ್ಮ ಮೇಲಿನ ಕ್ರಮ ಸರಿ ಇದೆ ಎಂದಿದ್ದಾರೆ. ಸಿಎಂ ನ್ಯಾಯ ನೀತಿಯಿಂದ ಕೈಹಿಡಿಯುತ್ತಾರೆ ಅಂತ ವಿಶ್ವಾಸ ಇದೆ. ಹೀಗಾಗಿ ಮತ್ತೊಮ್ಮೆ ಕ್ರಮ ಸರಿಯೋ ತಪ್ಪೋ ಪರಾಮರ್ಶೆ ಮಾಡಬೇಕು ಎಂದು ಮನವಿ ಮಾಡಿದರು.

X ಫೈಲ್ಸ್

ನಮ್ಮ ಮುಖ್ಯಮಂತ್ರಿಯೂ ರಾಜೀನಾಮೆ ನೀಡಲ್ಲ!

ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಮಾತ್ರ ಅಲ್ಲ, ಕರ್ನಾಟಕದಲ್ಲಿ ನಾನೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ: 'ಮುಖ್ಯಮಂತ್ರಿ' ಚಂದ್ರು

• ಲಿಖಿತ

ತ್ರಿ-ಶಾ ಕಮಾಲ್

ತಮಿಳ್ನಾಡಲ್ಲಿ ಬಿಜೆಪಿ ಮಂಕಾಗಿ, ವಿಜಯ್ ಗೆಲುವಿನತ್ತ ನುಗ್ಗುತ್ತಿರೋದಕ್ಕೆ ಪ್ರಬಲ ಕಾರಣ, ಬಿಜೆಪಿಯವರತ್ರ ಒಂದೇ 'ಶಾ' (ಅಮಿತ್ ಶಾ) ಇರೋದು. ಆದೇ ವಿಜಯ್ ಬಳಿ 3 ಶಾ ಇವೆ (ತ್ರಿ-ಶಾ).

• ಮೇಘಾ

2028ಕ್ಕೆ ರಾಜ್ಯ ಬಿಜೆಪಿಯಿಂದಲೂ ಗ್ಯಾರಂಟಿ?

ಮುಳ್ಳನ್ನ ಮುಳ್ಳಿಂದ್ಲೇ ತೆಗೀತೀವಿ | ನಾವು ಗ್ಯಾರಂಟಿ ವಿರೋಧಿಯಲ್ಲ, ಕಾದುನೋಡಿ: ಅಶೋಕ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

2028ರ ವಿಧಾನಸಭಾ ಚುನಾವಣೆಯಲ್ಲಿ ಮುಳ್ಳನ್ನು ಮುಳ್ಳಿಂದಲೇ ತೆಗೆಯುತ್ತೇವೆ ಎನ್ನುವ ಮುಖಾಂತರ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಪರೋಕ್ಷವಾಗಿ ಕಾಂಗ್ರೆಸ್ ಪಕ್ಷದ ಮಾದರಿಯಲ್ಲಿ ಗ್ಯಾರಂಟಿಗಳನ್ನು ಘೋಷಿಸುವ ಸೂಚನೆ ನೀಡಿದ್ದಾರೆ.



ಬುಧವಾರ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ಪಕ್ಷದ ಕೇಂದ್ರದ ನಾಯಕರು ಗ್ಯಾರಂಟಿಗಳ ಘೋಷಣೆಗೆ ಅವಕಾಶ ನೀಡಲಿಲ್ಲ. ಈಗ ಎಲ್ಲ ಕಡೆ ಗ್ಯಾರಂಟಿಗಳ ಘೋಷಣೆ ನಡೆಯುತ್ತಿದೆ. 2028ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಗ್ಯಾರಂಟಿಗಳಿಗೆ ಕೌಂಟರ್ ಆಗಿ ಏನು ಮಾಡಬೇಕು ಎಂದು ಯೋಚಿಸುತ್ತಿದ್ದೇವೆ. ಮುಳ್ಳನ್ನು ಮುಳ್ಳಿಂದಲೇ ತೆಗೆಯುತ್ತೇವೆ. ಅವರು ಸಣ್ಣ ಮುಳ್ಳು ಹಾಕಿದರೆ, ನಾವು ದೊಡ್ಡ ಮುಳ್ಳು ಹಾಕುತ್ತೇವೆ. ಏನಾಗಲಿದೆ ಎಂದು ಕಾದು ನೋಡಿ. ಅವರೇ ದಾರಿ ತೋರಿಸಿಕೊಟ್ಟಿದ್ದಾರೆ ಎಂದರು.

ಕಳೆದ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷದವರು ಐದು ಗ್ಯಾರಂಟಿ ಘೋಷಿಸಿದ್ದರು. ನಾವು ಒಂದೂ ಗ್ಯಾರಂಟಿ ಘೋಷಿಸಲಿಲ್ಲ. ಹೀಗಾಗಿ ಕಾಂಗ್ರೆಸ್ ಗ್ಯಾರಂಟಿಗಳ ಮೇಲೆ ಚುನಾವಣೆ ಗೆದ್ದಿದೆ. ನಾವು ಗ್ಯಾರಂಟಿಗಳ ವಿರೋಧಿಗಳಲ್ಲ. ಇನ್ನೂ 25 ಗ್ಯಾರಂಟಿ ಕೊಡಿ ಎಂದು ಸಲಹೆ ನೀಡುತ್ತೇನೆ. ನಾನು ಗ್ಯಾರಂಟಿಗಳನ್ನು ಎಂದೂ ವಿರೋಧಿಸಿಲ್ಲ. ಅವೈಜ್ಞಾನಿಕ ಗ್ಯಾರಂಟಿಗಳ ಬಗ್ಗೆ ನನ್ನ ವಿರೋಧವಿದೆ. ಗ್ಯಾರಂಟಿ ಘೋಷಿಸುವ ಮುನ್ನ ಅದರ ಪರಿಣಾಮಗಳು ಏನು ಎನ್ನುವುದರ ಬಗ್ಗೆ ಹೇಳಬೇಕು ಎಂಬುದು ನಮ್ಮ ವಾದವಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬೈ ಎಲೆಕ್ಷನಲ್ಲಿ ಆಡಳಿತ ಪಕ್ಷದ ಗೆಲುವು ಸಾಮಾನ್ಯ: ಉಪಚುನಾವಣೆ ಸೋಲಿನ ಬಗ್ಗೆ ಪರಾಮರ್ಶನಾ ಸಭೆ ಮಾಡುವಿರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅಶೋಕ್, ನಮ್ಮದು ರಾಷ್ಟ್ರೀಯ ಪಕ್ಷ. ಸೋಲಿನ ಪರಾಮರ್ಶನಾ ಸಭೆ ಮಾಡಿ ಚರ್ಚಿಸುತ್ತೇವೆ. ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಮೃತಪಟ್ಟ ಹಿನ್ನೆಲೆಯಲ್ಲಿ ಉಪಚುನಾವಣೆ ನಡೆದಿದೆ. ಸಹಜವಾಗಿ ಮತದಾರರಲ್ಲಿ ಅನುಕಂಪ ಇರುತ್ತದೆ. ಅದರಂತೆ ಎರಡೂ ಕಡೆ ಮತ್ತೆ ಕಾಂಗ್ರೆಸ್ ಗೆದ್ದಿದೆ. ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ 16 ಕ್ಷೇತ್ರಗಳ ಉಪಚುನಾವಣೆಯಲ್ಲಿ ನಾವು 15 ಕಡೆ ಗೆದ್ದಿದ್ದೆವು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 5 ಕ್ಷೇತ್ರಗಳಲ್ಲಿ ಗೆದ್ದಿದ್ದಾರೆ. ಉಪಚುನಾವಣೆಯಲ್ಲಿ ಆಡಳಿತ ಪಕ್ಷದ ಅಭ್ಯರ್ಥಿಗಳ ಗೆಲುವು ಸರ್ವೆ ಸಾಮಾನ್ಯ. ಆದರೂ ನಾವು ಪ್ರಯತ್ನ ಮಾಡಿ ದಾವಣಗೆರೆಯಲ್ಲಿ ಗೆಲುವಿನ ಹತ್ತಿರ ಬಂದಿದ್ದೇವೆ. ನಮ್ಮಲ್ಲಿ ಯಾವುದೇ ವಿವಾದ ಇಲ್ಲದೆ ಚುನಾವಣೆ ಮಾಡಿದ್ದೇವೆ ಎಂದು ಹೇಳಿದರು.

ಉಪಚುನಾವಣೆ ಸೋಲಿನಿಂದ ಹೆದರಿ ಓಡಿಹೋಗುವ ಪ್ರಶ್ನೆಯೇ ಇಲ್ಲ. ಗೆಲ್ಲಲು ಕಾಂಗ್ರೆಸ್ ಏನು ಮಾಡಿದೆ ಎಂಬುದು ಜನರಿಗೆ ಗೊತ್ತಿದೆ. ಅದರ ಬಗ್ಗೆ ನಾನು ಪ್ರತಿಕ್ರಿಯಿಸಲ್ಲ. ನಾವು ಸೋಲನ್ನು ಸ್ವೀಕರಿಸಿದ್ದೇವೆ. ಪರಾಮರ್ಶೆ ಮಾಡುತ್ತೇವೆ. ಮುಂದಿನ ದಿನಗಳಲ್ಲಿ ಇನ್ನೂ ಗಟ್ಟಿಯಾಗಿ ಕೆಲಸ ಮಾಡುತ್ತೇವೆ. 2028ಕ್ಕೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದು ಶತಃಸಿದ್ಧ ಎಂದು ಹೇಳಿದರು.

ಒಳಗೆ ರಕ್ತ ಬಿಸಿ, ಹೊರಗೆ ಮಾತ್ರ ತಣ್ಣಗೆ: ಡಿಕೆಸು ಮಾರ್ಮಿಕ ನುಡಿ

ಡಿಕೆಶಿ ಶ್ರಮ ಪಟ್ಟಿದ್ದಾರೆ, ಅವರಿಗೆ ಅವಕಾಶ ನೀಡ್ಬೇಕು ಶುಭ ಸುದ್ದಿಗೆ ನಾವು ಕಾಯ್ತಿದ್ದೇವೆ: ಮಾಜಿ ಸಂಸದ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ಒಳಗಡೆ ರಕ್ತ ಬಿಸಿಯಾಗಿರುತ್ತದೆ, ಮೇಲೆ ಮಾತ್ರ ತಣ್ಣಗಿರುತ್ತದೆ. ಡಿ.ಕೆ. ಶಿವಕುಮಾರ್ ರಾಜಕೀಯದಲ್ಲಿ ಶ್ರಮ ಪಟ್ಟಿದ್ದಾರೆ. ಅದಕ್ಕಾಗಿ ಅವಕಾಶ ನೀಡಬೇಕು, ಶುಭ ಸುದ್ದಿಗೆ ಕಾಯುತ್ತಿದ್ದೇವೆ' ಎಂದು ಮಾಜಿ ಸಂಸದ, ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದ್ದಾರೆ. 'ಶಿವಕುಮಾರ್ ಅವರು 63 ವರ್ಷ ತುಂಬಿ 64ಕ್ಕೆ ಕಾಲಿಡುತ್ತಿದ್ದಾರೆ. ನಾನು ಶುಭ ಸುದ್ದಿಗೆ ಕಾಯುತ್ತಿದ್ದೇನೆ. ತಾಳಿದವನು ಬಾಳಿಯಾನು. ಎಲ್ಲದಕ್ಕೂ ಒಳ್ಳೆ ಕಾಲ ಬರುತ್ತದೆ' ಎಂದು ಮಾರ್ಮಿಕವಾಗಿ ನುಡಿದರು.



ಹೈಕಮಾಂಡ್ ಕರೆದಾಗ ದಿಲ್ಲಿಗೆ ಹೋಗ್ತೇವೆ: ಡಿಕೆಶಿ

ಬೆಂಗಳೂರು: ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರ ದೆಹಲಿ ಭೇಟಿ ಸುದ್ದಿ ಬಗ್ಗೆ ಮಾತನಾಡಿರುವ ಡಿ.ಕೆ. ಶಿವಕುಮಾರ್ ಅವರು, 'ಹೈಕಮಾಂಡ್ ನಾಯಕರು ಕರೆದಾಗ ನಾವು ಹೋಗುತ್ತೇವೆ. ಕರೆಯದೇ ಹೋಗುವುದು ಸರಿಯಲ್ಲ. ಕರೆಯುತ್ತಾರೆ, ಕರೆದಾಗ ನಾವು ಹೋಗುತ್ತೇವೆ' ಎಂದಿದ್ದಾರೆ.

ಸಕಲ ಸಿದ್ಧತೆ ಕಾರ್ಯಕ್ರಮದಲ್ಲಿ 24 ಕಲಾ ತಂಡಗಳಿಂದ ಪ್ರದರ್ಶನ | ಬಿಎಸ್‌ವೈ ಸಿಎಂ ಆಗಿದ್ದಾಗ ನೀಡಿದ ಪ್ರಮುಖ ಯೋಜನೆಗಳ ಸ್ತಬ್ಧಚಿತ್ರ: ಸಂಸದ

ಸಾಂಸ್ಕೃತಿಕ ಹಬ್ಬ ರೀತಿ ಅಭಿಮಾನೋತ್ಸವ: ಕಾರಜೋಳ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಮಾಜಸೇವೆ, ಜೀವನಚರಿತ್ರೆಯನ್ನು ಚಿತ್ರದುರ್ಗದಲ್ಲಿ ಒಂದು ಸಾಂಸ್ಕೃತಿಕ ಹಬ್ಬದ ರೀತಿಯಲ್ಲಿ ಆಚರಿಸಲು ನಿರ್ಧರಿಸಿದ್ದೇವೆ ಎಂದು ಮಾಜಿ ಡಿಸಿಎಂ, ಸಂಸದ ಗೋವಿಂದ ಕಾರಜೋಳ ಹೇಳಿದರು.

ಚಿತ್ರದುರ್ಗದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಅವರ ಜೀವನಚರಿತ್ರೆ ಮತ್ತು ಸದನದಲ್ಲಿ ಯಡಿಯೂರಪ್ಪನವರು ಎಂಬ ಸಂಬಂಧ 'ಕೆಂದಾವರೆ- ಕಮಲದಲ್ಲಿ ಅರಳಿದ ಹೂ' 'ಸದನದಲ್ಲಿ ಶಿಕಾರಿ' ಗ್ರಂಥಗಳನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ನಿಮಿತ್ತ ಚಿತ್ರದುರ್ಗಕ್ಕೆ ಆಗಮಿಸುವ ಯಡಿಯೂರಪ್ಪ ಅವರನ್ನು ಬರಮಾಡಿಕೊಳ್ಳಲು ವಿಶೇಷ ಸಂದರ್ಭಗಳನ್ನು ಸಜ್ಜುಗೊಳಿಸಲಾಗಿದೆ. ಮೇ 8ರ ಸಂಜೆ ಯಡಿಯೂರಪ್ಪನವರ ಪುರಪ್ರವೇಶ ನಡೆಯಲಿದ್ದು, ಸಾಂಸ್ಕೃತಿಕ ಸ್ಪರ್ಶ ನೀಡಲಾಗುವುದು. ಪುರಪ್ರವೇಶವನ್ನು ಹಬ್ಬದ ರೀತಿಯಲ್ಲಿ ಮಾಡಲು ತಯಾರಿ ನಡೆಸಿದ್ದೇವೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 24 ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ. ಇದಲ್ಲದೇ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದ ಹಲವು ಯೋಜನೆಗಳ ಪುನರ್‌ಪರಿಚಯಿಸುವ ಸಂಬಂಧದ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಇರಲಿವೆ ಎಂದು ಕಾರಜೋಳ ಹೇಳಿದರು.



ಚಿತ್ರದುರ್ಗದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಬುಧವಾರ ಬಿಎಸ್‌ವೈ ಅಭಿಮಾನೋತ್ಸವದ ಪೂರ್ವಸಿದ್ಧತೆಗಳನ್ನು ಪರಿಶೀಲಿಸಿದರು. ಸಂಸದ ಗೋವಿಂದ ಕಾರಜೋಳ ಇದ್ದರು.



ಅಮಿತ್ ಶಾ ಬರುವ ಸಮಯ ಬದಲಾಗಿದ್ದರಿಂದ ಮಧ್ಯಾಹ್ನ ಕಾರ್ಯಕ್ರಮ: ವಿಜಯೇಂದ್ರ


ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಪ್ರಮಾಣವಚನ ಕಾರ್ಯಕ್ರಮದಿಂದಾಗಿ ಚಿತ್ರದುರ್ಗದಲ್ಲಿ ಮೇ 9ರಂದು ನಿಗದಿ ಆಗಿರುವ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವದ ಸಮಯ ಬದಲಾಗಿದೆ. ಬೆಳಗ್ಗೆ ನಡೆಯಬೇಕಿದ್ದ ಕಾರ್ಯಕ್ರಮವನ್ನು ಮಧ್ಯಾಹ್ನ 2 ಗಂಟೆ ನಂತರ ಆರಂಭಿಸಲಾಗುತ್ತದೆ. ಅಮಿತ್ ಶಾ ಮಧ್ಯಾಹ್ನ 4ಕ್ಕೆ ಚಿತ್ರದುರ್ಗಕ್ಕೆ ಆಗಮಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 10 ಲಕ್ಷಕ್ಕೂ ಹೆಚ್ಚು ಅಭಿಮಾನಿಗಳು ಆಗಮಿಸಲಿದ್ದಾರೆ. ಇದಕ್ಕಾಗಿ 10 ಸಾವಿರ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಕಾರು ಸೇರಿ ವಿವಿಧ 50 ಸಾವಿರ ವಾಹನಗಳಲ್ಲಿ ಜನತೆ ಆಗಮಿಸಲಿದ್ದಾರೆ. ಸಾವಿರಕ್ಕೂ ಹೆಚ್ಚು ಮಠಾಧೀಶರು ಸಾಕ್ಷೀಕರಿಸಲಿದ್ದಾರೆ ಎಂದರು.

ರಾಜ್ಯ ಸರ್ಕಾರದ್ದು ಗೃಹಲಕ್ಷ್ಮಿ ಅಲ್ಲ, ಚುನಾವಣಾ ಲಕ್ಷ್ಮಿ ಸ್ಕೀಂ: ಬಿವೈವಿ

ಮುಂದಿನ ಕಂತು ಜಿಪಂ, ತಾಪಂ ಚುನಾವಣೆಗೆ ಬಿಡುಗಡೆ ಜನರಿಗೆ ಆಮಿಷವೊಡ್ಡಲು ಯೋಜನೆ ಬಳಕೆ: ಆಕ್ರೋಶ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಗೃಹಲಕ್ಷ್ಮಿ ಯೋಜನೆ ಚುನಾವಣೆ ಲಕ್ಷ್ಮಿಯಾಗಿ ರೂಪಾಂತರಗೊಂಡಿದ್ದು, ಮುಂದಿನ ಕಂತು ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ವೇಳೆಗೆ ಬಿಡುಗಡೆ ಆಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯವಾಡಿದರು.



ಬುಧವಾರ ಚಿತ್ರದುರ್ಗದಲ್ಲಿ ಸುದ್ದಿಗಾರರೊಂದಿಗ ಮಾತನಾಡಿದ ಅವರು, ಪ್ರತಿ ತಿಂಗಳು ನೀಡಬೇಕಾದ ಗೃಹಲಕ್ಷ್ಮಿ ಹಣವನ್ನು ಎರಡು ತಿಂಗಳು ತಡೆ ಹಿಡಿದು ಉಪ ಚುನಾವಣೆ ವೇಳೆ ಬಿಡುಗಡೆ ಮಾಡಿದ್ದಾರೆ. ಜನರಿಗೆ ಆಮಿಷವೊಡ್ಡುವ ರೀತಿಯಲ್ಲಿ ಯೋಜನೆ ಬಳಸಿಕೊಳ್ಳುತ್ತಿದ್ದಾರೆ. ಗ್ಯಾರಂಟಿಗಳ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರಿಗೆ ಅಷ್ಟೊಂದು ವಿಶ್ವಾಸ ಇದ್ದರೆ ಬಾಗಲಕೋಟೆ ಉಪ ಚುನಾವಣೆಗೆ 15 ದಿನ ಮುಂಚೆ ಹೋಗಿ ಏಕೆ ಕೂರಬೇಕಾಗಿತ್ತು ಎಂದು ಪ್ರಶ್ನಿಸಿದರು.

ಉಪ ಚುನಾವಣೆಯ ಸೋಲಿನಿಂದ ಬಿಜೆಪಿ ಹತಾಶರಾಗುವ ಪ್ರಶ್ನೆ ಎದುರಾಗದು. ಪ್ರಧಾನಿ ಮೋದಿ ಅವರಂಥ ದಿಟ್ಟ ನಾಯಕತ್ವ ದೇಶಕ್ಕೆ ಸಿಕ್ಕಿದೆ. ಉಪ ಚುನಾವಣೆ ಸೋಲಿನ ಸಂಬಂಧ ತಲೆಕೆಡಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಪ್ರಶ್ನೆಗೆ ಉತ್ತರ ನೀಡಿದರು.

ಕನ್ನಡಪ್ರಭ ಸಂಪಾದಕೀಯ

ಮಮತಾ ಮೊಂಡಾಟ ಬಿಡಲಿ, ಪ್ರಜಾಪ್ರಭುತ್ವವನ್ನು ಗೌರವಿಸಲಿ


ಇತ್ತೀಚಿನ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಸೋಲುಕಂಡ ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಾವು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಘೋಷಿಸುವ ಮೂಲಕ ರಾಜ್ಯವನ್ನು ಸಾಂವಿಧಾನಿಕ ಬಿಕ್ಕಟ್ಟಿನತ್ತ ತಳ್ಳಿದ್ದಾರೆ. ಮತದಾರನ ತೀರ್ಪಿನ ಬಳಿಕ, ಚುನಾವಣೆಯಲ್ಲಿ ಅಕ್ರಮದ ಆರೋಪ ಹೊರಿಸಿ ಅವರು ಇಂಥದ್ದೊಂದು ನಿಲುವು ಪ್ರಕಟಿಸಿದ್ದಾರೆ. ದೇಶದ ಸುದೀರ್ಘ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಇದೊಂದು ಅಪರೂಪದ ಬೆಳವಣಿಗೆ. ಒಂದು ವೇಳೆ ಮಮತಾ ತಾವು ಹೇಳಿದಂತೆಯೇ, ರಾಜೀನಾಮೆ ಪ್ರಕ್ರಿಯೆಯಿಂದ ದೂರ ಉಳಿದರೆ, ಅದು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದಂತೆ ಆಗುತ್ತದೆ.

> **ಸೋಲಿನ ಹೊರತೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದಿರುವ ನಿರ್ಧಾರ ತಪ್ಪು. ಅನುಮಾನ ನಿವಾರಣೆಗೆ ಮಮತಾ ಮುಂದೆ ಕಾನೂನಿನ ಅಸ್ತ್ರಗಳಿವೆ. ಅದನ್ನು ಬಳಸಲಿ.**

ಚುನಾವಣೆ ಘೋಷಣೆಗೆ ಮುನ್ನ ರಾಜ್ಯದಲ್ಲಿ ನಡೆದ ವಿಶೇಷ ಮತಪಟ್ಟಿ ಪರಿಷ್ಕರಣೆಗೆ ಟಿಎಂಸಿ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಬಳಿಕ ಅದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು. ಆದರೆ ಸ್ವತಃ ನ್ಯಾಯಾಲಯವೇ ಪ್ರಕ್ರಿಯೆ ಮುಂದುವರೆಸಲು ಸೂಚಿಸಿತ್ತು. ಇದರ ಹೊರತಾಗಿಯೂ ಅವರು ಸ್ವತಃ ಚುನಾವಣಾ ಆಯೋಗವೇ ಮುಂದೆ ನಿಂತು ಚುನಾವಣೆಯಲ್ಲಿ ಅಕ್ರಮ ನಡೆಸಿದೆ ಎಂದು ಸತತವಾಗಿ ಆರೋಪ ಮಾಡಿಕೊಂಡೇ ಬಂದಿದ್ದರು. ಚುನಾವಣೆಗೆ ಮೊದಲಿನ ಆರೋಪ, ಚುನಾವಣೆಯಲ್ಲಿ ಸೋಲಿನ ಬಳಿಕವೂ ಮುಂದುವರೆದಿದೆ. ಫಲಿತಾಂಶ ಏನೇ ಇರಲಿ. ಜನರ ಅಭಿಪ್ರಾಯ ಒಪ್ಪಬೇಕಾಗಿರುವುದು ರಾಜಕೀಯ ಪಕ್ಷಗಳ ಕರ್ತವ್ಯ. 15 ವರ್ಷಗಳ ಹಿಂದೆ ತಾವು ಕೂಡಾ ಹೀಗೆ ಎಡಪಕ್ಷಗಳ ಸತತ 34 ವರ್ಷಗಳ ಆಡಳಿತವನ್ನು ಸೋಲಿಸಿ ಅಧಿಕಾರಕ್ಕೆ ಬಂದಿದ್ದು ಎಂಬುದನ್ನು ಮಮತಾ ಮರೆತಂತಿದೆ. ಚುನಾವಣೆ ವೇಳೆ ಸೋಲು, ಗೆಲುವು ಸಾಮಾನ್ಯ. ಈ ಕುರಿತ ಏನೇ ಅಭಿಪ್ರಾಯಗಳಿದ್ದರೂ ಅದನ್ನು ಕಾನೂನು ರೀತಿಯಲ್ಲಿ ಎದುರಿಸಲು ನ್ಯಾಯಾಲಯಗಳು ಎಲ್ಲರಿಗೂ ಮುಕ್ತವಿದೆ. ಮಮತಾ ಕೂಡಾ ಅದೇ ಮಾರ್ಗ ಅನುಸರಿಸುವುದು ಸೂಕ್ತ. ಅದನ್ನು ಹೊರತುಪಡಿಸಿ, ಸಾಂವಿಧಾನಿಕ ಪ್ರಕ್ರಿಯೆಗಳನ್ನೇ ಧಿಕ್ಕರಿಸುವ ಹೇಳಿಕೆ ನೀಡುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ತರವಲ್ಲ. ರಾಜೀನಾಮೆ ನೀಡದಿರುವ ಹೇಳಿಕೆ ಸೋಲಿನ ಹತಾಷೆಯಿಂದ ಬಂದಿದ್ದು, ಮುಂದೆ ಅವರು ತಿದ್ದಿಕೊಂಡರೆ ಅದು ಅವರ ಗೌರವ ಹೆಚ್ಚಿಸುತ್ತದೆ. ಆದರೆ ಹಠ ಮುಂದುವರೆಸಲು ಹೋದರೆ ಅದು ಅವರ ಘನತೆಗೆ ಧಕ್ಕೆ ತರುವುದರಲ್ಲಿ ಸಂಶಯವಿಲ್ಲ. ಜೊತೆಗೆ ರಾಜೀನಾಮೆ ನೀಡದೇ ಪಟ್ಟು ಹಿಡಿದರೆ ಅವರ ಪದಚ್ಯುತಿಗೆ ರಾಜ್ಯಪಾಲರ ಸಾಕಷ್ಟು ಕಾನೂನಿನ ಅಸ್ತ್ರಗಳಿದ್ದು ಅದರ ಬಳಕೆ ಖಚಿತ. ಇದರಿಂದ ಮಮತಾ ಅವರಿಗೇ ಹೆಚ್ಚು ನಷ್ಟ. ಹೀಗಾಗಿ ಸಂಘರ್ಷದ ಹಾದಿ ಬಿಟ್ಟು ತಮ್ಮ ಅನುಮಾನ ನಿವಾರಣೆಗೆ ಅವರು ಕಾನೂನಿನ ಮಾರ್ಗ ಅನುಸರಿಸುವುದು ಸೂಕ್ತ.

ಗೂಫ

ಬೆಂಬಲ ಬಲ




ನಿತ್ಯ ಫಲ

- **ಮೇಷ:** ಯಾರೂ ಪ್ರಯತ್ನಿಸದ ಕೆಲಸಕ್ಕೆ ಕೈ ಹಾಕಿ ಜೈ ಎನಿಸಿಕೊಂಡ ನಿಮಗೆ ಎಲ್ಲೆಡೆಯಿಂದ ಶ್ಲಾಘನೆ.
- **ವೃಷಭ:** ಹವಾಮಾನ ವೈಪರೀತ್ಯದ ಬಿಸಿ ನಿಮ್ಮ ಉದ್ಯೋಗಕ್ಕೂ ತಗುಲಿದ್ದು, ನಷ್ಟವಾಗಲಿದೆ.
- **ಮಿಥುನ:** ದಿಢೀರ್ ಧನಲಾಭ ಆರಂಭದಲ್ಲಿ ಸಂತಸ ತಂದರೂ, ನಂತರ ಯಾತನೆ ಅನುಭವಿಸುವಿರಿ.
- **ಕಟಕ:** ನೀವು ತೋಡಿದ ಹಳ್ಳಕ್ಕೆ ನೀವೇ ಬೀಳುವಂತಹ ಪ್ರಸಂಗ ಎದುರಿಸುವಿರಿ. ಅತಿ ಎಚ್ಚರ.
- **ಸಿಂಹ:** ನ್ಯಾಯಾಲಯದ ವಿಷಯದಲ್ಲಿ ನಿಮಗೆ ಜಯ ಲಭಿಸಲಿದ್ದು, ಹಲವು ವರ್ಷದ ಶ್ರಮಕ್ಕೆ ಫಲ.
- **ಕನ್ಯಾ:** ಷೇರು ವ್ಯವಹಾರದಲ್ಲಿ ತೊಡಗಿಸಿಕೊಂಡವರಿಗೆ ನಿರೀಕ್ಷಿಸಿದಕ್ಕಿಂತ ಹೆಚ್ಚಿನ ಲಾಭ.
- **ತುಲಾ:** ಹೊಸ ವ್ಯಕ್ತಿಯೊಬ್ಬರ ಪರಿಚಯದಿಂದ ಕೆಲಸದಲ್ಲಿ ಪದೋನ್ನತಿ ಸಾಧ್ಯತೆ ಇದೆ.
- **ವೃಶ್ಚಿಕ:** ನಿಮಗೆ ಸರಿ ಹೊಂದದ ಕೆಲಸವನ್ನು ಮಾಡಲು ಹೋಗಿ ಅಪಹಾಸ್ಯಕ್ಕೆ ಒಳಗಾಗುವಿರಿ.
- **ಧನುಸ್ಸು:** ಸಮಾನ ಮನಸ್ಕರ ಭೇಟಿ ನಿಮ್ಮಲ್ಲಿ ಉಲ್ಲಾಸ ಹೆಚ್ಚಿಸಲಿದ್ದು, ಶೀಘ್ರ ಶುಭವಾರ್ತೆ ಕೇಳುವಿರಿ.
- **ಮಕರ:** ಹಲವು ವರ್ಷಗಳಿಂದ ಕಾಯುತ್ತಿದ್ದ ನಿಮಗೆ ಇಂದು ಉತ್ತಮ ಫಲ ದೊರೆಯಲಿದೆ.
- **ಕುಂಭ:** ಕೊಡಿಟ್ಟ ಹಣ ಬಡ್ಡಿಯಾಗಿ ನಿಮಗೆ ಸಿಗಲಿದ್ದು, ಹೊಸ ಯೋಜನೆ ರೂಪಿಸುವಿರಿ.
- **ಮೀನ:** ನಿಮ್ಮ ಮಾತೇ ಎಲ್ಲೆಡೆಯೂ ನಡೆಯಬೇಕೆಂಬ ಹಠ ಬಿಟ್ಟು ವಿಶಾಲವಾಗಿ ಚಿಂತನೆ ಮಾಡಿ.

ಪಂಚಾಂಗ

ಸಂವತ್ಸರ: ಪರಾಭವ, ಉತ್ತರಾಯಣ, ಋತು: ವಸಂತ, ಮಾಸ: ವೈಶಾಖ
ಪಕ್ಷ: ಕೃಷ್ಣ, ತಿಥಿ: ಪಂಚಮಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ 01:30-03:00
ಯಮಗಂಡಕಾಲ 10:30-12:00 **ಗುಳಿಕಕಾಲ** 01:30-03:00

ಪದಯಾತ್ರೆ 2551 • ಜಯಕೃಷ್ಣ



2550 ರ ಉತ್ತರ

ಎಡದಿಂದ ಬಲಕ್ಕೆ
1. ಪಾರ್ಶ್ವವಾಯು, 3. ಸುಖಾಸನ, 5. ವರದಿ, 6. ಮತಿ, 7. ನಸು, 11. ಷರಾ, 13. ಪ್ರಾಯ, 14. ಯಥಾರ್ಥ, 15. ವಿಪರ್ಯಾಸ, 16. ನೆಲಸಮ.

ಮೇಲಿನಿಂದ ಕೆಳಕ್ಕೆ
1. ಪಾದಚಾರಿ, 2. ಯುವತಿ, 3. ಸುದಿನ 4. ನರುಗಂಪು, 6. ಮಹಾಪುರುಷ, 8. ಸುಲಭೋಪಾಯ, 9. ಚಿರಂಜೀವಿ, 10. ಅನುಪಮ, 12. ರಾಯಸ, 13. ಪ್ರಾರ್ಥನೆ.

ಎಡದಿಂದ ಬಲಕ್ಕೆ
- 2. ವಿಶ್ವವಿದ್ಯಾಲಯದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (5)
- 5. ವಿಘ್ನೇಶನ ಇನ್ನೊಂದು ಹೆಸರು (3)
- 6. ಯೋಜನೆ ಮಾಡುವವನು (3)
- 7. ಧಾನ್ಯದ ಕದಿರು (2)
- 9. ಪ್ರೀತಿಪಾತ್ರನಾದ ಗಂಡ (2)
- 10. ಆಹಾರ, ಅನ್ನವೂ ಹೌದು (2)
- 11. ಆನೆಗೆ ಬಂದ ಸೊಕ್ಕು (2)
- 15. ಮಳೆಗಾಲಕ್ಕೆ ಹೀಗೂ ಹೇಳುವರು (3)
- 16. ಕೊಳ್ಳುವವನು ಈ ಗ್ರಾಹಕ (3)
- 17. ದಾಸ್ಯವನ್ನು ಹೀಗೆನ್ನುವರು (5)

ಮೇಲಿನಿಂದ ಕೆಳಕ್ಕೆ
- 1. ಶುಭ, ಒಳಿತೂ ಹೌದು (3)
- 2. ನಿಪುಣನ ಚಾತುರ್ಯ (4)
- 3. ವಯಸ್ಸಿನ ಗರಿಷ್ಠ ಮಿತಿ (4)
- 4. ಕೈಯ ಆಭರಣ (3)
- 8. ಬೆಳಕಿನಿಂದ ಸೃಷ್ಟಿಯಾದ ಛಾಯೆ (3)
- 9. ಅತಿ ಶ್ರೇಷ್ಠವಾದುದು (3)
- 10. ಹರಿತವಾದ ಬಾಣ (4)
- 12. ಸೆರೆ ಹಿಡಿಯುವುದು (4)
- 13. ಅಂಗೀಕಾರ- ಇನ್ನೊಂದು ಪದ (3)
- 14. ಕೋಗಿಲೆಯ ಧ್ವನಿ (3)

ಕನ್ನಡಪ್ರಭ KANNADAPRABHA

ಪ್ರಧಾನ ಸಂಪಾದಕ: ರವಿ ಹೆಗಡೆ EDITOR IN CHIEF: RAVI HEGDE

ನಮ್ಮ ವಿಳಾಸ: ಸಂಪಾದಕರು, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ, ಮಲ್ಲಿಗೆ ಆಸ್ಪತ್ರೆ ಎದುರು, ಶಿವಾನಂದ ವೃತ್ತ, ಬೆಂಗಳೂರು-560 001

PHONE: 080-68416300 FAX:080-68416354
email: editor@kannadaprabha.in epaper.kannadaprabha.in
facebook: SuvarnaNews twitter: @suvarnanewstv

ರಾಜ್ಯಕ್ಕೆ ಮಾದರಿ ಬಿಎಸ್‌ವೈ ಆಡಳಿತದ ಶೈಲಿ | ನಿಖರತೆ, ಸ್ಪಷ್ಟತೆ, ದೂರದರ್ಶಿತ್ವದ ಮುಖಂಡ ಯಡಿಯೂರಪ್ಪ

ಜನಪರ ಕಾಯಕ, ದಣಿವರಿಯದ ನಾಯಕ ಬಿಎಸ್‌ವೈ



ಲೆಹರ್‌ಸಿಂಗ್
ರಾಜ್ಯಸಭಾ ಸದಸ್ಯರು

> ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಂತಹ ಉನ್ನತ ಸ್ಥಾನದಲ್ಲಿದ್ದ ಆ ಅಧಿಕಾರಿ ಸ್ವಲ್ಪ ಜಿಗುಟಿನ ಸ್ವಭಾವದವರಾಗಿದ್ದರು. ಹಾಗಾಗಿ ಉನ್ನತಾಧಿಕಾರಿಗಳು ಸ್ಪಂದನಶೀಲರಾಗಿ ಕೆಲಸ ಮಾಡಿದರೆ ಮಾತ್ರ ಆಡಳಿತ ಯಂತ್ರಕ್ಕೆ ನಿರೀಕ್ಷಿತ ವೇಗ ಸಿಗಲು ಸಾಧ್ಯ. ಹಿರಿಯ ಅಧಿಕಾರಿಗೆ ನಯವಾಗಿ ಚಾಟಿ ಬೀಸುವ ಮೂಲಕ ಈ ಸಂದೇಶವನ್ನು ಯಡಿಯೂರಪ್ಪನವರು ರವಾನಿಸಿದ್ದರು. ತನ್ಮೂಲಕ ತಮ್ಮ ನೇತೃತ್ವದ ಸರಕಾರದ ಆದ್ಯತಾ ಸೂಚಿಯನ್ನು ಸ್ಪಷ್ಟಗೊಳಿಸಿದ್ದರು.

ಬಿ.ಎಸ್.ಯಡಿಯೂರಪ್ಪ 2007ರಿಂದ 2021ರವರೆಗೆ ಒಟ್ಟು ನಾಲ್ಕು ಬಾರಿ ಕರ್ನಾಟಕದ ಮುಖ್ಯಮಂತ್ರಿ ಆಗಿ ಅಧಿಕಾರ ವಹಿಸಿಕೊಂಡರು. ಹಾಗಂತ ಅವರು ಈ ರಾಜ್ಯದ ಆಡಳಿತ ನಡೆಸಿದ್ದು ಅಬ್ಬಬ್ಬಾ ಅಂದರೆ ಐದು ವರ್ಷ. ಆದರೆ ಮೂಡಿಸಿದ ಛಾಪು ಅಗಾಧ. ಆರೆಸ್ಸೆಸ್ ಸ್ವಯಂಸೇವಕನಾಗಿ, ಧ್ಯೇಯ ಸಾಧನೆಯ ಹಾದಿಯಲ್ಲಿ ಪೂರ್ಣವಾದಿ ಕಾರ್ಯಕರ್ತನಾಗಿ, ಶಿಕಾರಿಪುರ ಪುರಸಭೆ ಅಧ್ಯಕ್ಷರಾಗಿ, ಕರ್ನಾಟಕ ವಿಧಾನಸಭೆ ಶಾಸಕರಾಗಿ, ವಿಪಕ್ಷ ನಾಯಕರಾಗಿ, ಉಪಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿಯಾಗಿ ಅವರು ಮೂಡಿಸಿದ ಹೆಜ್ಜೆ ಗುರುತುಗಳು ಅವರಿಗೆ ಅವರೇ ಸಾಠಿ!

ಸರ್ವರಿಗೂ ಸಮಪಾಲು/ಸಮಬಾಳು

ಯಡಿಯೂರಪ್ಪ ನಂಬಿದ ತತ್ವ, ಅನುಸರಿಸಿದ ಸಿದ್ಧಾಂತ: ಅಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಎಲ್ಲ ಇಲಾಖೆಗಳ ಮುಖ್ಯಸ್ಥರ ಸಭೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಅತ್ಯಂತ ಗಂಭೀರ ವಾದನರಾಗಿ ಮಾತು ಆರಂಭಿಸಿದರು.

ಅವರ ಮೊದಲ ಮಾತು, 'ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು' ಎನ್ನುವುದೇ ನಮ್ಮ ಸರಕಾರದ ಆದ್ಯತೆ. ನಾವೆಲ್ಲರೂ ಬದ್ಧತೆ, ದಕ್ಷತೆ, ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಈ ಗುರಿ ಸಾಧನೆ ಕಷ್ಟವೇನಲ್ಲ ಎಂಬುದಾಗಿತ್ತು.

ಹಾಗೆಯೇ ಖಡಕ್ ಐಎಎಸ್ ಅಧಿಕಾರಿಯೊಬ್ಬರನ್ನು ಉದ್ದೇಶಿಸಿ, 'ಏನ್ ಸ್ವಾಮೀ, ನಾನು ಹೇಳಿದ್ದಕ್ಕೆ ನೀವು ಸಹಮತ ವ್ಯಕ್ತಪಡಿಸುತ್ತೀರಾ' ಎಂದು ಪ್ರಶ್ನಿಸಿದವರೇ 'ಸರಕಾರ ಮಾನವೀಯ ಅಂತಃಕರಣದಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಎಲ್ಲದಕ್ಕೂ ಕಾನೂನು ಕಟ್ಟಳೆ ಎಂದುಕೊಂಡು ವಿಳಂಬಿಸಿದರೆ ಬಡವರ, ಜನ ಸಾಮಾನ್ಯರ ಬದುಕನ್ನು ಹಸನುಗೊಳಿಸಲು ಸಾಧ್ಯವಾಗುವುದಿಲ್ಲ. ಬಡವರ ಅಭಿವೃದ್ಧಿ ವಿಚಾರ ಬಂದಾಗ ನಿಯಮಗಳನ್ನು ಸ್ವಲ್ಪ ಸಡಿಲಿಸಬೇಕು. ನಾವು ಅವರ ಕಷ್ಟಗಳನ್ನು ಅರ್ಥ ಮಾಡಿಕೊಂಡು ಸ್ಪಂದಿಸಬೇಕು' ಎಂದು ಅಷ್ಟೇ ಖಡಕ್ಕಾಗಿ ಹೇಳಿದರು. ಅದಕ್ಕೆ ಆ ಐಎಎಸ್ ಅಧಿಕಾರಿ ನಗುತ್ತಲೇ ಸ್ಪಂದಿಸಬೇಕಾಯಿತು.



ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಂತಹ ಉನ್ನತ ಸ್ಥಾನದಲ್ಲಿದ್ದ ಆ ಅಧಿಕಾರಿ ಸ್ವಲ್ಪ ಜಿಗುಟಿನ ಸ್ವಭಾವದವರಾಗಿದ್ದರು. ಹಾಗಾಗಿ ಉನ್ನತಾಧಿಕಾರಿಗಳು ಸ್ಪಂದನಶೀಲರಾಗಿ ಕೆಲಸ ಮಾಡಿದರೆ ಮಾತ್ರ ಆಡಳಿತ ಯಂತ್ರಕ್ಕೆ ನಿರೀಕ್ಷಿತ ವೇಗ ಸಿಗಲು ಸಾಧ್ಯ. ಹಿರಿಯ ಅಧಿಕಾರಿಗೆ ನಯವಾಗಿ ಚಾಟಿ ಬೀಸುವ ಮೂಲಕ ಈ ಸಂದೇಶವನ್ನು ಯಡಿಯೂರಪ್ಪನವರು ರವಾನಿಸಿದ್ದರು. ತನ್ಮೂಲಕ ತಮ್ಮ ನೇತೃತ್ವದ ಸರಕಾರದ ಆದ್ಯತಾ ಸೂಚಿಯನ್ನು ಪ್ರಾರಂಭದಲ್ಲೇ ಸ್ಪಷ್ಟಗೊಳಿಸಿದ್ದರು.

ರಾಜಕೀಯದಲ್ಲಿ ಆರಂಭದಿಂದ ಕೊನೆವರೆಗೆ ಯಡಿಯೂರಪ್ಪ ಸವೆಸಿದ ಹಾದಿ ಹೂವಿನ ಹಾಸಿಗೆ ಆಗಿರಲಿಲ್ಲ. ಅದು ಕಲ್ಲುಮುಳ್ಳಿನ ಹಾದಿಯಾಗಿತ್ತು. ಯಡಿಯೂರಪ್ಪ ಎಂದರೆ ಅಕ್ಷರಶಃ ಕಾದ ಕುಲುಮೆಯಲ್ಲಿ ಸೋಸಿ ಪರಿಪಕ್ವವಾದ ವ್ಯಕ್ತಿತ್ವ. ಶಿಕಾರಿಪುರದಿಂದ ಆರಂಭವಾಗಿ ವಿಧಾನ ಸೌಧದ ಮೂರನೇ ಮಹಡಿವರೆಗೆ ಪ್ರತಿದಿನ ಪ್ರತಿ ಕ್ಷಣ ಹೋರಾಟ ಹೋರಾಟ ಹೋರಾಟ.

ಯಡಿಯೂರಪ್ಪ ಇಂದಿನ ಕೆಲಸ ನಾಳೆ ಮಾಡು ಎಂಬ ಜಾಯಮಾನದವರಲ್ಲ. ಇಂದಿನ ಕೆಲಸವನ್ನು ಈ ಕ್ಷಣದಲ್ಲೇ ಮಾಡು ಎನ್ನುವವರು. ಅವರ ಪದಕೋಶದಲ್ಲಿ ಆಯಿತು, ಹೋಯಿತು, ನೋಡೋಣ ಎಂಬ ಪದಗಳೇ ಇರಲಿಲ್ಲ. ಅದರ ಪರಿಣಾಮ



ಅಧಿಕಾರದುದ್ದಕ್ಕೂ ಯಡಿಯೂರಪ್ಪ ನಡೆದು ಸಾಗಿದರೆ ಸಹವರ್ತಿ ಮಂತ್ರಿಗಳು ಮತ್ತು ಅಧಿಕಾರಿಗಳು ಇಡುಸಿರುಬಿಡುತ್ತಾ ಓಡಲೇ ಬೇಕಾಗಿತ್ತು. ಬೆಳಗಿನ ಜಾವ ನಾಲ್ಕೂವರೆಯಿಂದ ರಾತ್ರಿ 12ರ ನಡುರಾತ್ರಿಯವರೆಗೆ ಯಡಿಯೂರಪ್ಪ ಕಾರ್ಯ ತತ್ಪರ, ಬಿಡುವಿಲ್ಲದ ಕೆಲಸವೇ ಅವರ ವಿಶ್ರಾಂತಿ, ವಿರಾಮ.

ಶುದ್ಧ ಅಂತಃಕರಣ!

ಸಣ್ಣ ವ್ಯತ್ಯಾಸ ಕಂಡರೂ ಸಿಡಿಮಿಡಿಗೊಳ್ಳುವ, ಕೋಪಗೊಳ್ಳುವ ಪ್ರವೃತ್ತಿ ಯಡಿಯೂರಪ್ಪ ಅವರದ್ದಾಗಿತ್ತು. ಆದರೆ, ಅವರು ಅಧಿಕಾರಕ್ಕೆ ಬಂದ ಬಳಿಕ ರಾಜ್ಯದ ಕಟ್ಟ ಕಡೆಯ ಜನರಿಗೂ ಸರಕಾರದ ಯೋಜನೆಗಳನ್ನು ತಲುಪಿಸುವ ದೃಷ್ಟಿಯಿಂದ ಆಡಳಿತ ಯಂತ್ರವನ್ನು ವಿಶ್ವಾಸಕ್ಕೆ ತೆಗೆದುಕೊಂಡರು.

ಅದಕ್ಕೆ ಅಪಾರವಾದ ಸಹನೆ, ತಮ್ಮ ಸುದೀರ್ಘ ರಾಜಕೀಯ ಅನುಭವವನ್ನು ಬಂಡವಾಳವಾಗಿ ತೊಡಗಿಸಿದರು. ಅಂದರೆ ಜನರ ಕೆಲಸವಾಗಬೇಕು, ರಾಜ್ಯವನ್ನು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯಬೇಕು ಎಂಬ ಕಾಳಜಿಯಿಂದ ಸಿಟ್ಟನ್ನು ನಿಯಂತ್ರಿಸಿಕೊಂಡರು. ಅರ್ಥಾತ್ ಅಗತ್ಯ ಬಂದಾಗ ಕುಸುಮದಷ್ಟು ಮೃದುವಾದರು. ಅಧಿಕಾರಿಗಳು ನಿಷ್ಕಾಳಜಿ, ಬೇಜವಾಬ್ದಾರಿಯಾಗಿ ನಡೆದುಕೊಂಡಾಗ ಬೈದು ಬಿಗಿ ಮಾಡಲು ಹಿಂದೇಟು ಹಾಕಲಿಲ್ಲ.

ಯಡಿಯೂರಪ್ಪ ಅವರ ಅಧಿಕಾರ ಪರ್ವ ಆರಂಭವಾದದ್ದು ಸಮ್ಮಿಶ್ರ ಸರಕಾರದಲ್ಲಿ ಉಪಮುಖ್ಯಮಂತ್ರಿಯಾಗುವ ಮೂಲಕ. ರಾಜ್ಯದ ಉಪ ಮುಖ್ಯಮಂತ್ರಿಯಾಗಿ ಹಣಕಾಸು ಖಾತೆಯನ್ನೂ ನಿರ್ವಹಿಸುತ್ತಿದ್ದ ಅವರು ತಮ್ಮ ಮೊದಲ ಮುಂಗಡ ಪತ್ರದಲ್ಲೇ ಛಾಪು ಮೂಡಿಸಿದ್ದರು. ಮನಸ್ಸಿದ್ದರೆ ಮಾರ್ಗ ಎಂಬ ಮಾತನ್ನು ರುಜುವಾಗಿಸಿದರು.

ಪರಿಣಾಮ ಬಡ ರೈತರ ಸಾಲ ಮನ್ನಾದಂತಹ ಅಸಾಧ್ಯ ನಿಲುವು ತಾಳಿದರು. ಕುಟುಂಬದ ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯನ್ನು ಘೋಷಿಸಿ ಜಾರಿಗೊಳಿಸಿದರು. ಕೃಷಿ ಹೊಂಡ ನಿರ್ಮಾಣ ಸೇರಿದಂತೆ ರೈತ ಪರವಾದ ಹತ್ತು ಹಲವು ಕಾರ್ಯಕ್ರಮ ಘೋಷಿಸಿದರು. ಗ್ರಾಮಗಳ ಹಳ್ಳಿಹಳ್ಳಿಗೆ ರಸ್ತೆ, ವಿದ್ಯುತ್, ಕುಡಿಯುವ ನೀರು, ತಲೆ ಮೇಲೊಂದು ಸೂರು ಕಲ್ಪಿಸಿದರು. ಶಾಲಾ ಮಕ್ಕಳಿಗೆ ಬೈಸಿಕಲ್ ಯಡಿಯೂರಪ್ಪ ಜನಪ್ರಿಯ ಯೋಜನೆಗಳಲ್ಲಿ ಹೊಸ ಮೈಲಿಗಲ್ಲು. ಹಿರಿಯ ನಾಗರಿಕರಿಗೆ ಸಂಧ್ಯಾ ಸುರಕ್ಷಾ ಯೋಜನೆಯಂತಹ ವಿನೂತನ ಯೋಜನೆ ರೂಪಿಸಿದರು. ಸಾರಾಯಿ ಮಾರಾಟ ನಿಷೇಧ ಕೂಡ ಯಡಿಯೂರಪ್ಪ ಅವರದ್ದೇ ಇಚ್ಛಾಸಕ್ತಿಯ ಪರಿಣಾಮ. ಎಲ್ಲ ಬಗೆಯ ಲಾಟರಿಗಳನ್ನು ನಿಷೇಧಿಸಿ 2007ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಕರ್ನಾಟಕವನ್ನು ಲಾಟರಿ ಮುಕ್ತ ರಾಜ್ಯವೆಂದು ಘೋಷಿಸಿದ್ದು ಐತಿಹಾಸಿಕ ಕ್ರಮ ಎನ್ನಲು ಅಡ್ಡಿಯಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಆಡಳಿತದ ಮುಖ್ಯಸ್ಥರೊಬ್ಬರ ನಡವಳಿಕೆ ಅವರ ಕೆಳಗಿನವರ ಮೇಲೆ ಪ್ರಭಾವ ಬೀರುತ್ತದೆ. ಸರಕಾರಿ ವ್ಯವಸ್ಥೆಯೆಂದರೆ ಜಡ ಭರತನ ಸ್ಥಿತಿಯಲ್ಲಿರುತ್ತದೆ. ಜಿಡ್ಡುಗಟ್ಟಿದಂತಹ ಇಂತಹ ವ್ಯವಸ್ಥೆಯನ್ನು ಸರಿದಾರಿಗೆ ತರಲು ಸಾಧ್ಯವೇ ಇಲ್ಲ ಎಂಬ ಅಸಹನೆಯ ಮಾತು ಎಲ್ಲೆಡೆ ಕೇಳಿ ಬರುತ್ತದೆ. ಹಾಗಾಗಿ ಆಡಳಿತ ಯಂತ್ರವನ್ನು ಸರಿ ದಿಕ್ಕಿನಲ್ಲಿ ಸಾಗಿಸುವ ದೃಷ್ಟಿಯಿಂದ ತಾವೇ ಮುಂದಾಗಿ ಮೇಲ್ಪಂಕ್ತಿ ಹಾಕಿಕೊಟ್ಟವರು ಯಡಿಯೂರಪ್ಪ ಅವರು. ಅವರು ಯಾವುದೇ ಇಲಾಖೆಯ ಸಭೆ ನಡೆಸುವುದಿದ್ದರೂ ಪೂರ್ಣ ಮಾಹಿತಿಯೊಂದಿಗೆ ಬಂದು ಕುಳಿತುಕೊಳ್ಳುತ್ತಿದ್ದರು. ಅಧಿಕಾರಿಗಳು ನೀಡುವ ಫೀಡ್‌ಬ್ಯಾಕ್ ಒಂದನ್ನೇ ನೆಚ್ಚಿಕೊಂಡರೆ ಜನ ಕಲ್ಯಾಣದ ವಿಷಯದಲ್ಲಿ ಪೂರ್ಣ ನ್ಯಾಯ ಕೊಡಲು ಆಗುವುದಿಲ್ಲ. ರಾಜಕಾರಣಿಯಾದವರಿಗೆ ಸ್ವತಃ ದೂರದೃಷ್ಟಿ ಇರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಯಡಿಯೂರಪ್ಪ ಸ್ಪಷ್ಟತೆ ಹೊಂದಿದ್ದರು. ಹಾಗಾಗಿ ಅವರು ನಡೆಸುವ ಸಭೆಗಳು ಫಲಿತಾಂಶ ಆಧಾರಿತವಾಗಿರುತ್ತಿದ್ದವು.

ಶಿಸ್ತು ಸಮಯಪಾಲನೆಗೆ ಅಗ್ರ ಸ್ಥಾನ

ವಿವಿಧ ಇಲಾಖಾ ಮುಖ್ಯಸ್ಥರ ಸಭೆಗಳಿರಲಿ, ಜಿಲ್ಲಾಡಳಿತದೊಂದಿಗಿನ ಸಭೆ ಅಥವಾ ಸಚಿವ ಸಂಪುಟ ಸಭೆಯಿರಬಹುದು.

ಈ ಎಲ್ಲ ಸಭೆಗಳಲ್ಲೂ ಯಡಿಯೂರಪ್ಪನವರು ನಿಗದಿತ ಸಮಯಕ್ಕಿಂತ 5 ನಿಮಿಷ ಮುಂಚೆಯೇ ಹಾಜರಿರುತ್ತಿದ್ದರು. ಆಡಳಿತದ ಶಕ್ತಿ ಕೇಂದ್ರ ವಿಧಾನಸೌಧದಿಂದ ಹಿಡಿದು ಜಿಲ್ಲಾ ಪ್ರವಾಸದ ಸಂದರ್ಭದಲ್ಲಿ ನಡೆಸುವ ಯಾವುದೇ ಸಭೆಗಳಿಗೆ ಅವರು ತಡವಾಗಿ ಹೋದ ನಿದರ್ಶನವೇ ಇಲ್ಲ ಎನ್ನಬಹುದು. ಹಾಗಾಗಿ ಯಡಿಯೂರಪ್ಪನವರ ಅಧಿಕಾರ ಅವಧಿಯಲ್ಲಿ ಆಡಳಿತ ಯಂತ್ರ ಚುರುಕಾಗಿತ್ತು.

ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ, ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುದಾನ, ಪ್ರತ್ಯೇಕ ಕೃಷಿ ಬಜೆಟ್ ಮಂಡನೆ ಪ್ರಯೋಗ, ನಗರ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಸಮತೋಲನದ ಹೆಜ್ಜೆ, ಐಟಿ ಸಿಟಿ ಖ್ಯಾತಿಯ ಬೆಂಗಳೂರಿನ ಮೂಲಸೌಕರ್ಯಕ್ಕೆ ಮೊದಲ ಬಾರಿಗೆ ಹೆಚ್ಚು ನೆರವು ಕಲ್ಪಿಸಿದ್ದು ಸೇರಿದಂತೆ ಅಭಿವೃದ್ಧಿಯ ಹೊಸ ಅಧ್ಯಾಯವನ್ನೇ ಯಡಿಯೂರಪ್ಪ ಅವರು ಪ್ರಾರಂಭಿಸಿದ್ದರು.

ಮಾತು ಕೃತಿ ಬದ್ಧತೆ: ಇಂದು ಯಡಿಯೂರಪ್ಪ ಅವರ ಬಳಿ ಅಧಿಕಾರವಿಲ್ಲ. ಆದರೆ ಈಗಲೂ ಜನಪ್ರಿಯತೆಯಲ್ಲಿ ಅವರನ್ನು ಮೀರಿಸಿವವರಿಲ್ಲ. ಅದಕ್ಕೆ ಕಾರಣ ಜನಸಾಮಾನ್ಯರು, ಕೆಳಹಂತದ ಕಾರ್ಯಕರ್ತರನ್ನು ಪ್ರೀತಿಯಿಂದ ಅವರು ನೋಡುವ ಪರಿ ಕಾರಣ. ಬಾರಣ್ಣ, ಏನಣ್ಣ ಎಂದು ಯಡಿಯೂರಪ್ಪ ಅವರು ಬಾಚಿ ತಬ್ಬಿದರೆ ಮನಸೋಲದವರೇ ಇಲ್ಲ.

ಸರ್ವ ಜನರ ಪ್ರಿಯ ನಾಯಕ: ಯಡಿಯೂರಪ್ಪ ಅವರನ್ನು ರೈತ ನಾಯಕ, ವೀರಶೈವ ಲಿಂಗಾಯತ ನಾಯಕ ಎಂದು ಕರೆಯುತ್ತಾರೆ ನಿಜ, ಆದರೆ ವಾಸ್ತವದಲ್ಲಿ ಅವರು ಇಡೀ ರಾಜ್ಯದಲ್ಲಿ ಸರ್ವ ಜನಪ್ರಿಯ ಅಗ್ರಗಣ್ಯ ನಾಯಕ. ಅದಕ್ಕೆ ಕಾರಣ ಅಧಿಕಾರ ಇಲ್ಲದಾಗ ಜಾತಿ ಮತ ನೋಡದೆ ಎಲ್ಲ ಜನಜಾತಿಗಳ ಪರ ಹೋರಾಟ ರೂಪಿಸಿದ್ದು, ಅಧಿಕಾರ ಬಂದಾಗ ಆಡಳಿತ ಮತ್ತು ಸರಕಾರದ ಯೋಜನೆಗಳನ್ನು ಎಲ್ಲ ಜನರ ಮನೆ ಬಾಗಿಲಿಗೆ ತಲುಪಿಸಿದ್ದು, ಪಕ್ಷದಲ್ಲಿ ಎಲ್ಲ ಭಾಗಗಳ ಎಲ್ಲ ಜಾತಿಗಳ ಎರಡು ಮತ್ತು ಮೂರನೇ ತಲೆಮಾರಿನ ನಾಯಕತ್ವವನ್ನು ಪ್ರೀತಿಸಿದ್ದು ಮತ್ತು ಬೆಳೆಸಿದ್ದು.

ಅಧಿಕಾರಿಗಳು, ರಾಜಕಾರಣಿಗಳೂ ಹೊಣೆ | ಇವರ ಹಣದ ದಾಹಕ್ಕೆ ಜನ ಪರದಾಟ | ಎಲ್‌ನಿನೋ ನೆಪ ನೀಡಬೇಡಿ

ತಾಪಮಾನ ಹೆಚ್ಚಳಕ್ಕೆ ಎಲ್‌ನಿನೋ ಅಷ್ಟೇ ಹೊಣೆ ಅಲ್ಲ

ಕನ್ನಡಪ್ರಭ ಸಂದರ್ಶನ

ಶ್ರೀಕಾಂತ್ ಎನ್. ಗೌಡಸಂದ್ರ

ಮುಖಾಮುಖಿ

ಹರಿತ ಪ್ರಶ್ನೆ. ಚುರುಕು ಉತ್ತರ

ಅತಿಯಾದ ಬಿಸಿಲು, ಬಿಸಿಗಾಳಿಯಿಂದಾಗಿ ರಾಜ್ಯದ ಸ್ಥಿತಿ ಕಾದ ಹೆಂಚಿನಂತಾಗಿದೆ. ಹವಾಮಾನ ವೈಪರೀತ್ಯ, ಜಲಮೂಲ, ಹಸಿರು ಹೊದಿಕೆ ನಾಶದ ಕ್ರಮಕ್ಕೆ ಶಿಕ್ಷೆ ಎಂಬಂತೆ ತಾಪ ಮಾನ ವಿಪರೀತ ಹೆಚ್ಚಾಗುತ್ತಿದೆ. ಇದಕ್ಕೆ ಈ ವರ್ಷ ಎಲ್‌ನಿನೋ ದುಷ್ಪರಿಣಾಮವೂ ಜೊತೆಯಾಗಿದೆ. ಪೆಸಿಫಿಸಿಕ್ ಮಹಾಸಾಗರದ ತಾಪಮಾನ ಏರಿಕೆಯಿಂದ ಉಂಟಾಗುವ ಎಲ್‌ನಿನೋ ಪರಿಣಾಮದಿಂದಾಗಿ ಬಿಸಿಲು ಹೆಚ್ಚಾಗಿದೆ. ಭಾರತ ವಿಶೇಷವಾಗಿ ಕರ್ನಾಟಕದಲ್ಲಿ ಮಾನ್ಸೂನ್‌ನಲ್ಲಿ ಮಳೆ ಕೊರತೆ ಉಂಟು ಮಾಡಲಿದೆ. ಇದೆಲ್ಲವೂ ರಾಜ್ಯದಲ್ಲಿ ಮಳೆ, ತಾಪಮಾನ ಮತ್ತು ನೀರಿನ ಲಭ್ಯತೆ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ಮಾನ್ಸೂನ್ ಮಳೆಯ ಅಸ್ಥಿರತೆ ಕೃಷಿ ಹಾಗೂ ಆಹಾರ ಉತ್ಪಾದನೆಗೆ ಹೇಗೆ ಸವಾಲು ಒಡ್ಡಲಿವೆ? ಇದರ ಪರಿಣಾಮದಿಂದ ರಾಜ್ಯದ ಜನತೆ ಏನೆಲ್ಲಾ ಸಂಕಷ್ಟ ಎದುರಿಸಬೇಕು? ಎಲ್‌ನಿನೋದಿಂದ ಉಂಟಾಗುವ ಬರ, ತಾಪಮಾನ ಹೆಚ್ಚಳ, ಆಹಾರದ ಕ್ಷಾಮದಿಂದ ಪಾರಾಗಲು ಕೈಗೊಳ್ಳಬೇಕಾದ ತಕ್ಷಣದ ಹಾಗೂ ಸುದೀರ್ಘ ಅವಧಿಯ ಕ್ರಮಗಳೇನು? ಎಂಬಿತ್ಯಾದಿ ವಿಷಯಗಳ ಬಗ್ಗೆ ಐಐಎಸ್ಸಿಯ ಹಿರಿಯ ಪರಿಸರ ವಿಜ್ಞಾನಿ ಟಿ.ವಿ.ರಾಮಚಂದ್ರ 'ಕನ್ನಡಪ್ರಭ' ಜತೆ ಮುಖಾಮುಖಿ ಮಾತನಾಡಿದ್ದಾರೆ.

> **• ಅರಣ್ಯ ನಾಶಕ್ಕೂ ಸರ್ಕಾರಕ್ಕೂ ಏನು ಸಂಬಂಧ?**
> ಕಳೆದ ಕೆಲ ದಶಕದಲ್ಲೇ ಶೇ.35ರಷ್ಟು ಅರಣ್ಯ ನಾಶ ಆಗಿದೆ. ಅರಣ್ಯ ಉತ್ಪಾದನೆ ಹಾಗೂ ರಾಜ್ಯದ ಅರಣ್ಯ ಮೌಲ್ಯ ಕುಸಿದಿದೆ. ನಾವು ಕಳೆದುಕೊಂಡ ಅರಣ್ಯ ಹಾಗೂ ಅರಣ್ಯ ಸಂಪತ್ತಿಗೆ ಸರ್ಕಾರದ ಅಧಿಕಾರಿಗಳು ಹೊಣೆ ಅಲ್ಲವೇ? ಕಾಡು ಲೂಟಿ ಮಾಡಲು ಬಿಟ್ಟವರಿಂದಲೇ ಪರಿಹಾರವನ್ನು ಸಂಗ್ರಹಿಸಬೇಕಲ್ಲವೇ?
>
> **• ಹಾಗಾದರೆ ನಮ್ಮ ರಾಜ್ಯದ ಸ್ಥಿತಿ ಬದಲಾಗುವುದಿಲ್ಲವೇ?**
> ನ್ಯಾಯಾಂಗ ಒಂದೇ ನಮಗಿರುವ ಭರವಸೆ. ಪ್ರಬುದ್ಧವಾದ, ಪರಿಸರ ಜ್ಞಾನ ಇರುವ ನ್ಯಾಯಾಧೀಶರು ಬೇಕಾಗಿದ್ದಾರೆ.

- **ರಾಜ್ಯದಲ್ಲಿ ತಾಪಮಾನ ಹಿಂದೆಂದಿಗಿಂತಲೂ ತೀವ್ರ ಪ್ರಮಾಣದಲ್ಲಿ ಏರಿಕೆ ಆಗಲು ಕಾರಣವೇನು?**
  ಇದು ಎಚ್ಚರಿಕೆ ಗಂಟೆ. ತಾಪಮಾನ ಏರಿಕೆ ನಮಗೆ ಎರಡು ವಿಷಯಗಳನ್ನು ತೋರಿಸುತ್ತದೆ. ಹವಾಮಾನ ವೈಪರೀತ್ಯ ಹಾಗೂ ಜಲ ನಗರೀಕರಣದ(ವಾಟರ್ ಅರ್ಬನೈಸೇಷನ್) ಅನುಪಸ್ಥಿತಿ. ಮುಖ್ಯವಾಗಿ ಅರಣ್ಯನಾಶ, ಕೆರೆಗಳ ನಾಶದಿಂದ ರಾಜ್ಯದಲ್ಲಿ ನಾವು ಆಪತ್ತಿಗೆ ಆಹ್ವಾನ ನೀಡುತ್ತಿದ್ದೇವೆ.
- **ವಿಶ್ವದ ಹೆಚ್ಚಿನ ಬಿಸಿ ನಗರಗಳಲ್ಲಿ ಕರ್ನಾಟಕದ್ದೇ 3 ಜಿಲ್ಲೆಗಳಿವೆ?**
  ರಾಯಚೂರು, ಬಾಗಲಕೋಟೆ, ಯಾದಗಿರಿ ಜಿಲ್ಲೆಗಳಲ್ಲಿ ಉಷ್ಣಾಂಶ ಹೆಚ್ಚಿರುವುದಾಗಿ ಪಟ್ಟಿ ಹೇಳಿದೆ. ಇದು 3 ನಗರಗಳಿಗೆ ಸೀಮಿತವಾಗಿಲ್ಲ. ಬಹುತೇಕ ರಾಜ್ಯದೆಲ್ಲೆಡೆ ಬಿಸಿಲು ಹೆಚ್ಚಾಗಿದೆ. ಜಲ ಮೂಲಗಳ ನಾಶ, ಇರುವ ಕೆರೆಗಳ ಪುನಶ್ಚೇತನ, ಜಲಾನಯನ ಪ್ರದೇಶಗಳ ಸಂರಕ್ಷಣೆ ಮಾಡದಿರುವುದು ಇದಕ್ಕೆ ಕಾರಣ. ತಕ್ಷಣ ಎಚ್ಚೆತ್ತುಕೊಳ್ಳದಿದ್ದರೆ ನಮ್ಮ ಭವಿಷ್ಯದ ಜನಾಂಗಕ್ಕೆ ಉತ್ತಮ ಗಾಳಿ, ಕುಡಿಯುವ ನೀರು, ಆಹಾರ ನೀಡಲಾಗದ ಅಸಹಾಯಕ ಸ್ಥಿತಿಗೆ ತಲುಪಲಿದ್ದೇವೆ.
- **ಹವಾನಿಯಂತ್ರಿತ ನಗರ ಎಂದು ಹೆಸರಾಗಿದ್ದ ಬೆಂಗಳೂರು ಕೂಡ ಕಾದ ಹೆಂಚಿನಂತಾಗಲು ಕಾರಣವೇನು?**
  ಬೆಂಗಳೂರು ಹವಾನಿಯಂತ್ರಿತ ನಗರ ಎಂದೇ ಹಿಂದೆ ಪ್ರಸಿದ್ಧಿ ಪಡೆದಿತ್ತು. ವಾಸಕ್ಕೆ ಅತಿ ಯೋಗ್ಯ ಎಂಬ ಹಣೆಪಟ್ಟಿ ಕೂಡ ಇತ್ತು. ಇಲ್ಲಿ ಏಪ್ರಿಲ್‌ನಲ್ಲಿ 14 ರಿಂದ 16 ಡಿಗ್ರಿ ಸೆಲ್ಸಿಯಸ್, ಡಿಸೆಂಬರ್‌ನಲ್ಲಿ 0 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿ, ಪ್ಯಾಲೇಸ್‌ನಲ್ಲಿ ಸೇಬು ಬೆಳೆಯುತ್ತಿದ್ದರು.
- **ಆ ರೀತಿಯಿದ್ದ ನಗರ ಈಗ ವರ್ಷದಿಂದ ವರ್ಷಕ್ಕೆ ಗರಿಷ್ಠ ತಾಪಮಾನದಲ್ಲೇ ದಾಖಲೆ ಬರೆಯುತ್ತಿದೆಯಲ್ವಾ?**
  ಅರ್ಥಹೀನ ನಗರೀಕರಣದಿಂದ ಆದ ಕೆರೆ, ಹಸಿರು ನಾಶ ಹಾಗೂ ಕಾಂಕ್ರೀಟೀಕರಣವೇ ಕಾರಣ. ಕಾಂಕ್ರೀಟ್ ರೇಡಿಯೇಷನ್‌ನಿಂದ ಬಿಸಿ ಹೆಚ್ಚಾಗುತ್ತಿದೆ. ಈಗ ಬೆಂಗಳೂರು ವಾಸಯೋಗ್ಯವಲ್ಲದ ನಗರವಾಗಿ ಬದಲಾಗುತ್ತಿದೆ.



ಟಿ.ವಿ.ರಾಮಚಂದ್ರ
ಹಿರಿಯ ಪರಿಸರ ವಿಜ್ಞಾನಿ, ಐಐಎಸ್ಸಿ

1973ರಲ್ಲಿ ಬೆಂಗಳೂರಿನಲ್ಲಿ ಶೇ.68.2 ಹಸಿರು ಹಾಗೂ ಶೇ.7.97 ಮಾತ್ರ ಕಾಂಕ್ರೀಟ್ ನಿರ್ಮಾಣ ಇತ್ತು. 1992ರಲ್ಲಿ ಶೇ.46.2 ಹಸಿರು ಹಾಗೂ ಶೇ.27.3 ಕಾಂಕ್ರೀಟ್ ಕಟ್ಟಡ ಆವರಿಸಿತು. 2025ರ ವೇಳೆಗಂತೂ ಶೇ.87.6 ಕಾಂಕ್ರೀಟ್ ಆವರಿಸಿ ಹಸಿರು ಶೇ.3 ಕ್ಕಿಂತ ಕಡಿಮೆಯಾಗಿ ಕಣ್ಮರೆಯಾಗುವ ಮಟ್ಟ ತಲುಪಿದೆ. 70ರ ದಶಕದಲ್ಲಿ 700ಕ್ಕೂ ಹೆಚ್ಚಿದ್ದ ಕೆರೆಗಳು 216ಕ್ಕೆ ಕುಸಿದಿವೆ.

- **ಇದಕ್ಕೆ ಪರಿಹಾರವೇನು?**
  ಕೆರೆಗಳ ಪುನಶ್ಚೇತನ, ಅಂತರ್ಜಲ ಮರುಪೂರಣ, ಮಳೆ ಕಾಡು ನಿರ್ಮಾಣ ಮಾಡಿದರೆ ಬೆಂಗಳೂರಿಗೆ ಉಳಿಗಾಲ.
- **ಈ ರೀತಿ ಮಾಡಿ ಯಶಸ್ವಿಯಾದ ಉದಾಹರಣೆ ಇದೆಯೇ?**
  ಸಾರಕ್ಕಿ ಕೆರೆಯೇ ಉತ್ತಮ ಉದಾಹರಣೆ. ಸಾರಕ್ಕಿ ಕರೆ ಪುನಶ್ಚೇತನ ಮಾಡಿ ಶುದ್ಧೀಕರಿಸಿದ ನೀರು ತುಂಬಿದ ಪರಿಣಾಮ ಅಲ್ಲಿನ ಅಂತರ್ಜಲ 320 ಅಡಿಯಷ್ಟು ವೃದ್ಧಿಸಿತು. 2024ರಲ್ಲಿ ತೀವ್ರ ನೀರಿನ ಹಾಹಾಕಾರ ಸೃಷ್ಟಿಯಾದರೂ ಈ ಭಾಗದಲ್ಲಿ ನೀರಿನ ಕೊರತೆ ಆಗಲಿಲ್ಲ. ನಗರದ ತಾಪಮಾನಕ್ಕಿಂತ ಇಲ್ಲಿನ ತಾಪಮಾಣ 2 ಡಿಗ್ರಿ ಸೆಲ್ಸಿಯಸ್ ಕಡಿಮೆ ನಮೂದಾಗಿತ್ತು.
- **ಹಸಿರು ಹೊದಿಕೆ ಇರುವೆಡೆ ಕಡಿಮೆ ತಾಪಮಾನ ದಾಖಲಾಗಿದೆಯಂತೆ?**
  ಅದಕ್ಕೆ ನಮ್ಮ ಕ್ಯಾಂಪಸ್ ಉತ್ತಮ ಉದಾಹರಣೆ. ಐಐಎಸ್ಸಿಯ 2 ಹೆಕ್ಟೇರ್‌ನಲ್ಲಿ 49 ತಳಿಯ 500 ಸ್ಥಳೀಯ ಸಸಿ ನೆಡಲಾಗಿತ್ತು. ಇದೀಗ ಅದು ಮಳೆಕಾಡಾಗಿದೆ. ಇಲ್ಲಿ ನಗರದ ತಾಪಮಾಣಕ್ಕಿಂತ 2-3 ಡಿಗ್ರಿ ಕಡಿಮೆ ತಾಪಮಾನ ಇರುತ್ತದೆ. 150 ಅಡಿಯಲ್ಲಿ ಸಿಗುತ್ತಿದ್ದ ಅಂತರ್ಜಲ 15 ಅಡಿಗೇ ಸಿಗುತ್ತಿದೆ. ಬೆಂಗಳೂರಿನ ಪ್ರತಿ ವಾರ್ಡ್‌ಗೂ 2 ಹೆಕ್ಟೇರ್ ಮಳೆಕಾಡು ಬೇಕು.
- **ಪ್ರತಿ ವಾರ್ಡ್‌ಗಳಲ್ಲೂ ಉದ್ಯಾನವನ ಮಾಡಿದ್ದಾರೆ. ಅದರಿಂದ ಪ್ರಯೋಜನವಿಲ್ಲವೇ?**
  ಎಲ್ಲಾ ಉದ್ಯಾನವನಗಳಲ್ಲೂ ಹಸಿರು ಹೊದಿಕೆಗಿಂತ ಕಾಂಕ್ರೀಟ್ ನಿರ್ಮಾಣಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಹಾಪ್‌ಕಾಮ್ಸ್, ಕಾಂಪೋಸ್ಟ್ ಘಟಕ, ಕ್ಲಿನಿಕ್ ಎಲ್ಲ ಕಟ್ಟಡವೂ ನಿರ್ಮಿಸುತ್ತಾರೆ. ಇದು ಮೂರ್ಖರ ಲಕ್ಷಣ. ಉದ್ಯಾನವನದ ಉದ್ದೇಶ ಸುತ್ತಮುತ್ತಲಿನ ಜನರಿಗೆ ಶುದ್ಧ ಗಾಳಿ ಹಾಗೂ ಪರಿಸರ ನೀಡುವುದಾಗಿರಬೇಕು. ಮಳೆಕಾಡು ನಿರ್ಮಾಣವೇ ಪರಿಹಾರ.
- **ಪರಿಸರ, ನೀರು ಸಂರಕ್ಷಣೆಗೆ ಸಾರ್ವಜನಿಕರ ಪಾತ್ರವಿಲ್ಲವೇ?**
  ಖಂಡಿತ ಇದೆ. ತಮ್ಮ ನಿವೇಶನಗಳಲ್ಲಿ ಸೆಟ್‌ಬ್ಯಾಕ್ ನಿಯಮ ಪಾಲಿಸಿ ಶೇ.30 ನಿವೇಶನ ಖಾಲಿ ಬಿಟ್ಟು ಮನೆ ಕಟ್ಟಿದರೆ ಎ.ಸಿ, ಫ್ಯಾನ್ ಬೇಕಿಲ್ಲ. ಅತಿ ಆಸೆಗೆ ಬಿದ್ದು ಜನರೂ ತಪ್ಪು ಮಾಡುತ್ತಿದ್ದಾರೆ. ಅಂತರ್ಜಲದ ಅತಿಯಾದ ಬಳಕೆ, ಮಳೆ ನೀರು ಕೊಯ್ಲು ಅಳವಡಿಸದಿರುವುದು ನಮ್ಮ ಜನರ ತಪ್ಪು.
- **ರಾಜ್ಯದಲ್ಲಿ ಬಿಸಿ ಹೆಚ್ಚಾಗಲು ಎಲ್‌ನಿನೋ ಪರಿಣಾಮವೇ ಕಾರಣ ಎನ್ನುತ್ತಾರಲ್ಲ?**
  ಎಲ್‌ನಿನೋ ಪರಿಣಾಮ ವಾತಾವರಣದಲ್ಲಿ ತೇವಾಂಶ ಕಡಿಮೆ ಆಗುತ್ತದೆ. ಅದರಿಂದ ತಾಪಮಾನ ಹೆಚ್ಚಳದ ಅನುಭವ ಆಗುತ್ತದೆ. ಆದರೆ, ಈ ವರ್ಷದ ತಾಪಮಾನ ಹೆಚ್ಚಳಕ್ಕೆ ಎಲ್‌ನಿನೋ ಒಂದನ್ನೇ ಹೊಣೆ ಮಾಡಬಾರದು. ಏಕೆಂದರೆ 2024ರಲ್ಲಿ ಬೆಂಗಳೂರಿನಲ್ಲಿ ಇದಕ್ಕಿಂತ ಹೆಚ್ಚು ತಾಪಮಾನ ದಾಖಲಾಗಿತ್ತು. ಜತೆಗೆ ಹಸಿರು ಬರ ಉಂಟಾಗಿತ್ತು. ಸಸಿಗಳು ಹಸಿರಿದ್ದರೂ ಅವುಗಳಿಂದ ಆಹಾರ ಉತ್ಪಾದನೆ ಆಗಿರಲಿಲ್ಲ. ಆಗ ಎಲ್‌ನಿನೋ ಇರಲಿಲ್ಲ. ಹೀಗಾಗಿ ಈಗ ತಾಪಮಾನ ಹೆಚ್ಚಳಕ್ಕೆ ಅಧಿಕಾರಿಗಳು, ರಾಜಕಾರಣಿಗಳು ಹೊಣೆ. ಅವರು ಎಲ್‌ನಿನೋ ನೆಪ ನೀಡಿ ತಪ್ಪಿಸಿಕೊಳ್ಳಬಾರದು.
- **ಏನಿದು ಎಲ್‌ನಿನೊ? ಅದರ ಪರಿಣಾಮವೇನು?**
  ಪೆಸಿಫಿಕ್ ಮಹಾಸಾಗರದಲ್ಲಿ ತಾಪಮಾನ ಏರಿಕೆಯಿಂದ ಉಂಟಾಗುವ ಎಲ್‌ನಿನೋದಿಂದ ರಾಜ್ಯದಲ್ಲಿ ಮಳೆ ಏರುಪೇರಾಗಲಿದೆ. ಮಳೆ ಅಭಾವದ ಮುನ್ಸೂಚನೆ ದೊರೆತಿದ್ದು, ಇದರಿಂದ ನೀರಿನ ಹಾಹಾಕಾರ ಉಂಟಾಗಬಹುದು. ಮುಖ್ಯವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಕೊರತೆ ಉಂಟಾಗಿ ಬೆಂಗಳೂರಿನಲ್ಲಿ ನೀರು ಸಿಗದ ಸ್ಥಿತಿ ನಿರ್ಮಾಣವಾಗಲಿದೆ. ಕುಡಿಯುವ ನೀರಿಗೂ ಹಾಹಾಕಾರ ಸೃಷ್ಟಿಯಾಗಲಿದೆ. ಹೀಗಾಗಿ ಕೂಡಲೇ ಎಚ್ಚೆತ್ತುಕೊಳ್ಳಬೇಕಿದೆ.
- **ರಾಜ್ಯದ ಮೇಲೆ ಎಲ್‌ನಿನೋ ಪರಿಣಾಮವೇನು?**
  ಐಪಿಸಿಸಿ ಪ್ರಕಾರ ರಾಜ್ಯದ ಮೇಲೆ ಎಲ್‌ನಿನೋ ಕೆಲ ತಿಂಗಳ ಸುದೀರ್ಘ ಪ್ರಭಾವ ಬೀರಲಿದೆ. ಇದರಿಂದ ಮಳೆ ಅಭಾವ ಉಂಟಾಗಲಿದೆ. ಆದರೂ ಕೆರೆಗಳ ಪುನಶ್ಚೇತನ, ಸ್ಥಳೀಯ ಪ್ರಬೇಧದ ಸಸಿಗಳ ಅರಣ್ಯಗಳು ಇರುವ ಕಡೆ ಇದರ ಪ್ರಭಾವ ತೀವ್ರವಾಗಿರುವುದಿಲ್ಲ. ಉದಾ: ಮೂಡುಬಿದಿರೆಯಲ್ಲಿ 32 ಕೆರೆಗಳ ಹೂಳೆತ್ತಿದ್ದರು. 2024ರಲ್ಲಿ ಬರ ಉಂಟಾದಾಗ ಅಲ್ಲಿ ಯಾವುದೇ ಸಮಸ್ಯೆಯಾಗಲಿಲ್ಲ.
- **ಮಳೆ ಕೊರತೆಯಿಂದಾಗಿ ಈ ವರ್ಷ ಯಾವ ರೀತಿಯ ಬೆಳೆಗಳನ್ನು ಬೆಳೆಯಬೇಕು?**
  ರೈತರು ಈಗಲೇ ಎಚ್ಚೆತ್ತುಕೊಳ್ಳಬೇಕು. ಹವಾಮಾನಕ್ಕೆ ಪೂರಕ ಬೆಳೆಗಳನ್ನು ಬೆಳೆಯ ಬೇಕು. ಕಬ್ಬು, ಭತ್ತದಂತಹ ಹೆಚ್ಚು ನೀರು ಬಯಸುವ ಬೆಳೆಗಳ ಬದಲು ರಾಗಿಯಂತಹ ಸಿರಿಧಾನ್ಯಗಳಿಗೆ ಹೆಚ್ಚು ಒತ್ತು ಕೊಡಬೇಕು. ಇದನ್ನು ಐಪಿಸಿಸಿ ವರದಿಯಲ್ಲೂ ಉಲ್ಲೇಖ ಮಾಡಲಾಗಿದೆ.

Editor: RAVI HEGDE, Printed and Published by B.V. MALLIKARJUNAIAH on behalf of Kannada Prabha Publications Ltd., 'Vijaya Laxmi Nivas' 1-1165/12A,B Aiwan-E-Shahi Road, Kalaburagi-585 102
Printed at Manipal Media Networks Ltd., Sy. No. 7/2, Plot No. CA-3/1, 28(P) & 29(P), Kapnoor Industrial Area, 2nd Stage, Kapnoor, Kalaburagi-585 104. Registered No. KA/BGGPO/2559/10-12

Kalaburagi
Vol.19, No. 126
RNI Reg.No.KARKAN/2008/24487

ಸುದ್ದಿ ಸಿಂಚನ

ಇಂದು ನಿತೀಶ್ ಪುತ್ರ ನಿಶಾಂತ್ ಸಚಿವರಾಗಿ ಶಪಥ



ಪಟನಾ: ಬಿಹಾರದ ನಿರ್ಗಮಿತ ಸಿಎಂ, ರಾಜ್ಯಸಭಾ ಸದಸ್ಯ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಗುರುವಾರ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಸರ್ಕಾರದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ನಿಶಾಂತ್ ಕಳೆದ ಮಾರ್ಚ್‌ನಲ್ಲಿ ಜೆಡಿಯು ಸೇರಿದ್ದರು. ಗುರುವಾರ ಪ್ರಮಾಣ ವಚನ ಸ್ವೀಕರಿಸಲಿರುವ 27 ಸಚಿವರಲ್ಲಿ ಇವರೂ ಒಬ್ಬರು ಎಂದು ಮೂಲಗಳು ಹೇಳಿವೆ. ಇವರ ಜತೆಗೆ ಜೆಡಿಯುನ ಇನ್ನೂ 11 ಮಂದಿ ಶಪಥ ಸ್ವೀಕರಿಸುವ ಸಾಧ್ಯತೆಯಿದೆ.


ಜೈವಿಕ ಉಗ್ರವಾದ: ಉಗ್ರರ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ: ಐಸಿಸ್ ಜತೆ ಸೇರಿ, ಜೈವಿಕ ವಿಷವನ್ನು ಬಳಸಿ ಸಾರ್ವಜನಿಕ ಸ್ಥಳಗಳಲ್ಲಿ ಸಾಮೂಹಿಕ ವಿಷಪ್ರಾಶನ ಮಾಡುವ ಪಿತೂರಿಯಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಓರ್ವ ವೈದ್ಯ ಸೇರಿದಂತೆ ಮೂವರ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ. ಹೈದರಾಬಾದ್ ಮೂಲದ ಡಾ. ಸೈಯದ್ ಅಹ್ಮದ್ ಮೊಹಿಯುದ್ದೀನ್ ಮತ್ತು ಸಹ ಆರೋಪಿಗಳಾದ ಉತ್ತರ ಪ್ರದೇಶದ ಆಜಾದ್ ಮತ್ತು ಮೊಹಮ್ಮದ್ ಸುಹೇಲ್ ವಿರುದ್ಧ ಗುಜರಾತ್‌ನ ಅಹಮದಾಬಾದ್ ವಿಶೇಷ ಎನ್‌ಐಎ ಕೋರ್ಟ್ ಮುಂದೆ ಆರೋಪಪಟ್ಟಿ ಸಲ್ಲಿಸಲಾಗಿದೆ. ಆರೋಪಿಗಳು ಜಿಹಾದ್ ನಡೆಸಲು ಜೈವಿಕ ಭಯೋತ್ಪಾದನೆಯ ಅಸ್ತ್ರ ಕಂಡುಕೊಂಡಿದ್ದರು. ಐಸಿಸ್‌ನ ದುಷ್ಟ ಕಾರ್ಯಸೂಚಿಯನ್ನು ಕಾರ್ಯಗತಗೊಳಿಸಲು ಹರಳೆ ಬೀಜಗಳಿಂದ ತಯಾರಾದ ಅತ್ಯಂತ ವಿಷಕಾರಿ ವಸ್ತುವಾದ ರೈಸಿನ್ ಅನ್ನು ಬಳಸಿ ಸಾಮೂಹಿಕ ವಿಷಪ್ರಾಶನಕ್ಕೆ ಯೋಜನೆ ರೂಪಿಸಿದ್ದರು ಎಂದು ಎನ್‌ಐಎ ಹೇಳಿದೆ.

ಮಾನಸ ಸರೋವರ ಯಾತ್ರೆ ಶುಲ್ಕ ₹2 ಲಕ್ಷಕ್ಕೆ

ನೈನಿತಾಲ್: ಈ ವರ್ಷ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಳ್ಳುವ ವೆಚ್ಚವು ಶೇ.20ರಷ್ಟು ಹೆಚ್ಚಾಗಿದ್ದು, ಒಟ್ಟು ತೀರ್ಥಯಾತ್ರೆ ಶುಲ್ಕ 2.09 ಲಕ್ಷ ರು.ಗಳಿಗೆ ಏರಿಕೆಯಾಗಿದೆ . ಈ ವರ್ಷದ ಯಾತ್ರೆ ಜು.4ರಂದು ಪ್ರಾರಂಭವಾಗಲಿದ್ದು, 50 ಯಾತ್ರಿಕರನ್ನು ಹೊಂದಿರುವ 10 ಬ್ಯಾಚ್‌ಗಳು ಭಾಗವಹಿಸಲಿವೆ. ಭಾರತೀಯ ಪ್ರದೇಶದ ಯಾತ್ರೆಯ ಒಟ್ಟು ವೆಚ್ಚ ಈಗ ಪ್ರತಿ ಯಾತ್ರಿಕರಿಗೆ 65,000 ರು.ಗಳಾಗಿದೆ. ಇನ್ನು ಟಿಬೆಟ್, ಚೀನಾ ಭಾಗದ ಶುಲ್ಕ ಪ್ರತ್ಯೇಕ. ಇದೆಲ್ಲ ಸೇರಿ ಯಾತ್ರೆ ಶುಲ್ಕ ಕಳೆದ ವರ್ಷದ 1.74 ಲಕ್ಷ ರು.ನಿಂದ 2.09 ಲಕ್ಷ ರು.ಗಳಿಗೆ ಏರಿದೆ.

ಸಿಎನ್‌ಎನ್ ಸಂಸ್ಥಾಪಕ ಟೆಡ್ ಟರ್ನರ್ ನಿಧನ



ವಾಷಿಂಗ್ಟನ್: 24X7 ಕಾರ್ಯನಿರ್ವಹಿಸುವ ಮೊಟ್ಟ ಮೊದಲ ಚಾನೆಲ್ ಎನ್ನಿಸಿಕೊಂಡಿದ್ದ ಸಿಎನ್‌ಎನ್ ಸ್ಥಾಪಕ ಟೆಡ್ ಟರ್ನರ್ (87) ಅಮೆರಿಕದ ನಿವಾಸದಲ್ಲಿ ನಿಧನರಾಗಿದ್ದಾರೆ. ಇವರು 1980ರಲ್ಲಿ ಸಿಎನ್‌ಎನ್ ಸ್ಥಾಪಿಸಿದ್ದರು. 1990-91ರ ಗಲ್ಫ್ ಯುದ್ಧದ ವರದಿಗಾರಿಕೆಯಿಂದಾಗಿ ಈ ಚಾನಲ್ ವಿಶ್ವಾದ್ಯಂತ ಗುರುತಿಸಿಕೊಂಡಿತ್ತು. ಟೆಡ್ ತಮ್ಮ ನೇರ ನುಡಿ ಯಿಂದಾಗಿ 'ದಕ್ಷಿಣದ ಧ್ವನಿ' ಎಂದೇ ಖ್ಯಾತರಾಗಿದ್ದರು.

ಸಮರ ಸಂಧಾನ: ಸೆನ್ಸೆಕ್ಸ್ 940, ನಿಫ್ಟಿ 298 ಅಂಕ ನೆಗೆತ

ಮುಂಬೈ: ಇರಾನ್ ಯುದ್ಧ ಕೊನೆಗೊಳಿಸುವ ಮಾತುಕತೆ ಪ್ರಗತಿ ಕಾರಣ ಬುಧವಾರ ಸೆನ್ಸೆಕ್ಸ್ 940 ಅಂಕ ಏರಿಕೆ ಕಂಡು 77, 958. 5ರಲ್ಲಿ ಮುಕ್ತಾಯಗೊಂಡಿದೆ. ನಿಫ್ಟಿ 298 ಅಂಕ ಏರಿ 24,330.9ರಲ್ಲಿ ಕೊನೆಗೊಂಡಿದೆ. ಹೂಡಿಕೆದಾರರ ಸಂಪತ್ತು ₹5.99 ಲಕ್ಷ ಕೋಟಿ ರು. ವೃದ್ಧಿ ಆಗಿದೆ.
₹ಏರಿಕೆ: ಡಾಲರ್ ಎದುರು ರು. ಮೌಲ್ಯ 61 ಪೈಸೆ ಏರಿ 94.57ರಲ್ಲಿ ಅಂತ್ಯವಾಗಿದೆ. ಕಚ್ಚಾ ತೈಲ ಬೆಲೆ 100 ಡಾಲರ್‌ಗಿಂತ ಕೆಳಗಿಳಿದಿದೆ.

ಪಕ್ಷ ಒಪ್ಪಿದವರು ಮಾತ್ರ ಬಿಜೆಪಿ ಸದಸ್ಯರು: ಬಂಗಾಳ ಬಿಜೆಪಿಯಿಂದ ಫರ್ಮಾನು

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಗೆಲುವನ್ನು ಸಾಧಿಸಿದ ಬೆನ್ನಲ್ಲೇ, 'ನಿಮ್ಮನ್ನು ನೀವೇ ಬಿಜೆಪಿ ಸದಸ್ಯ ಎಂದು ಘೋಷಿಸಿಕೊಳ್ಳಲು ಸಾಧ್ಯವಿಲ್ಲ. ಪಕ್ಷವು ನಿಮಗೆ ಸದಸ್ಯತ್ವ ನೀಡಿದ್ದರಷ್ಟೇ ನಿಮಗೆ ಹಾಗೆ ಹೇಳಿಕೊಳ್ಳುವ ಅರ್ಹತೆ ಬರುತ್ತದೆ' ಎಂದು ಪಕ್ಷ ಫರ್ಮಾನು ಹೊರಡಿಸಿದೆ. ಗೆಲುವಿನ ಬೆನ್ನಲ್ಲೇ ಬಿಜೆಪಿಗರು ಎಂದು ಹೇಳಿಕೊಂಡು ಹಲವರು ಹಿಂಸೆಯಲ್ಲಿ ತೊಡಗುತ್ತಿರುವುದನ್ನು ಗಮನದಲ್ಲಿರಿಸಿ, ಪಕ್ಷದ ಹೆಸರಿಗೆ ಕಳಂಕ ಬರದಂತೆ ತಡೆಯಲು ಈ ಘೋಷಣೆ ಮಾಡಲಾಗಿದೆ.

ಡಿಎಂಕೆ ಜತೆ ಮೈತ್ರಿ ಖತಂ, ಟಿವಿಕೆಗೆ ಕೈ ಬೆಂಬಲ

ಡಿಎಂಕೆ ಜತೆಗಿನ 23 ವರ್ಷದ ಮೈತ್ರಿಗೆ ಕಾಂಗ್ರೆಸ್ ಗುಡ್ ಬೈ | ವಿಜಯ್‌ಗೆ ಈಗ 5 ಕಾಂಗ್ರೆಸ್ ಶಾಸಕರ ಬಲ | ಟಿವಿಕೆ ಬಲ ಈಗ 112ಕ್ಕೆ

ಚೆನ್ನೈ: ಡಿಎಂಕೆಯ ದೀರ್ಘಕಾಲದ ಮಿತ್ರ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷವು, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಬುಧವಾರ ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ನಟ-ರಾಜಕಾರಣಿ ವಿಜಯ್ ಅವರ ಟಿವಿಕೆಗೆ ಬೆಂಬಲ ನೀಡುವುದಾಗಿ ಘೋಷಿಸಿದೆ.

ಇದೇ ವೇಳೆ, ತಮಿಳುನಾಡಿನ ತನ್ನ 23 ವರ್ಷದ ಮಿತ್ರಪಕ್ಷವಾದ ಡಿಎಂಕೆ ಜೊತೆಗಿನ ಸಂಬಂಧವನ್ನು ಕಾಂಗ್ರೆಸ್ ಕಡಿದುಕೊಂಡಿದೆ.

ತಮಿಳುನಾಡು ಕಾಂಗ್ರೆಸ್ ಸಮಿತಿ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷ (ಸಿಎಲ್‌ಪಿ) ಟಿವಿಕೆಗೆ ಸರ್ಕಾರ ರಚಿಸಲು ಸಂಪೂರ್ಣ ಬೆಂಬಲ ನೀಡಲು ನಿರ್ಧರಿಸಿವೆ ಎಂದು ಎಐಸಿಸಿ ರಾಜ್ಯ ಉಸ್ತುವಾರಿ ಗಿರೀಶ್ ಛೋಡಂಕರ್ ಸುದ್ದಿಗಾರರಿಗೆ ತಿಳಿಸಿದರು.


ಕಾಂಗ್ರೆಸ್ 5 ಶಾಸಕರನ್ನು ಹೊಂದಿದೆ. ಸರ್ಕಾರ ರಚನೆಗೆ 10 ಶಾಸಕರ ಕೊರತೆ ಟಿವಿಕೆಗೆ ಇದ್ದು, ಕಾಂಗ್ರೆಸ್ ಬೆಂಬಲದೊಂದಿಗೆ ಅರ್ಧ ಅವಶ್ಯಕತೆ ಪೂರೈಸಿದಂತಾಗಿದೆ. ಈ ಘೋಷಣೆ ಬಳಿಕ ಐದೂ ಕಾಂಗ್ರೆಸ್ ಶಾಸಕರು ವಿಜಯ್ ಅವರನ್ನು ಭೇಟಿ ಮಾಡಿ ಅಧಿಕೃತವಾಗಿ ಬೆಂಬಲ ಪ್ರಕಟಿಸಿದರು.

ಷರತ್ತು ಅನ್ವಯ: 'ಭಾರತದ ಸಂವಿಧಾನದಲ್ಲಿ ನಂಬಿಕೆ ಇಡದ ಕೋಮುಶಕ್ತಿಗಳನ್ನು ಟಿವಿಕೆ ಈ ಮೈತ್ರಿಕೂಟದಿಂದ ದೂರ ಇಡಬೇಕು. ಈ ಷರತ್ತಿನ ಮೇಲೆ ನಮ್ಮ ಬೆಂಬಲ ಅವಲಂಬಿತವಾಗಿದೆ' ಎಂದು ಗಿರೀಶ್ ಛೋಡಂಕರ್ ಹೇಳಿದರು.

ಇದಲ್ಲದೆ, 'ಈ ಮೈತ್ರಿಕೂಟವು ಈ ಸರ್ಕಾರ ರಚನೆಗೆ ಮಾತ್ರವಲ್ಲದೆ, ಸ್ಥಳೀಯ ಸಂಸ್ಥೆಗಳು, ಲೋಕಸಭೆ ಮತ್ತು ರಾಜ್ಯಸಭೆಗೆ ಭವಿಷ್ಯದ ಚುನಾವಣೆಗಳಿಗೂ ಮುಂದುವರಿಯಲಿದೆ. ಟಿವಿಕೆ ಮತ್ತು ತಮಿಳುನಾಡು ಕಾಂಗ್ರೆಸ್ ನಡುವಿನ ಮೈತ್ರಿಯು ಕಾಮರಾಜ್ ಅವರ ತಮಿಳುನಾಡಿನ ವೈಭವದ ದಿನಗಳನ್ನು ಮರಳಿ ತರಲು ಶ್ರಮಿಸುತ್ತದೆ, ಪೆರಿಯಾರ್ ಅವರ ಸಾಮಾಜಿಕ ನ್ಯಾಯದ ಆದರ್ಶಗಳು ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ಅವರ ಸಾಂವಿಧಾನಿಕ ಆದರ್ಶಗಳಿಗೆ ಬಲವಾದ ಬದ್ಧತೆಯೊಂದಿಗೆ ಕಾರ್ಯನಿರ್ವಹಿಸಲಿವೆ' ಎಂದು ನುಡಿದರು.

ಮೊದಲೇ ಮೈತ್ರಿಗೆ ಆಗ್ರಹ ಇತ್ತು: ಈ ನಡುವೆ, ಕಾಂಗ್ರೆಸ್ ನಾಯಕ ಕಾರ್ತಿ ಚಿದಂಬರಂ ಮಾತನಾಡಿ, 'ಚುನಾವಣೆಗೆ ಮುನ್ನ ಟಿವಿಕೆ ಜೊತೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ನಮ್ಮ ಪಕ್ಷದೊಳಗೆ ಸಾಕಷ್ಟು ಧ್ವನಿಗಳು ಕೇಳಿಬಂದಿದ್ದವು. ಅದರಲ್ಲಿ ಯಾವುದೇ ಸಂದೇಹವಿಲ್ಲ' ಎಂದು ತಿಳಿಸಿದ್ದಾರೆ.

ನಿರ್ಗಮಿತ ಸಿಎಂ ಸ್ಟಾಲಿನ್ ಜತೆ ನಟ ರಜನಿಕಾಂತ್ ಭೇಟಿ



ವಿಧಾನಸಭೆ ಚುನಾವಣೆಯಲ್ಲಿ ಸೋಲುಂಡ ಡಿಎಂಕೆಯ ಮುಖ್ಯಸ್ಥರಾಗಿರುವ ಹಂಗಾಮಿ ಸಿಎಂ ಎಂ.ಕೆ. ಸ್ಟಾಲಿನ್ ಅವರ ನಿವಾಸಕ್ಕೆ ಖ್ಯಾತ ನಟ ರಜನಿಕಾಂತ್ ಅವರು ಬುಧವಾರ ಭೇಟಿ ನೀಡಿದರು ಈ ವೇಳೆ ಇಂಥ ಕಷ್ಟ ಕಾಲದಲ್ಲಿ ತಮ್ಮ ಜತೆ ಇರುವೆ ಎಂದು ಸಾಂತ್ವನ ಹೇಳಿದರು.

ಅಣ್ಣಾ ಡಿಎಂಕೆಯಲ್ಲಿ ಒಡಕು?

ಟಿವಿಕೆ ಜತೆ ಮೈತ್ರಿಗೆ 35 ಶಾಸಕರ ಒಲವು | ಇದಕ್ಕೆ ವರಿಷ್ಠರ ತಿರಸ್ಕಾರ



ಚೆನ್ನೈ: ಟಿವಿಕೆ ಜತೆ ಮೈತ್ರಿ ವಿಚಾರದಲ್ಲಿ ಅಣ್ಣಾಡಿಎಂಕೆಯಲ್ಲಿ ಒಡಕು ಉಂಟಾಗಿದೆ. ಅಣ್ಣಾ ಎಡಿಎಂಕೆಯ 35 ಶಾಸಕರು, ಅರ್ಥಾತ್ 3ನೇ 2ರಷ್ಟು ಮಂದಿ ಟಿವಿಕೆ ಪರ ಒಲವು ತೋರಿದ್ದಾರೆ ಎಂದು ಗೊತ್ತಾಗಿದೆ. ಆದರೆ ಅವರ ಕೋರಿಕೆಯನ್ನು ಪಕ್ಷ ತಿರಸ್ಕರಿಸಿದೆ. ಇವರು ರಾಜ್ಯಸಭಾ ನಾಯಕ ಸಿ.ವಿ. ಷಣ್ಮುಗಂ ಅವರ ಕಚೇರಿಯಲ್ಲಿ ನೆರೆದು ಸಭೆ ನಡೆಸಿದ್ದಾರೆ. ಟಿವಿಕೆ ಜತೆ ಕೈಜೋಡಿಸಿ ಸರ್ಕಾರದ ಭಾಗವಾಗುವ ಬಗ್ಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಬಳಿಯೂ ವಿನಂತಿಸಿದ್ದಾರೆ ಎನ್ನಲಾಗಿದೆ. ಇದರ ಬೆನ್ನಲ್ಲೇ ಮಾತನಾಡಿರುವ ಅಣ್ಣಾಡಿಎಂಕೆ ನಾಯಕ ಕೆ.ಪಿ. ಮುನುಸ್ವಾಮಿ, ಟಿವಿಕೆಗೆ ಬೆಂಬಲ ನೀಡುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ. ಹೀಗಾಗಿ ಷಣ್ಮುಗಂ ಬಣ ಪಕ್ಷದ ನಿರ್ಧಾರವನ್ನು ಉಲ್ಲಂಘಿಸಲಿದೆಯಾ ಎಂಬುದೇ ಪ್ರಶ್ನೆಯಾಗಿದೆ.

ಜಯಾ-ಕರುಣಾನಿಧಿ ಪಕ್ಷ ಮೈತ್ರಿ ವದಂತಿ

ಅಧಿಕಾರಕ್ಕೆ ರಾಜಕೀಯ ವೈರಿಗಳು ಒಂದು? | ಮಾಧ್ಯಮ ವರದಿ





ಚೆನ್ನೈ: ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ತಮಿಳುನಾಡಿನಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ಸರ್ಕಾರ ರಚನೆ ಕಸರತ್ತು ನಡೆಸುತ್ತಿರುವನಡುವೆ, ಬದ್ಧವೈರಿಗಳಾದ ಡಿಎಂಕೆ ಹಾಗೂ ಅಣ್ಣಾಡಿಎಂಕೆ ಒಂದುಗೂಡಿ ಅಧಿಕಾರ ರಚನೆಗೆ ಮುಂದಾಗಿವೆ ಎಂಬ ಕಂಡುಕೇಳರಿಯದ ಸುದ್ದಿ ಹೊರಬಿದ್ದಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ,

ಕರುಣಾನಿಧಿ ಹಾಗೂ ಜಯಲಲಿತಾ ಕಾಲದಲ್ಲಿ ಬದ್ಧ ವೈರಿಗಳಂತೆ ಕಾದಾಡುತ್ತಿದ್ದ ಈ ಪಕ್ಷಗಳು ಹಿಂಬಾಗಿಲಿನ ಮೂಲಕ ಮಾತುಕತೆಯಲ್ಲಿ ತೊಡಗಿವೆ. ವಿಜಯ್ ಪಕ್ಷವನ್ನು ಅಧಿಕಾರದಿಂದ ಹೊರಗಿಡುವ ಮಾತುಕತೆ ನಡೆಸುತ್ತಿವೆ ಎಂದು ಮಾಧ್ಯಮ ವರದಿಗಳು ಹೇಳಿವೆ.

ಚುನಾವಣೆಯಲ್ಲಿ ಡಿಎಂಕೆ 59 ಸ್ಥಾನಗಳನ್ನು ಪಡೆದರೆ, ಎಐಎಡಿಎಂಕೆ 47 ಸ್ಥಾನಗಳನ್ನು ಗಳಿಸಿದೆ. ಬಹುಮತದ ಸಂಖ್ಯೆಯಾದ 118ಕ್ಕೆ 12 ಸ್ಥಾನದ ಕೊರತೆ ಎದುರಿಸುತ್ತಿವೆ. ತಮ್ಮ ಬೆಂಬಲಿಗ ಚಿಕ್ಕಪುಟ್ಟ ಪಕ್ಷಗಳ ಸಹಕಾರದೊಂದಿಗೆ ಅಧಿಕಾರ ಹಿಡಿವ ಇರಾದೆ ಹೊಂದಿವೆ ಎಂದು ಗೊತ್ತಾಗಿದೆ.

ಆದರೆ ಈ ಬಗ್ಗೆ ಯಾವುದೇ ನಾಯಕ ಅಧಿಕೃತವಾಗಿ ಮಾತನಾಡಿಲ್ಲ. ಮೂಲಗಳು ಮಾತ್ರ ಚರ್ಚೆ ನಡೆದಿದೆ ಎಂದು ಹೇಳಿವೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ಗುರುಮೂರ್ತಿ ಕಿಡಿ: ಮೈತ್ರಿ ವರದಿ ಬಗ್ಗೆ ಅಂಕಣಕಾರ ಎಸ್.ಗುರುಮೂರ್ತಿ ಕಿಡಿಕಾರಿದ್ದಾರೆ. 'ದೇವರು ಇದನ್ನು ತಡೆಯದಿದ್ದರೆ ಅದು ಅತ್ಯಂತ ಮೋಸದ, ಅವಕಾಶವಾದಿ ರಾಜಕೀಯವಾಗುತ್ತದೆ. ಇದು ಜನಾದೇಶದ ವಿರುದ್ಧದ ಹುಸಿ ಮೈತ್ರಿ ವಿಶ್ವಾಸಘಾತಕತನ ಆಗಲಿದೆ. ದೇವರೇ ಕಾಪಾಡು' ಎಂದಿದ್ದಾರೆ.

ಬೇಕಿದ್ರೆ ನನ್ನನ್ನು ವಜಾ ಮಾಡಿ



ಕೋಲ್ಕತಾ: ತಮ್ಮ ಸೋಲು ಅನ್ಯಾಯದಿಂದ ಆಗಿದೆ. ಹೀಗಾಗಿ ರಾಜೀನಾಮೆ ನೀಡಲ್ಲ ಎಂದಿದ್ದ ಟಿಎಂಸಿ ನಾಯಕಿ ಹಾಗೂ ಪ.ಬಂಗಾಳ ಸಿಎಂ ಮಮತಾ ಬ್ಯಾನರ್ಜಿ, 'ಅವರೇ ಬೇಕಿದ್ದರೆ ವಜಾ ಮಾಡಲಿ' ಎಂದು ಬುಧವಾರ ಸವಾಲು ಹಾಕಿದ್ದಾರೆ. ಟಿಎಂಸಿ ನೂತನ ಶಾಸಕರ ಸಭೆಯಲ್ಲಿ ಮಾತನಾಡಿದ ದೀದಿ, 'ಅವರು (ರಾಜ್ಯಪಾಲ) ಬಯಸಿದರೆ ರಾಷ್ಟ್ರಪತಿ ಆಳ್ವಿಕೆ ಹೇರಲಿ. ಅವರು ಬಯಸಿದರೆ ನನ್ನನ್ನು ವಜಾಗೊಳಿಸಲಿ. ಇದು ಕರಾಳ ದಿನವಾಗಿ ದಾಖಲಾಗಲಿ' ಎಂದು ಹೇಳಿದರು ಎಂದು ಮೂಲಗಳು ಹೇಳಿವೆ. ಆದರೆ ಮಮತಾ ಅವರ ಈ ಪಟ್ಟು ಕೇವಲ ಸಾಂಕೇತಿಕ ಪ್ರತಿಭಟನೆಯಾಗಿದೆ. ಅನ್ಯಾಯದ ವಿರುದ್ಧದ ದನಿಯಾಗಿದೆ ಎಂದು ಟಿಎಂಸಿ ಹೇಳಿದೆ.

ಸುಪ್ರೀಂಗೆ ದೀದಿ?: ಚುನಾವಣೆಯಲ್ಲಿ ಅಕ್ರಮವಾಗಿದೆ ಎಂದು ಆರೋಪಿಸಿ ಮಮತಾ ಸುಪ್ರೀಂಕೋರ್ಟ್‌ಗೆ ಹೋಗುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

12ಕ್ಕೆ ಅಸ್ಸಾಂ ಸಿಎಂ ಶಪಥ ಸಾಧ್ಯತೆ



ಗುವಾಹಟಿ: ಅಸ್ಸಾಂ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿರುವ ಕಾರಣ, ಪುನಃ ಸಿಎಂ ಆಗಿ ಹಿಮಂತ ಬಿಸ್ವ ಶರ್ಮಾ ಮೇ 12ಕ್ಕೆ ಪ್ರಮಾಣವಚನ ಸ್ವೀಕರಿಸುವ ನಿರೀಕ್ಷೆ ಇದೆ. ಹೊಸ ಸರ್ಕಾರ ರಚನೆಯಾಗಬೇಕಿರುವ ಕಾರಣ, 2021-26ರ ವರೆಗೆ ತಾವು ಅಲಂಕರಿಸಿದ್ದ ಸಿಎಂ ಹುದ್ದೆಗೆ ಶರ್ಮಾ ರಾಜೀನಾಮೆ ನೀಡಿದ್ದಾರೆ. 'ಪ್ರಧಾನಿ ನರೇಂದ್ರ ಮೋದಿ ಮೇ 11ರವರೆಗೆ ವ್ಯಸ್ತರಾಗಿದ್ದಾರೆ. ಹೀಗಾಗಿ 11ರ ನಂತರ ಪದಗ್ರಹಣ ನಡೆಯಲಿದೆ' ಎಂದು ಶರ್ಮಾ ಹೇಳಿದ್ದಾರೆ.

ಕೇರಳ ಸಿಎಂ ಆಯ್ಕೆಗೆ ಇಂದು ಸಭೆ

ತಿರುವನಂತಪುರ: ಕೇರಳದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ನಿರ್ಧರಿಸಲು ಪ್ರಕ್ರಿಯೆ ಆರಂಭವಾಗಿದ್ದು, ಗುರುವಾರ ಶಾಸಕಾಂಗ ಪಕ್ಷದ ಸಭೆ ನಡೆಯುವ ನಿರೀಕ್ಷೆ ಇದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್ ಮತ್ತು ಪಕ್ಷದ ಖಜಾಂಚಿ ಅಜಯ್ ಮಾಕನ್ ಅವರನ್ನು ವೀಕ್ಷಕರನ್ನಾಗಿ ನೇಮಿಸಿದೆ. ಇಬ್ಬರೂ ಗುರುವಾರ ಶಾಸಕರ ಸಭೆ ನಡೆಸಿ ಅಭಿಪ್ರಾಯ ಪಡೆಯಲಿದ್ದಾರೆ, ಆದರೆ ಅಂತಿಮ ನಿರ್ಧಾರವನ್ನು ಕೇಂದ್ರ ನಾಯಕತ್ವ ತೆಗೆದುಕೊಳ್ಳುತ್ತದೆ. ವಿ.ಡಿ. ಸತೀಶನ್, ರಮೇಶ್ ಚೆನ್ನಿತ್ತಲ ಮತ್ತು ಕೆ.ಸಿ. ವೇಣುಗೋಪಾಲ್ ಸಿಎಂ ಸ್ಥಾನದ ಆಕಾಂಕ್ಷಿಗಳು.

ಪ. ಬಂಗಾಳ ಫಲಿತಾಂಶ ಬೆನ್ನಲ್ಲೇ ಐಪ್ಯಾಕ್ ಜತೆ ಎಸ್‌ಪಿ ನಂಟು ಕಟ್

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಘೋಷಣೆ



ಲಖನೌ: ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದಲ್ಲಿ ಇಂಡಿಯಾ ಕೂಟದ ಪಕ್ಷಗಳಿಗೆ ಭಾರೀ ಪರಾಭವ ಉಂಟಾದ ಬೆನ್ನಲ್ಲೇ, ಚುನಾವಣಾ ರಣನೀತಿ ಸಂಸ್ಥೆ ಐ-ಪ್ಯಾಕ್ ಜೊತೆ ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷ ಸಂಬಂಧ ಕಡಿದುಕೊಂಡಿದೆ.

ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್ ಸ್ಥಾಪಿಸಿದ್ದ ಹಾಗೂ ಈಗ ವಿನೇಶ್ ಚಂದೇಲ್ ಉಸ್ತುವಾರಿಯಲ್ಲಿದ್ದ ಐ-ಪ್ಯಾಕ್, ಎಸ್‌ಪಿ ಜತೆ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣಾ ಸಲಹೆ ನೀಡುವ ಒಪ್ಪಂದ ಮಾಡಿಕೊಂಡಿತ್ತು. ಇದಕ್ಕೂ ಮುನ್ನ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಪರ ರಣನೀತಿ ಹೆಣೆದಿತ್ತು. ಆದರೆ ಅದರ ರಣತಂತ್ರ ವಿಫಲವಾಗಿದೆ. ಆದ ಕಾರಣ ಯಾದವ್ ಈ ನಿರ್ಧಾರ ಘೋಷಿಸಿದ್ದಾರೆ. ಮುಂದಿನ ವರ್ಷ ನಡೆಯಲಿರುವ ಉತ್ತರ ಪ್ರದೇಶ ಚುನಾವಣೆಯಲ್ಲಿ 'ಶೋಟೈಂ' ಎಂಬ ಸಲಹಾ ಸಂಸ್ಥೆ ಜತೆ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ.

6ರಲ್ಲೊಬ್ಬ ಬಿಜೆಪಿ ಸಂಸದ ಮತಚೋರ: ರಾಗಾ

ಮತ್ತೆ ಮತಗಳ್ಳತನ ಆರೋಪ | ಈಗ ಚುನಾವಣೆ ಆದ್ರೆ ಕಮಲಕ್ಕೆ 140 ಸೀಟೂ ಬರದು: ವಾಗ್ದಾಳಿ



ನವದೆಹಲಿ: ಪಂಚರಾಜ್ಯ ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದಂತೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಬಿಜೆಪಿ ಮೇಲೆ ಮತ್ತೆ ಮತಚೋರಿ ಆರೋಪ ಮಾಡಿದ್ದಾರೆ.

'ಲೋಕಸಭೆಯಲ್ಲಿರುವ ಬಿಜೆಪಿ ಸಂಸದರ ಪೈಕಿ 6 ಜನರಲ್ಲಿ ಒಬ್ಬರು ವೋಟ್ ಚೋರಿ ಮಾಡಿಯೇ ಅಧಿಕಾರಕ್ಕೆ ಬಂದಿರುವುದು' ಎಂದಿರುವ ಅವರು, ಅಂಥವರಿಗೆ, 'ನುಸುಳುಕೋರರು' ಎಂಬ ಹಣೆಪಟ್ಟಿ ಕೊಡಬಹುದೇ ಎಂದು ಪ್ರಶ್ನಿಸಿದ್ದಾರೆ. ಅಲ್ಲದೆ, 'ಈಗ ಚುನಾವಣೆ ಆದ್ರೆ ಕಮಲಕ್ಕೆ 140 ಸೀಟೂ ಬರುವುದಿಲ್ಲ' ಎಂದು ಸವಾಲು ಹಾಕಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಹುಲ್, 'ಮತಚೋರಿಯ ಮೂಲಕ ಕೆಲವೊಮ್ಮೆ ಒಂದೆರಡು ಸೀಟುಗಳನ್ನು ಕದ್ದರೆ, ಇನ್ನು ಕೆಲವೊಮ್ಮೆ ಇಡೀ ಸರ್ಕಾರವನ್ನೇ ಕದಿಯಲಾಗುತ್ತದೆ. ಸದ್ಯ ಲೋಕಸಭೆಯಲ್ಲಿರುವ 240 ಬಿಜೆಪಿ ಸಂಸದರಲ್ಲಿ, ಆರರಲ್ಲೊಬ್ಬರು ಇದೇ ವಿಧಾನದಿಂದ ಅಧಿಕಾರಕ್ಕೇರಿದ್ದಾರೆ' ಎಂದಿದ್ದಾರೆ.

'ಬಿಜೆಪಿಯ ಭಾಷೆಯಲ್ಲಿ ಅವರನ್ನು ನುಸುಳುಕೋರರು ಎಂದು ಕರೆಯಬಹುದೇ? ಹರ್ಯಾಣದಲ್ಲಂತೂ ನುಸುಳುಕೋರರದ್ದೇ ಸರ್ಕಾರವಿದೆ. (ಚುನಾವಣಾ ಆಯೋಗದಂತಹ) ಕೆಲ ಸಂಸ್ಥೆಗಳನ್ನು ಇವರು ನಿಯಂತ್ರಣದಲ್ಲಿ ಇಟ್ಟುಕೊಂಡು ಮತಪಟ್ಟಿ ಹಾಗೂ ಚುನಾವಣಾ ಪ್ರಕ್ರಿಯೆಯನ್ನು ತಿರುಚುತ್ತಾರೆ. ಇದನ್ನೂ ರಿಮೋಟ್ ಕಂಟ್ರೋಲ್ ಮೂಲಕ ನಿಯಂತ್ರಣ ಮಾಡಲಾಗುತ್ತದೆ' ಎಂದು ರಾಹುಲ್ ಆರೋಪಿಸಿದ್ದಾರೆ.

ಈಗ 140 ಸೀಟೂ ಬರದು: 'ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿನ ಗೆಲುವು ಜನಾದೇಶದ ಕಳುವಿನಿಂದ ಸಾಧ್ಯವಾಯಿತು' ಎನ್ನುತ್ತಿರುವ ರಾಹುಲ್, 'ಈಗೊಮ್ಮೆ ಲೋಕಸಭೆ ಚುನಾವಣೆ ನ್ಯಾಯಯುತವಾಗಿ ನಡೆದರೆ ಬಿಜೆಪಿ 140 ಸೀಟುಗಳನ್ನೂ ಗೆಲ್ಲುವುದಿಲ್ಲ' ಎಂದಿದ್ದಾರೆ.

ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಭಾರೀ ಬಹುಮತದಿಂದ ಅಧಿಕಾರಕ್ಕೇರುತ್ತಿರುವ ಹಿನ್ನೆಲೆಯಲ್ಲಿ ಅವರು ಹೀಗೆ ಹೇಳಿದ್ದಾರೆ.

ಪಂಜಾಬ್: ಸೇನಾ ಕಚೇರಿಗಳ ಬಳಿ ಸ್ಫೋಟ

ಜಲಂಧರ್‌ನ ಬಿಎಸ್‌ಎಫ್ ಕಚೇರಿ, ಅಮೃತಸರದ ಕಂಟೋನ್ಮೆಂಟ್ ಗುರಿ



ಚಂಡೀಗಢ: ಪಂಜಾಬ್‌ನ ಜಲಂಧರ್ ಮತ್ತು ಅಮೃತಸರದಲ್ಲಿರುವ ಭದ್ರತಾ ಸಂಸ್ಥೆಗಳ ಬಳಿ ಮಂಗಳವಾರ ರಾತ್ರಿ 2 ಪ್ರತ್ಯೇಕ ಸ್ಫೋಟಗಳು ಸಂಭವಿಸಿವೆ. ಈ ದಾಳಿ ಹೊಣೆಯನ್ನು ಕೆಎಲ್‌ಎ ಎಂಬ ಖಲಿಸ್ತಾನಿ ಸಂಘಟನೆ ಹೊತ್ತಿದೆ.


ರಾತ್ರಿ 8ರ ಸುಮಾರಿಗೆ ಜಲಂಧರ್‌ನಲ್ಲಿರುವ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಪ್ರಧಾನ ಕಚೇರಿ ಎದುರು ಹಾಗೂ 11ರ ಹೊತ್ತಿಗೆ ಅಮೃತಸರದ ಸೇನಾ ಕಂಟೋನ್ಮೆಂಟ್‌ನ ಬಳಿ ಸ್ಫೋಟಗಳಾಗಿವೆ. ಎರಡೂ ಘಟನೆಗಳಲ್ಲಿ ಯಾವುದೇ ಸಾವು ಸಂಭವಿಸಿಲ್ಲ. ಕಿಡಿಗೇಡಿಗಳು ಕೈಯಿಂದ ಸ್ಫೋಟಕ ಎಸೆದು ಪರಾರಿಯಾಗಿದ್ದಾರೆಂದು ತನಿಖೆಯಿಂದ ತಿಳಿದುಬಂದಿದೆ.

ಖಲಿಸ್ತಾನಿ ಕೈವಾಡ: ಸ್ಫೋಟಗಳ ಹೊಣೆಯನ್ನು ಖಲಿಸ್ತಾನಿ ಲಿಬರೇಷನ್ ಆರ್ಮಿ (ಕೆಎಲ್‌ಎ) ಹೊತ್ತುಕೊಂಡಿದ್ದು, ಪೊಲೀಸ್ ಎನ್‌ಕೌಂಟರ್ ನಿಂದಾಗಿ ಮೃತಪಟ್ಟ ರಂಜಿತ್ ಸಿಂಗ್ ಸಾವಿಗೆ ಪ್ರತೀಕಾರವಿದು ಎಂದು ತಿಳಿಸಿದೆ.

ವಿಪಕ್ಷ ವಾಗ್ದಾಳಿ: ದಾಳಿಯನ್ನು ವಿಪಕ್ಷಗಳು ಖಂಡಿಸಿದ್ದು, 'ಇದು ಗುಪ್ತಚರ ವೈಫಲ್ಯ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದರ ಸಂಕೇತ' ಎಂದು ಕಿಡಿ ಕಾರಿವೆ.

ಕೊರೋನಾ ರೀತಿ ಹಂಟು ವೈರಸ್ ಪತ್ತೆ: 3 ಬಲಿ

ಅರ್ಜೆಂಟೀನಾದಿಂದ ಹೊರಟಿದ್ದ ಹಡಗಿನಲ್ಲಿ ಸೋಂಕು | 8 ಜನರಲ್ಲಿ ದೃಢ



ಜಿನೇವಾ: ಇಡೀ ಜಗತ್ತು ಕೊರೋನಾ ನೀಡಿದ ಆಘಾತದಿಂದ ಚೇತರಿಸಿಕೊಳ್ಳುತ್ತಿರುವ ಹೊತ್ತಿನಲ್ಲೇ, ಅರ್ಜೆಂಟೀನಾದಿಂದ ಪಶ್ಚಿಮ ಆಫ್ರಿಕಾದತ್ತ ಹೊರಟಿರುವ ಹಡಗೊಂದರಲ್ಲಿ 'ಹಂಟು ವೈರಸ್' ಎಂಬ ಇದೇ ರೀತಿಯ ವೈರಸ್ ಒಂದು ಪತ್ತೆಯಾಗಿದೆ. ಇದು ಈಗಾಗಲೇ 8 ಜನರಲ್ಲಿ ದೃಢಪಟ್ಟಿದ್ದು, ಮೂವರು ಮೃತಪಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾರೀ ಕಳವಳ ವ್ಯಕ್ತಪಡಿಸಿರುವ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹಡಗಿನ ಸಂಪರ್ಕದಲ್ಲಿದ್ದವರ ಮೇಲ್ವಿಚಾರಣೆ ನಡೆಸುತ್ತಿದೆ.

ಏನಿದು ವೈರಸ್? ಹೇಗೆ ಹರಡುತ್ತದೆ?: ಹಂಟು ವೈರಸ್ ಸಾಮಾನ್ಯವಾಗಿ ಇಲಿ, ಹೆಗ್ಗಣ ಮತ್ತು ಇತರ ದಂಶಕಗಳಲ್ಲಿ ಕಂಡುಬರುತ್ತದೆ. ಮನುಷ್ಯರಿಗೆ ಈ ಸೋಂಕು ತಗುಲಿದರೆ ಜ್ವರ, ತಲೆನೋವು, ಮೈಕೈ ನೋವು, ಜೀರ್ಣಕೋಶದ ಸಮಸ್ಯೆ, ನಂತರ ತೀವ್ರ ಉಸಿರಾಟದ ಸಮಸ್ಯೆ ಉಂಟುಮಾಡುತ್ತದೆ. ಅಲ್ಲದೆ, ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತಿದ್ದು, ಸಾವನ್ನೂ ಉಂಟುಮಾಡಬಹುದು.



ಏ.22ರಂದು ಪಾಕಿಸ್ತಾನದ ಲಷ್ಕರ್ ಭಾಗವಾದ ಟಿಆರ್‌ಎಫ್‌ನ ಉಗ್ರರು ಪಹಲ್ಗಾಂನಲ್ಲಿ 26 ಅಮಾಯಕರನ್ನು ಹತ್ಯೆಗೈದದ್ದಕ್ಕೆ ಪ್ರತೀಕಾರವಾಗಿ ಭಾರತ ಮೇ 6ರ ನಡುರಾತ್ರಿ ಹಾಗೂ ಮೇ 7ರ ನಸುಕಿನಲ್ಲಿ ನಡೆಸಿದ ಆಪರೇಷನ್ ಸಿಂದೂರಕ್ಕೆ 1 ವರ್ಷ ಪೂರ್ಣವಾಗಿದೆ. ಇದು ಭಾರತದ ಸೇನಾ ಶಕ್ತಿಯನ್ನು ವಿಶ್ವದೆದುರು ಪ್ರದರ್ಶಿಸಿದ ಹೆಮ್ಮೆಯ ದಿನವೂ ಆಗಿದೆ.

ಪಾಕಿಗಳಿಂದ ಪಹಲ್ಗಾಂ ದಾಳಿಯ ಕ್ರೂರ ಕೃತ್ಯ

ಏ.22ರ ಮಧ್ಯಾಹ್ನ ಅನಂತನಾಗ್ ಜಿಲ್ಲೆಯ ಬೈಸರನ್ ಕಣಿವೆಯಲ್ಲಿ ಪ್ರಕೃತಿಯ ಮಡಿಲಲ್ಲಿ ಪರಿವಾರದೊಂದಿಗೆ ಆನಂದಿಸುತ್ತಿದ್ದ ಪ್ರವಾಸಿಗರತ್ತ ನುಗ್ಗಿದ 7 ಉಗ್ರರು, ಗಂಡಸರನ್ನೇ ಗುರಿಯಾಗಿಸಿಕೊಂಡು ಗುಂಡಿಟ್ಟು ಕೊಂದಿದ್ದರು. ಉಗ್ರದಾಳಿಗೆ ಮೃತಪಟ್ಟವರಲ್ಲಿ ಇಬ್ಬರು ಕನ್ನಡಿಗರಿದ್ದರು. ಇದಕ್ಕೂ ಮೊದಲು ಅವರೆಲ್ಲರ ಧರ್ಮ ಕೇಳಿ, ಬಳಿಕ ಕಲ್ಮಾ ಹೇಳುವಂತೆಯೂ ಒತ್ತಾಯಿಸಿದ್ದರು.



ಮೊದಲು ಪಾಕ್ ವಿರುದ್ಧ ರಾಜತಾಂತ್ರಿಕ ಸೇಡು

ಪಾಕ್ ಉಗ್ರರು ನಡೆಸಿದ ಪಹಲ್ಗಾಂ ದಾಳಿಗೆ ಪ್ರತಿಯಾಗಿ ಮೊದಲು ಭಾರತ ರಾಜತಾಂತ್ರಿಕ ಸೇಡಿನ ಕ್ರಮ ಆರಂಭಿಸಿತ್ತು. ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸಿದ ಭಾರತ, ಉಭಯದೇಶಗಳ ನಡುವಿನ ಅಟ್ಟಾರಿ-ವಾಘಾ ಗಡಿ ಮುಚ್ಚುವಿಕೆಯಂತಹ ಕಠಿಣ ನಿರ್ಧಾರಗಳನ್ನು ತೆಗೆದುಕೊಂಡಿತ್ತು. ಆದರೆ ಈ ಕ್ರಮಗಳು ಸಾಲದು ಎಂಬ ಕೂಗು ಭಾರತದಲ್ಲಿ ಎದ್ದಿತ್ತು. ಆಗ ಅದಕ್ಕೆ ಪ್ರತಿಯಾಗಿ ಭಾರತ ನಡೆಸಿದ್ದೇ, ಕಂಡು ಕೇಳರಿಯದಂಥ ಅಚ್ಚರಿಯ ಕಾರ್ಯಾಚರಣೆ 'ಆಪರೇಷನ್ ಸಿಂದೂರ'.



ಮೇ 6ರ ರಾತ್ರಿ ಭಯಾನಕ ದಾಳಿ

ಶಸ್ತ್ರಕ್ಕೆ ಶಸ್ತ್ರದ ಮೂಲಕವೇ ಪಾಠ ಕಲಿಸಬೇಕು ಎಂದು ಕಳೆದ ವರ್ಷ ಮೇ 6ರ ಮಧ್ಯರಾತ್ರಿ ತನ್ನ ಬತ್ತಳಿಕೆಯಲ್ಲಿದ್ದ ಬಲಿಷ್ಠ ಆಯುಧಗಳನ್ನು ಭಾರತೀಯ ವಾಯುಪಡೆ ಪಾಕಿಸ್ತಾನದತ್ತ ತಿರುಗಿಸಿತು. ಕೇವಲ 25 ನಿಮಿಷದ ಕಾರ್ಯಾಚರಣೆಯಲ್ಲಿ ಮುರೀದ್‌ಕೆ, ಬಹಾವಲ್ಪುರ, ಸಿಯಾಲ್‌ಕೋಟ್, ಮುಜಫ್ಫರಾಬಾದ್, ಕೋಟ್ಲಿ, ಕೋಟ್ಲಿಯಲ್ಲಿದ್ದ ಪಾಕ್ ಉಗ್ರರ 9 ನೆಲೆಗಳನ್ನು ಧ್ವಂಸ ಮಾಡಿತು. ಈ ದಾಳಿಗೆ ಪಾಕಿಸ್ತಾನ ಬೆಚ್ಚಿಬಿತ್ತು.

ಪಾಕ್‌ನ ಪ್ರತಿದಾಳಿಗೂ ಭಾರತದಿಂದ ತಕ್ಕ ಉತ್ತರ



ಮೇ 6ರ ನಂತರ ಪಾಕಿಸ್ತಾನ ಭಾರತಕ್ಕೆ ತಿರುಗೇಟು ನೀಡಲು ವಿಫಲ ಯತ್ನ ಆರಂಭಿಸಿತ್ತು. ಆದರೆ ಪಾಕ್ ಬಿಟ್ಟ ಡ್ರೋನ್‌ಗಳನ್ನು ಭಾರತದ ವಾಯುರಕ್ಷಣಾ ವ್ಯವಸ್ಥೆ ವಿಫಲಗೊಳಿಸಿತ್ತು. ಭಾರತದ ಸುದರ್ಶನ ಚಕ್ರದಂತಹ (ಎಸ್-400) ದೈತ್ಯ ಕ್ಷಿಪಣಿ ನಿರೋಧಕಗಳೆದುರು ಅದರ ಆಟ ನಡೆದಿರಲಿಲ್ಲ. ಇದರ ನಡುವೆ ಭಾರತ ಮತ್ತಷ್ಟು ದಾಳಿ ತೀಕ್ಷ್ಣಗೊಳಿಸಿ 7ರಿಂದ 4 ದಿನಗಳ ಕಾಲ ಪಾಕ್ ವಾಯುನೆಲೆಗಳ ಮೇಲೆ ದಾಳಿ ನಡೆಸಿತ್ತು. ಆ ಕಾರ್ಯಾಚರಣೆಯಲ್ಲಿ ಕೆಲವು ಪಾಕ್ ವಾಯುನೆಲೆ ಕೂಡ ಧ್ವಂಸವಾಗಿದ್ದವು. ಬಳಿಕ ಪಾಕ್‌ನ ಡಿಜಿಎಂಒ ಕೋರಿಕೆ ಮೇರೆಗೆ ಮೇ 10ಕ್ಕೆ ಕದನವಿರಾಮ ಸಾರಲಾಯ್ತು.


ಸಿಂದೂರದಿಂದ ಇನ್ನೂ ಚೇತರಿಸಿಕೊಳ್ಳದ ಪಾಕ್



ಅಂದು ಭಾರತ ನೀಡಿದ್ದ ಏಟಿಗೆ ಇನ್ನೂ ಮುಲಾಮು ಸವರಿಕೊಳ್ಳುತ್ತಿರುವ ಪಾಕಿಸ್ತಾನ, ಕೆಲ ವಾಯುನೆಲೆಗಳ ಆಸೆಯನ್ನೇ ಕೈಬಿಟ್ಟಿದೆ. ಆದಾಗ್ಯೂ ಕೆಲವು ಉಗ್ರ ನೆಲೆಗಳ ಮರುನಿರ್ಮಾಣದಲ್ಲಿ ತೊಡಗಿದೆ ಎಂಬ ಸುದ್ದಿಯಿದೆ.

ಅಚ್ಚರಿ ತಾಂತ್ರಿಕ ದೋಷಕ್ಕೆ ತುತ್ತಾಗಿದ್ದ ಭಾರತದ ಹಡಗು

ಅರಬ್ಬಿ ಸಮುದ್ರದಲ್ಲಿ ಸಿಲುಕಿದ್ದ ಭಾರತ ಸಿಬ್ಬಂದಿಗೆ ಪಾಕ್ ನೆರವು




ಇಸ್ಲಾಮಾಬಾದ್: ತಾಂತ್ರಿಕ ದೋಷದಿಂದಾಗಿ ಅರಬ್ಬಿ ಸಮುದ್ರದಲ್ಲಿ ಸಿಲುಕಿದ್ದ ಭಾರತದ ಹಡಗಿನಲ್ಲಿದ್ದ ಸಿಬ್ಬಂದಿಗೆ ಪಾಕಿಸ್ತಾನ ನೌಕಾಪಡೆಯು ಮಾನವೀಯ ನೆಲೆಯಲ್ಲಿ ಸಹಾಯ ಹಸ್ತ ಚಾಚಿರುವ ಘಟನೆ ನಡೆದಿದೆ.

ಒಮಾನ್‌ನಿಂದ ಭಾರತಕ್ಕೆ ಬರುತ್ತಿದ್ದ ಎಂವಿ ಗೌತಮ್ ಹಡಗು ಅರಬ್ಬಿ ಸಮುದ್ರದಲ್ಲಿ ತೊಂದರೆಗೆ ಒಳಗಾಗಿತ್ತು. ಈ ವೇಳೆ ಹಡಗಿನಲ್ಲಿದ್ದ 6 ಭಾರತೀಯರು, ಓರ್ವ ಇಂಡೋನೇಷ್ಯಾ ಸಿಬ್ಬಂದಿ ಮಾರ್ಗಮಧ್ಯದಲ್ಲಿಯೇ ಸಿಲುಕಿಕೊಂಡಿದ್ದರು. ಆಗ ಮುಂಬೈನಲ್ಲಿರುವ ಸಾಗರ ರಕ್ಷಣಾ ಮತ್ತು ಸಮನ್ವಯ ಕೇಂದ್ರವು ಪಾಕಿಸ್ತಾನಿ ಅಧಿಕಾರಿಗಳನ್ನು ಸಂಪರ್ಕಿಸಿ ಸಹಾಯ ಕೋರಿತ್ತು. ಹೀಗಾಗಿ ಸಿಬ್ಬಂದಿಗೆ ಪಾಕಿಸ್ತಾನ ಸಾಗರ ಭದ್ರತಾ ಸಂಸ್ಥೆ (ಪಿಎಂಎಸ್‌ಎ) ನೆರವು ನೀಡಿದೆ.

ಮಾರ್ಗಮಧ್ಯೆದಲ್ಲಿಯೇ ಸಿಲುಕಿದ್ದ ಸಿಬ್ಬಂದಿಗೆ ಆಹಾರ, ವೈದ್ಯಕೀಯ ನೆರವು ಮತ್ತು ತಾಂತ್ರಿಕ ನೆರವು ಸೇರಿದಂತೆ ತುರ್ತು ಸಹಾಯವನ್ನು ಒದಗಿಸಿತ್ತು. ಅಲ್ಲದೇ ಹಡಗಿನ ತಾಂತ್ರಿಕ ದೋಷವನ್ನು ಸರಿಪಡಿಸಲು ಕೂಡ ಯತ್ನಿಸಿತ್ತು ಎಂದು ಪತ್ರಿಕೆಯೊಂದು ವರದಿ ಮಾಡಿದೆ.

ಗೌರವ ಕೇಂದ್ರ ಸಚಿವ ಸಂಪುಟ ಅನುಮೋದನೆ

ವಂದೇ ಅಪಮಾನಕ್ಕೆ ಜೈಲು: ಕಾನೂನು ಜಾರಿಗೆ ಸಮ್ಮತಿ



ನವದೆಹಲಿ: ರಾಷ್ಟ್ರೀಯ ಗೀತೆ 'ವಂದೇ ಮಾತರಂ' ಅನ್ನು ಅಪಮಾನಿಸಿದರೆ ಅಥವಾ ಹಾಡಿಗೆ ಅಡ್ಡಿ ಮಾಡಿದರೆ ಜೈಲುಶಿಕ್ಷೆ ವಿಧಿಸಬಹುದಾದ ಮಹತ್ವದ ಕಾನೂನು ಜಾರಿಗೆ ಕೇಂದ್ರ ಸರ್ಕಾರ ಮುಂದಾಗಿದೆ.

ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆ, 1971ಕ್ಕೆ ತಿದ್ದುಪಡಿ ಮಾಡಲು ಅನುಮೋದನೆ ನೀಡಲಾಗಿದೆ. ಈ ತಿದ್ದುಪಡಿಯಿಂದ ರಾಷ್ಟ್ರಗೀತೆ 'ಜನ ಗಣ ಮನ'ಕ್ಕೆ ಇರುವಂತಹ ಸಮಾನ ಸ್ಥಾನಮಾನ 'ವಂದೇ ಮಾತರಂ'ಗೂ ದೊರೆಯಲಿದೆ. ಈಗಿನ ಕಾನೂನಿನ ಪ್ರಕಾರ ರಾಷ್ಟ್ರಗೀತೆಗೆ ಅಡ್ಡಿಪಡಿಸಿದರೆ ಅಥವಾ ಅಪಮಾನಿಸಿದರೆ ಗರಿಷ್ಠ 3 ವರ್ಷ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡೂ ವಿಧಿಸಬಹುದಾಗಿದೆ. ವಂದೇ ಮಾತರಂ ಗೀತೆಯನ್ನು ರಚಿಸಿದವರು ಬಂಗಾಳಿ ಕವಿ ಬಂಕಿಂ ಚಂದ್ರ ಚಟ್ಟೋಪಾಧ್ಯಾಯ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮೊದಲ ಬಾರಿ ಗೆದ್ದ ಬೆನ್ನಲ್ಲೇ ಕೇಂದ್ರ ಸರ್ಕಾರ ಈ ಮಹತ್ವದ ನಿರ್ಧಾರ ಕೈಗೊಂಡಿರುವುದು ವಿಶೇಷ.

ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಹೈದ್ರಾಬಾದ್	11	07	04	00	+0.737	14
ಪಂಜಾಬ್	10	06	03	01	+0.571	13
ಆರ್‌ಸಿಬಿ	09	06	03	00	+1.420	12
ರಾಜಸ್ಥಾನ	10	06	04	00	+0.510	12
ಗುಜರಾತ್	10	06	04	00	-0.147	12
ಚೆನ್ನೈ	10	05	05	00	+0.151	10
ಡೆಲ್ಲಿ	10	04	06	00	-0.949	08
ಕೋಲ್ಕತಾ	09	03	05	01	-0.539	07
ಮುಂಬೈ	10	03	07	00	-0.649	06
ಲಖನೌ	09	02	07	00	-1.076	04

5 ವರ್ಷದಲ್ಲಿ 4 ಫೈನಲ್‌ಗೆ ಅಹಮ್ಮದಾಬಾದ್ ಆತಿಥ್ಯ!

2022, 2023, 2025ರ ಬಳಿಕ ಈ ಬಾರಿ ಐಪಿಎಲ್ ಫೈನಲ್ ಕೂಡಾ ಮೋದಿ ಕ್ರೀಡಾಂಗಣದಲ್ಲೇ ಆಯೋಜನೆಗೆ ಬಿಸಿಸಿಐ ನಿರ್ಧಾರ

2022ರ ಬಳಿಕ 2 ಐಸಿಸಿ ವಿಶ್ವಕಪ್ ಫೈನಲ್‌ಗೂ ಆತಿಥ್ಯ | ಚಿನ್ನಸ್ವಾಮಿಯಿಂದ ಸ್ಥಳಾಂತರಕ್ಕೆ ಬಿಸಿಸಿಐ ಕಾರಣ ಹೇಳಿಲ್ಲ: ಕೆಎಸ್‌ಸಿಎ

ನವದೆಹಲಿ: 2026ರ ಐಪಿಎಲ್ ಫೈನಲ್ ಪಂದ್ಯ ನಿಯಮದಂತೆ ಬೆಂಗಳೂರಿನಲ್ಲಿ ನಡೆಯಬೇಕಿದ್ದರೂ, ಆ ಪಂದ್ಯ ಅಹಮದಾಬಾದ್‌ಗೆ ಸ್ಥಳಾಂತರಗೊಳ್ಳಬಹುದು ಎಂಬುದನ್ನು ಕ್ರಿಕೆಟ್ ಅಭಿಮಾನಿಗಳು ಈಗಾಗಲೇ ಊಹಿಸಿದ್ದರು. ಅದರಂತೆ ಬುಧವಾರ ಅಧಿಕೃತ ಪ್ರಕಟನೆ ನೀಡಿರುವ ಬಿಸಿಸಿಐ, ಫೈನಲ್ ಪಂದ್ಯ ಮೇ 31ಕ್ಕೆ ಅಹಮದಾಬಾದ್‌ನಲ್ಲಿ ನಡೆಯಲಿದೆ ಎಂದು ಘೋಷಿಸಿದೆ.

ಶಾಸಕರಿಗೆ ಉಚಿತ ಟಿಕೆಟ್ ನೀಡುವ ಬೇಡಿಕೆಗೆ ಅಸಮ್ಮತಿ ಸೂಚಿಸಿ ಬಿಸಿಸಿಐ ಈ ನಿರ್ಧಾರಕ್ಕೆ ಗೊಂಡಿದೆ ಎಂದು ಹೇಳಲಾಗುತ್ತಿದ್ದರೂ, ಆಸನ ಸಾಮರ್ಥ್ಯ ಹೆಚ್ಚಿರುವ ಕಾರಣಕ್ಕೆ ಅಹಮದಾಬಾದ್‌ನಲ್ಲಿ ಪಂದ್ಯ ನಡೆಸಲಾಗುತ್ತಿದೆ ಎಂಬುದನ್ನು ಬಿಸಿಸಿಐ ಮೂಲಗಳೇ ತಿಳಿಸಿರುವುದಾಗಿ ವರದಿಯಾಗಿದೆ. ಅಂದಹಾಗೆ, 2022ರಿಂದ 5 ಐಪಿಎಲ್‌ಗಳ ಪೈಕಿ 4ರ ಫೈನಲ್ ಪಂದ್ಯದ ಆತಿಥ್ಯ ಭಾಗ್ಯ ಅಹಮದಾಬಾದ್ ಕ್ರೀಡಾಂಗಣಕ್ಕೆ ಲಭಿಸಿದೆ.

ಸ್ಥಳಾಂತರಕ್ಕೆ ಹಲವು ಕಾರಣ: 2021ರಲ್ಲಿ ಸಿಎಸ್‌ಕೆ ತಂಡ ಚಾಂಪಿಯನ್ ಆಗಿದ್ದರಿಂದ 2022ರ ಫೈನಲ್ ಚೆನ್ನೈನಲ್ಲಿ ನಡೆಯಬೇಕಿತ್ತು. ಆದರೆ ಕೋವಿಡ್ ನಡುವೆ ಲಾಜಿಸ್ಟಿಕ್ ಹಾಗೂ ಆಸನ ಸಾಮರ್ಥ್ಯದ ಕಾರಣ ನೀಡಿ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಲಾಗಿತ್ತು. ಆ ವರ್ಷ ಗುಜರಾತ್ ಚಾಂಪಿಯನ್ ಆಗಿದ್ದರಿಂದ 2023ರ ಫೈನಲ್ ಅಹಮದಾಬಾದ್‌ನಲ್ಲೇ ನಡೆಯಿತು. 2023ರಲ್ಲಿ ಸಿಎಸ್‌ಕೆ ಟ್ರೋಫಿ ಗೆದ್ದು, 2024ರ ಫೈನಲ್ ಆತಿಥ್ಯ ಚೆನ್ನೈಗೆ ಲಭಿಸಿತು ಮತ್ತು ಅಲ್ಲೇ ಪಂದ್ಯ ನಡೆಯಿತು. 2024ರಲ್ಲಿ ಕೋಲ್ಕತಾ ಚಾಂಪಿಯನ್ ಆಯಿತು. ಹೀಗಾಗಿ 2025ರ ಫೈನಲ್ ಕೋಲ್ಕತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಸಬೇಕಿತ್ತು. ಆದರೆ ಟೂರ್ನಿಯ ಕೊನೆ ವಾರ ಕೋಲ್ಕತಾದಲ್ಲಿ ಮಳೆ ಸಾಧ್ಯತೆಯಿದೆ ಎಂಬ ಕಾರಣ ನೀಡಿ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಲಾಯಿತು. ಕಳೆದ ವರ್ಷ ಆರ್‌ಸಿಬಿ ಕಪ್ ಗೆದ್ದಿದ್ದರಿಂದ ಈ ಬಾರಿ ಫೈನಲ್ ಆತಿಥ್ಯ ಬೆಂಗಳೂರಿಗೆ ಸಿಗಬೇಕಿತ್ತು.



ಮಹತ್ವದ 6 ಟೂರ್ನಿಗಳ ಫೈನಲ್‌ನ ಆತಿಥ್ಯ ಭಾಗ್ಯ

ಕಳೆದ 5 ವರ್ಷಗಳಲ್ಲಿ ಅಹಮದಾಬಾದ್‌ಗೆ ಒಟ್ಟು 6 ಪ್ರಮುಖ ಟೂರ್ನಿಗಳ ಫೈನಲ್ ಪಂದ್ಯದ ಆತಿಥ್ಯ ಹಕ್ಕು ಲಭಿಸಿದೆ. 4 ಐಪಿಎಲ್ ಫೈನಲ್ ಹೊರತಾಗಿ 2023ರ ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ಐಸಿಸಿ ಏಕದಿನ ವಿಶ್ವಕಪ್ ಫೈನಲ್, 2026ರ ಭಾರತ ಹಾಗೂ ನ್ಯೂಜಿಲೆಂಡ್ ನಡುವಿನ ಟಿ20 ವಿಶ್ವಕಪ್ ಫೈನಲ್ ಪಂದ್ಯ ಕೂಡಾ ಮೋದಿ ಕ್ರೀಡಾಂಗಣದಲ್ಲೇ ನಡೆದಿದೆ.

ಫೈನಲ್‌ಗೆ ಸಿದ್ಧರಾಗಿದ್ರೂ ಪಂದ್ಯ ಬೇರೆಡೆಗೆ ಸ್ಥಳಾಂತರ: ಕೆಎಸ್‌ಸಿಎ

'ಬಿಸಿಸಿಐ ಜೊತೆ ವೆಂಕಟೇಶ್ ಸಂಪರ್ಕದಲ್ಲಿದ್ದರು'



ಬೆಂಗಳೂರು: ಐಪಿಎಲ್ ಪ್ಲೇ-ಆಫ್ ಹಾಗೂ ಫೈನಲ್ ಪಂದ್ಯಕ್ಕೆ ಆತಿಥ್ಯ ವಹಿಸಲು ಚಿನ್ನಸ್ವಾಮಿ ಕ್ರೀಡಾಂಗಣ ಸಿದ್ಧವಾಗಿದ್ದರೂ ಪಂದ್ಯಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಅಸಮಾಧಾನ ವ್ಯಕ್ತಪಡಿಸಿದೆ.

ಈ ಬಗ್ಗೆ ಅಧಿಕೃತ ಪ್ರಕಟನೆ ನೀಡಿರುವ ಕೆಎಸ್‌ಸಿಎ ಮಾಧ್ಯಮ ವಕ್ತಾರ ವಿನಯ್ ಮೃತ್ಯುಂಜಯ, 'ಪಂದ್ಯಗಳನ್ನು ಬೇರೆಡೆಗೆ ಸ್ಥಳಾಂತರಿಸಿದ್ದರಿಂದ ನಿರಾಸೆ ಉಂಟಾಗಿದೆ. ಪಂದ್ಯದ ಆತಿಥ್ಯ ವಿಚಾರದಲ್ಲಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಬಿಸಿಸಿಐ ಜೊತೆ ಸಂಪರ್ಕದಲ್ಲಿದ್ದರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ಆಯೋಜಿಸಲು ಕೆಎಸ್‌ಸಿಎ ಸಿದ್ಧತೆ, ಆಸಕ್ತಿ ಬಗ್ಗೆಯೂ ಬಿಸಿಸಿಐಗೆ ಮಾಹಿತಿ ನೀಡಿದ್ದರು. ಇದರ ಹೊರತಾಗಿಯೂ ಪಂದ್ಯವನ್ನು ಸ್ಥಳಾಂತರಿಸಲಾಗಿದೆ. ಆದರೆ ಸ್ಥಳಾಂತರಗೊಳಿಸಲು ಕಾರಣ ಏನು ಎಂಬುದನ್ನು ಬಿಸಿಸಿಐ ನಮಗೆ ಔಪಚಾರಿಕವಾಗಿ ತಿಳಿಸಿಲ್ಲ. ಆದರೂ ಬಿಸಿಸಿಐ ನಿರ್ಧಾರವನ್ನು ನಾವು ಗೌರವಿಸುತ್ತೇವೆ' ಎಂದಿದ್ದಾರೆ.

ಸುದ್ದಿ ಸಿಂಚನ

ಭಾರತ ಎ vs ಆಸ್ಟ್ರೇಲಿಯಾ ಎ ತಂಡಗಳ ನಡುವೆ ಸೆಪ್ಟೆಂಬರ್‌ನಲ್ಲಿ ಸರಣಿ

ನವದೆಹಲಿ: ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಭಾರತ 'ಎ' ಹಾಗೂ ಆಸ್ಟ್ರೇಲಿಯಾ 'ಎ' ತಂಡಗಳ ನಡುವೆ ದ್ವಿಪಕ್ಷೀಯ ಕ್ರಿಕೆಟ್ ಸರಣಿ ನಡೆಯಲಿದೆ. ಬುಧವಾರ ಬಿಸಿಸಿಐ ವೇಳಾಪಟ್ಟಿ ಪ್ರಕಟಿಸಿತು. ಸರಣಿಯಲ್ಲಿ ಎರಡು '4 ದಿನಗಳ ಟೆಸ್ಟ್' ಪಂದ್ಯ ಹಾಗೂ 3 '50 ಓವರ್' ಪಂದ್ಯಗಳು ನಡೆಯಲಿವೆ. ಎಲ್ಲಾ ಪಂದ್ಯಗಳು ಪುದುಚೇರಿಯಲ್ಲಿ ನಿಗದಿಯಾಗಿವೆ. ಮೊದಲ ಅನಧಿಕೃತ ಟೆಸ್ಟ್ ಸೆ.22ರಿಂದ 25, 2ನೇ ಪಂದ್ಯ ಸೆ.29ರಿಂದ ಅ.2ರ ವರೆಗೆ ನಡೆಯಲಿವೆ. 50 ಓವರ್‌ನ 3 ಪಂದ್ಯಗಳು ಕ್ರಮವಾಗಿ ಅ.6, 9 ಹಾಗೂ 11ರಂದು ನಿಗದಿಯಾಗಿವೆ. ಅಲ್ಲದೆ, ಜಿಂಬಾಬ್ವೆ ಮಹಿಳಾ ತಂಡ ಕೂಡಾ ಇಲ್ಲಿಗೆ ಪ್ರವಾಸ ಕೈಗೊಳ್ಳಲಿದ್ದು, ಭಾರತ ಮಹಿಳಾ ತಂಡದ ವಿರುದ್ಧ ಅ.16ರಿಂದ 28ರ ವರೆಗೆ 3 ಏಕದಿನ, 3 ಟಿ20 ಪಂದ್ಯಗಳನ್ನಾಡಲಿದೆ.

ಡೆಲ್ಲಿಯಲ್ಲಿ ಜು.27ರಿಂದ ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್

ನವದೆಹಲಿ: 22ನೇ ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ ಜು.27ರಿಂದ ಆಗಸ್ಟ್ 2ರ ತನಕ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆಯಲಿದೆ. 35ಕ್ಕೂ ಹೆಚ್ಚು ರಾಷ್ಟ್ರಗಳ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ. ಈ ಬಗ್ಗೆ ದೆಹಲಿ ಸಿಎಂ ರೇಖಾ ಗುಪ್ತಾ ಮಾಹಿತಿ ನೀಡಿದ್ದಾರೆ. ಕೂಟವು 7 ದಿನ ದೆಹಲಿಯ ತ್ಯಾಗರಾಜ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಭಾರತ. ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಮಲೇಷ್ಯಾ, ಸಿಂಗಾಪುರ, ಸ್ಕಾಟ್ಲೆಂಡ್, ವೇಲ್ಸ್, ನೈಜೀರಿಯಾ, ಕೀನ್ಯಾ, ಜಮೈಕಾ, ಮತ್ತು ಟ್ರಿನಿಡಾಡ್ ಮತ್ತು ಟೊಬಾಗೊ ಸೇರಿ ವಿವಿಧ ದೇಶಗಳ ಆಟಗಾರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಗೆಲುವಿನ ಹಳಿಗೆ ಮರಳುತ್ತಾ ಆರ್‌ಸಿಬಿ?

ಇಂದು ಲಖನೌ ವಿರುದ್ಧ ಸೆಣಸು | ಗೆದ್ದು ಅಗ್ರ-2ರಲ್ಲೇ ಉಳಿದುಕೊಳ್ಳುವ ಗುರಿ


ರಜತ್

ಲಖನೌ: ಕಳೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಬ್ಯಾಟಿಂಗ್ ವೈಫಲ್ಯಕ್ಕೆ ತುತ್ತಾಗಿ ಸೋಲನುಭವಿಸಿದ್ದ ಹಾಲಿ ಚಾಂಪಿಯನ್ ಆರ್‌ಸಿಬಿ ಈಗ ಗೆಲುವಿನ ಹಳಿಗೆ ಮರಳಲು ಕಾಯುತ್ತಿದೆ. ತಂಡ ಗುರುವಾರ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಆಡಲಿದ್ದು, ಈ ಪಂದ್ಯದಲ್ಲಿ ಗೆದ್ದು ಅಂಕಪಟ್ಟಿಯಲ್ಲಿ ಅಗ್ರ-2ರಲ್ಲೇ ಉಳಿದುಕೊಳ್ಳುವ ವಿಶ್ವಾಸದಲ್ಲಿದೆ. ತಂಡ ಈಗ 9 ಪಂದ್ಯಗಳಲ್ಲಿ 6 ಗೆಲುವಿನೊಂದಿಗೆ 12 ಅಂಕ ಗಳಿಸಿದೆ.

ಆರ್‌ಸಿಬಿ ಅಪರೂಪಕ್ಕೆ ಎಂಬಂತೆ ಗುಜರಾತ್ ವಿರುದ್ಧ ಬ್ಯಾಟಿಂಗ್‌ನಲ್ಲಿ ದಿಢೀರ್ ಕುಸಿತ ಕಂಡಿತ್ತು. 2 ವಿಕೆಟ್‌ಗೆ 79 ರನ್ ಗಳಿಸಿದ್ದ ತಂಡ ಬಳಿಕ 155ಕ್ಕೆ ಆಲೌಟಾಗಿತ್ತು. ಹೀಗಾಗಿ ಲಖನೌ ವಿರುದ್ಧ ಬ್ಯಾಟರ್‌ಗಳು ಉತ್ತಮ ಪ್ರದರ್ಶನದ ಗುರಿಯೊಂದಿಗೆ ಕಣಕ್ಕಿಳಿಯಲಿದ್ದಾರೆ. ತಂಡ

ಮತ್ತೊಂದೆಡೆ ಲಖನೌ ತಂಡ ಈ ವರ್ಷದ ಐಪಿಎಲ್‌ನಲ್ಲಿ ತೀರಾ ಕಳಪೆ ಪ್ರದರ್ಶನ ನೀಡುತ್ತಿದೆ. ಆಡಿರುವ 9 ಪಂದ್ಯಗಳಲ್ಲಿ ಕೇವಲ 2ರಲ್ಲಿ ಗೆದ್ದಿದ್ದು, 4 ಅಂಕದೊಂದಿಗೆ ಪಟ್ಟಿಯಲ್ಲಿ ಕೊನೆ ಸ್ಥಾನದಲ್ಲಿದೆ. ಯಾವುದೇ ತಂಡಕ್ಕೂ ಪ್ಲೇ-ಆಫ್ ಪ್ರವೇಶಿಸಲು ಕನಿಷ್ಠ 14 ಅಂಕ ಅಗತ್ಯವಿದೆ. ಲಖನೌ ಉಳಿದ 5 ಪಂದ್ಯ ಗೆದ್ದರೆ 14 ಅಂಕ ಆಗಲಿದೆ. ಹೀಗಾಗಿ, ಆರ್‌ಸಿಬಿ ವಿರುದ್ಧ ಗೆಲ್ಲಬೇಕಿದ್ದು, ಸೋತರೆ ಪ್ಲೇ-ಆಫ್ ರೇಸ್‌ನಿಂದ ಅಧಿಕೃತವಾಗಿ ಹೊರಬೀಳಲಿದೆ.

ಪಂಜಾಬ್‌ಗೆ ಹ್ಯಾಟ್ರಿಕ್ ಸೋಲಿನ ಶಾಕ್!

33 ರನ್‌ನಲ್ಲಿ ಗೆದ್ದ ಸನ್ ಈಗ ಅಗ್ರಸ್ಥಾನಿ | ಸನ್ 235/4, ಕಿಂಗ್ಸ್ 202/7

ಹೈದರಾಬಾದ್: ಈ ಬಾರಿ ಐಪಿಎಲ್‌ನಲ್ಲಿ ಆರಂಭಿಕ 7 ಪಂದ್ಯಗಳಲ್ಲಿ ಅಜೇಯವಾಗಿದ್ದ ಪಂಜಾಬ್ ಕಿಂಗ್ಸ್ ತಂಡ ಈಗ ಹ್ಯಾಟ್ರಿಕ್ ಸೋಲಿನ ಮುಖಭಂಗ ಅನುಭವಿಸಿದೆ. ಬುಧವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಪಂಜಾಬ್ 33 ರನ್‌ಗಳಿಂದ ಶರಣಾಯಿತು. ಆಡಿರುವ 11 ಪಂದ್ಯಗಳಲ್ಲಿ 7ನೇ ಗೆಲುವಿನೊಂದಿಗೆ ಸನ್‌ರೈಸರ್ಸ್ ಅಗ್ರ ಸ್ಥಾನಕ್ಕೇರಿದ್ದು, ಪ್ಲೇ-ಆಫ್ ಸ್ಥಾನವನ್ನೂ ಬಹುತೇಕ ಖಚಿತಪಡಿಸಿಕೊಂಡಿತು.

ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ 4 ವಿಕೆಟ್‌ಗೆ 235 ರನ್ ಗಳಿಸಿತು. ಹೆನ್ರಿಚ್ ಕ್ಲಾಸೆನ್ 43 ಎಸೆತಕ್ಕೆ 69, ಇಶಾನ್ ಕಿಶನ್ 55, ಟ್ರ್ಯಾವಿಸ್ ಹೆಡ್ 19 ಎಸೆತಕ್ಕೆ 38, ಅಭಿಷೇಕ್ ಶರ್ಮಾ 13 ಎಸೆತಕ್ಕೆ 35, ನಿತೀಶ್ ಕುಮಾರ್ 13 ಎಸೆತಕ್ಕೆ ಔಟಾಗದೆ 29 ರನ್ ಗಳಿಸಿದರು.


ಸ್ಫೋಟಕ ಆಟವಾಡಿದ ಕ್ಲಾಸೆನ್

ಬೃಹತ್ ಗುರಿ ಬೆನ್ನತ್ತಿದ ಪಂಜಾಬ್ 7 ವಿಕೆಟ್ ನಷ್ಟದಲ್ಲಿ 202 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಆರಂಭಿಕ ವೈಫಲ್ಯಕ್ಕೆ ತುತ್ತಾದ ತಂಡವನ್ನು ಕೂಪರ್ ಕೊನೊಲಿ(59 ಎಸೆತಕ್ಕೆ ಔಟಾಗದೆ 107 ರನ್) ಮೇಲೆತ್ತಿದರೂ, ಸೋಲಿನಿಂದ ಪಾರು ಮಾಡಲಾಗಲಿಲ್ಲ.

ಸ್ಕೋರ್: ಸನ್‌ರೈಸರ್ಸ್ 235/4 (ಕ್ಲಾಸೆನ್ 69, ಇಶಾನ್ 55, ಚಹಲ್ 1-32), ಪಂಜಾಬ್ 20 ಓವರಲ್ಲಿ 202/7 (ಕೊನೊಲಿ ಔಟಾಗದೆ 107, ಪ್ಯಾಟ್ ಕಮಿನ್ಸ್ 2-34)

ಪಾಕ್ ಅಥ್ಲೀಟ್‌ಗಳು ಭಾರತದಲ್ಲಿ ಸ್ಪರ್ಧಿಸಲು ಸರ್ಕಾರ ಅನುಮತಿ

ದ್ವಿಪಕ್ಷೀಯ ಸರಣಿಯ ನಿರ್ಬಂಧ ಮುಂದುವರಿಕೆ

ನವದೆಹಲಿ: ಪಹಲ್ಗಾಂ ದಾಳಿ ಬಳಿಕ ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರೀಡಾ ಸಂಬಂಧ ತೀರಾ ಹದೆಗೆಟ್ಟಿತ್ತು. ಈಗ ಪಾಕಿಸ್ತಾನದ ವಿಚಾರದಲ್ಲಿ ಕೇಂದ್ರ ಸರ್ಕಾರ ಹೊಸ ಕ್ರೀಡಾ ನೀತಿ ಪ್ರಕಟಿಸಿದೆ. ಭಾರತದಲ್ಲಿ ನಡೆಯುವ ಬಹುರಾಷ್ಟ್ರೀಯ ಕೂಟ, ಟೂರ್ನಿಗಳಲ್ಲಿ ಪಾಲ್ಗೊಳ್ಳಲು ಪಾಕ್ ಕ್ರೀಡಾಪಟುಗಳಿಗೆ ಅನುಮತಿ ನೀಡಿದೆ. ಆದರೆ ದ್ವಿಪಕ್ಷೀಯ ಸರಣಿಯ ನಿರ್ಬಂಧ ಮುಂದುವರಿಸಲು ನಿರ್ಧರಿಸಿದೆ.

ಕ್ರೀಡಾ ಇಲಾಖೆಯು ಈ ಬಗ್ಗೆ ಪ್ರಕಟಣೆ ಹೊರಡಿಸಿದೆ. ಅದರ ಪ್ರಕಾರ, ಬಹುರಾಷ್ಟ್ರೀಯ ಕೂಟಗಳಿಗಾಗಿ ಪಾಕಿಸ್ತಾನ ಕ್ರೀಡಾಪಟುಗಳು ಭಾರತಕ್ಕೆ ಆಗಮಿಸಬಹುದು. ಅಲ್ಲದೆ, ಪಾಕಿಸ್ತಾನ ತಂಡ ಅಥವಾ ಕ್ರೀಡಾಪಟುಗಳು ಪಾಲ್ಗೊಳ್ಳುವ ಅಂತಾರಾಷ್ಟ್ರೀಯ ಟೂರ್ನಿಗಳಲ್ಲಿ ಭಾರತ ಆಡಲಿದೆ. ಆದರೆ ದ್ವಿಪಕ್ಷೀಯ ಕ್ರೀಡಾಕೂಟಗಳಿಗೆ ಭಾರತ ತಂಡ ಪಾಕ್‌ಗೆ ಅಥವಾ ಪಾಕಿಸ್ತಾನ ತಂಡ ಭಾರತದಲ್ಲಿ ಆಡಲು ನಿರ್ಬಂಧವಿರಲಿದೆ ಎಂದು ಸಚಿವಾಲಯವು ಎಲ್ಲಾ ರಾಷ್ಟ್ರೀಯ ಕ್ರೀಡಾ ಒಕ್ಕೂಟ(ಎನ್‌ಎಸ್‌ಎಫ್), ಭಾರತ ಒಲಿಂಪಿಕ್ ಸಂಸ್ಥೆ(ಐಒಎ), ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರ(ಸಾಯ್) ಸೇರಿದಂತೆ ಇತರ ಸಂಸ್ಥೆಗಳಿಗೆ ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಿದೆ.

ತುಮಕೂರು ಓಪನ್: ವೈದೇಹಿ, 2ನೇ ಸುತ್ತಿಗೆ, ಆಕಾಂಕ್ಷಾ ಔಟ್

ಡಬಲ್ಸ್‌ನಲ್ಲಿ ಗೆದ್ದ ಸೋಹಾ ಸಾದಿಕ್-ಮಧುರಿಮಾ

ತುಮಕೂರು: ಇಲ್ಲಿ ನಡೆಯುತ್ತಿರುವ ತುಮಕೂರು ಓಪನ್ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಭಾರತದ 3ನೇ ಶ್ರೇಯಾಂಕಿತ ಆಟಗಾರ್ತಿ ವೈದೇಹಿ ಚೌಧರಿ ಶುಭಾರಂಭ ಮಾಡಿದ್ದಾರೆ.

ಬುಧವಾರ ಅವರು ಮಹಿಳಾ ಸಿಂಗಲ್ಸ್‌ನಲ್ಲಿ ಸೋಹಾ ಸಾದಿಕ್ ವಿರುದ್ಧ 6-3, 6-4 ಅಂತರದಲ್ಲಿ ಜಯಗಳಿಸಿದರು. 4ನೇ ಶ್ರೇಯಾಂಕಿತ ಆಟಗಾರ್ತಿ ಝೀಲ್ ದೇಸಾಯಿ ಅವರು ಭಾರತದವರೇ ಆದ ಜೀತೇಶ್ ಕುಮಾರಿಯನ್ನು 6-0, 6-0 ಅಂತರದಲ್ಲಿ ಸೋಲಿಸಿದರು. ಆದರೆ 8ನೇ ಶ್ರೇಯಾಂಕಿತ ಆಕಾಂಕ್ಷಾ ದಿಲೀಪ್ ಮೊದಲ ಸುತ್ತಿನಲ್ಲೇ ರಷ್ಯಾದ ಅರಿನಾ ಅರಿಪುಲ್ಲಿನಾ ವಿರುದ್ಧ 1-6, 1-6 ಸೆಟ್‌ಗಳಲ್ಲಿ ಸೋತು ಹೊರಬಿದ್ದರು.

ಡಬಲ್ಸ್‌ನಲ್ಲಿ ಸೋಹಾ ಸಾದಿಕ್-ಮಧುರಿಮಾ ಸಾವಂತ್ ಜೋಡಿ ಪೂಜಾ ಇಂಗಲೆ-ಪ್ರತ್ಯುಷಾ ವಿರುದ್ಧ ಗೆದ್ದು 2ನೇ ಸುತ್ತು ಪ್ರವೇಶಿಸಿತು. ಶ್ರೀಮಾನ್ಯ ರೆಡ್ಡಿ-ಸಾಹಿರಾ ಸಿಂಗ್ ಕೂಡಾ ಗೆಲುವು ಸಾಧಿಸಿತು.

ಮೇ 10ಕ್ಕೆ ಆರ್‌ಸಿಬಿ ವಿರುದ್ಧ ಪಂದ್ಯದಲ್ಲಿ ಹಾರ್ದಿಕ್ ಕಣಕ್ಕೆ?

ಮುಂಬೈ: ಐಪಿಎಲ್‌ನ ಮುಂಬೈ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಭಾನುವಾರ ಆರ್‌ಸಿಬಿ ವಿರುದ್ಧ ಪಂದ್ಯದಲ್ಲಿ ಕಣಕ್ಕಿಳಿಯುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ. ಬೆನ್ನು ನೋವಿನ ಕಾರಣದಿಂದಾಗಿ ಹಾರ್ದಿಕ್ ಲಖನೌ ವಿರುದ್ಧ ಆಡಿರಲಿಲ್ಲ. ಅವರು ಆರ್‌ಸಿಬಿ ವಿರುದ್ಧ ಆಡಲು ತಂಡದ ಇತರ ಆಟಗಾರರ ಜೊತೆಗೆ ರಾಯ್ಪುರಕ್ಕೂ ತೆರಳಿರಲಿಲ್ಲ. ಆದರೆ ಲಾಜಿಸ್ಟಿಕಲ್ ಕಾರಣಕ್ಕೆ ಅವರು ತಂಡವನ್ನು ಕೂಡಿಕೊಂಡಿಲ್ಲ ಎನ್ನಲಾಗಿದ್ದು, ಶೀಘ್ರದಲ್ಲೇ ರಾಯ್ಪುರಕ್ಕೆ ಪ್ರಯಾಣಿಸುವ ನಿರೀಕ್ಷೆಯಿದೆ ಎಂದು ವರದಿಯಾಗಿದೆ.

ಏಷ್ಯಾ ಜೂನಿಯರ್ ಬಾಕ್ಸಿಂಗ್: ಭಾರತಕ್ಕೆ 27 ಮೆಡಲ್ ಖಚಿತ

ತಾಷ್ಕೆಂಟ್: ಇಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಅಂಡರ್-15, ಅಂಡರ್-17 ಚಾಂಪಿಯನ್‌ಶಿಪ್‌ನಲ್ಲಿ ಭಾರತ 27 ಪದಕಗಳನ್ನು ಖಚಿತಪಡಿಸಿಕೊಂಡಿದೆ. ಅಂಡರ್-15 ಬಾಲಕಿಯರು 15ರ ಪೈಕಿ 14 ಪದಕ, ಅಂಡರ್-15 ಬಾಲಕರು 13 ಪದಕ ಖಚಿತಪಡಿಸಿಕೊಂಡಿದ್ದಾರೆ. ಈ ಪೈಕಿ ಗರಿಷ್ಠ ಮಟ್ಟದಲ್ಲಿ ಚಿನ್ನದ ಪದಕ ಗೆಲ್ಲುವ ಗುರಿಯನ್ನು ಭಾರತದ ಜೂನಿಯರ್ ಬಾಕ್ಸರ್‌ಗಳು ಹೊಂದಿದ್ದಾರೆ.

ಆರ್ಚರಿ ವಿಶ್ವಕಪ್: ಪದಕವಿಲ್ಲದೆ ಮರಳಿದ ಕಾಂಪೌಂಡ್ ತಂಡಗಳು

ಶಾಂಘೈ: ಆರ್ಚರಿ ವಿಶ್ವಕಪ್ ಹಂತ-2ರಲ್ಲಿ ಭಾರತದ ಕಾಂಪೌಂಡ್ ಪುರುಷ ಹಾಗೂ ಮಹಿಳಾ ತಂಡಗಳು ನೀರಸ ಪ್ರದರ್ಶನ ನೀಡಿದ್ದು, ಪದಕವಿಲ್ಲದೆ ತವರಿಗೆ ಮರಳಿದ್ದಾರೆ. ಕಳೆದ ತಿಂಗಳು ಮೆಕ್ಸಿಕೊದಲ್ಲಿ ನಡೆದಿದ್ದ ಏಕೈಕ ಪದಕ ಸಾಧನೆ ಮಾಡಿದ್ದ ಮಹಿಳಾ ತಂಡಕ್ಕೆ ಕೂಡಾ ಈ ಬಾರಿ ಪದಕ ಸಿಗಲಿಲ್ಲ. ಜ್ಯೋತಿ ಸುರೇಖಾ, ಪ್ರಗತಿ, ಅದಿತಿ ಸ್ವಾಮಿ ಅವರನ್ನೊಳಗೊಂಡ ತಂಡ ಟರ್ಕಿ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲಿ 227-233ರಲ್ಲಿ ಸೋತು ಹೊರಬಿತ್ತು.



ಕುಶಾಲನಗರದ ಸಹಕಾರ ಸಾರಥಿ ಟಿ.ಆರ್. ಶರವಣ ಕುಮಾರ್

ಕನ್ನಡಪ್ರಭ-ಏಷ್ಯಾನೆಟ್ ಸುವರ್ಣ ನ್ಯೂಸ್ ಸಹಕಾರ ಶಿರೋಮಣಿ ಪ್ರಶಸ್ತಿ ಗರಿ

ಕೊಡಗಿನ ಹೆಬ್ಬಾಗಿಲು ಕುಶಾಲನಗರದಲ್ಲಿ ನೆಲೆಸಿರುವ ಟಿ.ಆರ್. ಶರವಣ ಕುಮಾರ್ ಸುಮಾರು 30 ವರ್ಷಗಳ ಕಾಲ ಸಹಕಾರಿ ಕ್ಷೇತ್ರದಲ್ಲಿದ್ದು, ಕುಶಾಲನಗರದ ಸಹಕಾರ ಸಾರಥಿ ಎಂದೇ ಖ್ಯಾತಿ ಪಡೆದಿದ್ದು, ಕನ್ನಡಪ್ರಭ-ಏಷ್ಯಾನೆಟ್ ಸುವರ್ಣ ನ್ಯೂಸ್ 'ಸಹಕಾರ ಶಿರೋಮಣಿ' ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಇವರು ಟಿ.ಕೆ. ರಾಜು-ಮಂಗೈಯಾರ್ ಕರೆಸಿ ದಂಪತಿ ಪುತ್ರ. ಪತ್ನಿ- ರೋಹಿಣಿ ಎಸ್, ಮದನ್ ಕುಮಾರ್, ಓಂ ಪ್ರಕಾಶ್ ಇಬ್ಬರು ಪುತ್ರರಿದ್ದಾರೆ.

ಕುಶಾಲನಗರದ ನ.122ನೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ನಿಯಮಿತ ಹಾಗೂ ನಂ.19722 ಕೈಗಾರಿಕೋದ್ಯಮಿಗಳ ಮತ್ತು ವೃತ್ತಿನಿರತರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾಗಿದ್ದಾರೆ. ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಹಕಾರ ಕ್ಷೇತ್ರದಲ್ಲಿ 1995ರಲ್ಲಿ ಪಾದಾರ್ಪಣೆ ಮಾಡಿ ಸಹಕಾರ ಸಂಸ್ಥೆಗಳಲ್ಲಿ ಸುಮಾರು 30 ವರ್ಷಗಳ ಕಾಲ ಸಾರ್ಥಕ ಸೇವೆ ಮಾಡಿದ್ದಾರೆ. ಕಳಂಕರಹಿತ ಸೇವೆ ಸಲ್ಲಿಸುತ್ತಿದ್ದಾರೆ. ಕುಶಾಲನಗರ ಪಟ್ಟಣದಲ್ಲಿ ತಮ್ಮದೇ ಸ್ವಂತ ಬ್ರ್ಯಾಂಡ್ ಸುಮುಕ್ ಐಸ್‌ಕ್ರೀಮ್ ತಯಾರಿಕೆ ಮತ್ತು ಹೋಟೆಲ್ ಉದ್ಯಮವನ್ನು ನಡೆಸುತ್ತಿದ್ದಾರೆ.

2023ರ ವೇಳೆಗೆ ಸಹಕಾರಿ ಕ್ಷೇತ್ರದಲ್ಲಿ ಸುಮಾರು 25 ವರ್ಷಗಳ ಕಾಲ ಸಾರ್ಥಕ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಕುಶಾಲನಗರದಲ್ಲಿ ವಿವಿಧ ಸಂಘ ಸಂಸ್ಥೆಗಳಿಂದ ಪೌರ ಸನ್ಮಾನಕ್ಕೆ ಭಾಜನರಾಗಿದ್ದಾರೆ.

1995ರಿಂದ ಕುಶಾಲನಗರ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ನಲ್ಲಿ ಉಪಾಧ್ಯಕ್ಷರು ಮತ್ತು ನಿರ್ದೇಶಕರು, 1999ರಿಂದ 2005ರವರೆಗೆ ಅಧ್ಯಕ್ಷರು, ಕುಶಾಲನಗರ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್, 2005ರಿಂದ 2010ರವರೆಗೆ ನಿರ್ದೇಶಕರು, ಕುಶಾಲನಗರ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್, 2015ರಿಂದ 2020ರ ವರೆಗೆ ಅಧ್ಯಕ್ಷರು, ನಂ.122 ನೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕುಶಾಲನಗರ, 2020ರಿಂದ ಅಧ್ಯಕ್ಷರು ನಂ.122ನೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕುಶಾಲನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

2019 ರಲ್ಲಿ ಕುಶಾಲನಗರದ ಹಳೆಯ ಮಾರುಕಟ್ಟೆ ರಸ್ತೆಯಲ್ಲಿ ಸುಸಜ್ಜಿತವಾದ ಕಚೇರಿ ಕಟ್ಟಡ ನಿರ್ಮಾಣ ಮಾಡಿದ್ದಾರೆ. ಅದೇ ರೀತಿ ಶರವಣ ಅವರ ನೇತೃತ್ವದಲ್ಲಿ ಎರಡು ದಶಕಗಳನ್ನು ಕಂಡ ಕೈಗಾರಿಕಾ ಉದ್ಯಮಿಗಳ ಮತ್ತು ವೃತ್ತಿನಿರತರ ವಿವಿಧೋದ್ದೇಶ ಸಹಕಾರ ಸಂಘ ಕೂಡ ಯಶಸ್ಸಿನತ್ತ ದಾಪುಗಾಲು ಇಟ್ಟಿದೆ.

ಶತಮಾನೋತ್ಸವ ಪೂರೈಸಿ ಸತತ ಹಲವು ವರ್ಷಗಳಿಂದ ಕೋಟಿಗೂ ಮೇಲೆ ಲಾಭಗಳಿಸುತ್ತಿರುವ ಕುಶಾಲನಗರದ 122ನೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೀಗ ಶತಮಾನೋತ್ಸವ ಹೆಸರಿನಲ್ಲಿ ಕುಶಾಲನಗರ ಸಮೀಪ ಗುಡ್ಡೆಹೊಸೂರು ಬಳಿ ಅತ್ಯಾಧುನಿಕ ತಂತ್ರಜ್ಞಾನ ಸರ್ವ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಶತಮಾನೋತ್ಸವ ಸಂಕೀರ್ಣ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಸಹಕಾರ ಸಂಘಗಳ ಮೂಲಕ ಕುಶಾಲನಗರ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಮಹಿಳಾ ಸದಸ್ಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಗುಂಪು ಸಾಲ ಯೋಜನೆ ಮತ್ತಿತರ ಸೌಲಭ್ಯಗಳನ್ನು ಕೂಡ ಕಲ್ಪಿಸುವಲ್ಲಿ ಟಿ.ಆರ್. ಶರವಣ ಕುಮಾರ್ ಯಶಸ್ವಿಯಾಗಿದ್ದಾರೆ.

ಹಸಿರು ಕ್ರಾಂತಿ

ಕುಶಾಲನಗರ ಕೈಗಾರಿಕೋದ್ಯಮಿಗಳ ಮತ್ತು ವೃತ್ತಿನಿರತರ ವಿವಿಧೋದ್ದೇಶ ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಹಸಿರು ಕ್ರಾಂತಿ ಸೃಷ್ಟಿಸಲು ಕುಶಾಲನಗರದಲ್ಲಿ ಸುಮಾರು ಒಂದು ಸಾವಿರ ಗಿಡಗಳನ್ನು ನೆಟ್ಟು ಪೋಷಣೆ ಮಾಡಲಾಗುತ್ತಿದೆ.

ಬಡ ಮಕ್ಕಳಲ್ಲಿ ಕಂಪ್ಯೂಟರ್ ಜ್ಞಾನ ಹೆಚ್ಚಿಸಲು ರು.12 ಲಕ್ಷ ವೆಚ್ಚದಲ್ಲಿ ಕುಶಾಲನಗರ ಸರ್ಕಾರಿ ಪ್ರೌಢ ಶಾಲೆ ಹಾಗೂ ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ಪ್ರತ್ಯೇಕವಾದ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಪ್ರಾರಂಭ ಹಾಗೂ ನಿರ್ವಹಣೆ ಕೂಡ ಮಾಡಲಾಗುತ್ತಿದೆ.

ರು.16 ಕೋಟಿ ವೆಚ್ಚದಲ್ಲಿ ಕಲ್ಯಾಣ ಮಂಟಪ ಸಮುಚ್ಚಯ ಕಟ್ಟಡ!

ಕೊಡಗಿನ ಹೆಬ್ಬಾಗಿಲಿನ ಕುಶಾಲನಗರದ 122ನೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೀಗ ಶತಮಾನೋತ್ಸವ ಹೆಸರಿನಲ್ಲಿ ಕುಶಾಲನಗರ ಸಮೀಪ ಗುಡ್ಡೆಹೊಸೂರು ಬಳಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಸುಸಜ್ಜಿತ ಶತಮಾನೋತ್ಸವ ಸಂಕೀರ್ಣ ನಿರ್ಮಾಣ ಕಾರ್ಯ ನಡೆಯುತ್ತಿದೆ. ಅಂದಾಜು ರೂ.16.5 ಕೋಟಿ ವೆಚ್ಚದಲ್ಲಿ ಕಲ್ಯಾಣ ಮಂಟಪ ಸಮುಚ್ಚಯ ಕಟ್ಟಡ ನಿರ್ಮಾಣ ಕೈಗೊಂಡಿದೆ. ಈ ಸುಸಜ್ಜಿತ ಕಲ್ಯಾಣ ಮಂಟಪದಲ್ಲಿ 1,500ಕ್ಕೂ ಅಧಿಕ ಮಂದಿ ಏಕಕಾಲದಲ್ಲಿ ಕುಳಿತುಕೊಳ್ಳುವ ಸೌಲಭ್ಯ ಕಲ್ಪಿಸಿದ್ದಾರೆ. ವಾಹನ ನಿಲುಗಡೆಗಾಗಿ ಸುಮಾರು ಮುಕ್ಕಾಲು ಎಕರೆ ಪ್ರದೇಶವನ್ನು ಮೀಸಲಿಡಲಾಗಿದ್ದು, 500ಕ್ಕೂ ಅಧಿಕ ವಾಹನಗಳು ಏಕಕಾಲದಲ್ಲಿ ನಿಲುಗಡೆಗೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ. ಶೀಘ್ರದಲ್ಲೇ ಈ ಕಲ್ಯಾಣ ಮಂಟಪ ಲೋಕಾರ್ಪಣೆಗೊಳ್ಳಲಿದೆ.



ಸಂದ ಪ್ರಶಸ್ತಿಗಳು

- ಸಂಘದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ 2016ರಲ್ಲಿ ಜೈಪುರ್ ಪ್ರಶಸ್ತಿ ಲಭಿಸಿದೆ.
- 2017ರಲ್ಲಿ ದೆಹಲಿಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದ್ದಾರೆ.
- 2016ರಲ್ಲಿ ಕರ್ನಾಟಕ ಸಹಕಾರ ಮಹಾಮಂಡಳಿಯಿಂದ ಉತ್ತಮ ಸಹಕಾರ ಸಂಘ ಪ್ರಶಸ್ತಿ ಗಳಿಸಿದೆ.

ಎಚ್‌ಐವಿ ಪೀಡಿತನ ವಿಚ್ಛೇದನ ರದ್ದುಗೊಳಿಸಿದ ಹೈಕೋರ್ಟ್

ಏಡ್ಸ್ ರೋಗಿ ಎಂದು ನಿಂದಿಸಿದ್ದಾರೆ ಎಂದು ಹೇಳಿ ವಿಚ್ಛೇದನ ಪಡೆದಿದ್ದ ಪತಿ | ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಎಚ್‌ಐವಿ/ಏಡ್ಸ್‌ನಿಂದ ನಾನು ಬಳಲುತ್ತಿದ್ದೇನೆ ಎಂದು ಪತ್ನಿ ಮತ್ತು ಆಕೆಯ ಕುಟುಂಬದವರು ನಿಂದಿಸಿದ್ದಾರೆ ಎಂಬ ಆಧಾರದಲ್ಲಿ ಪತಿಗೆ ವಿಚ್ಛೇದನ ಮಂಜೂರು ಮಾಡಿ ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

- ಪ್ರಕರಣದಲ್ಲಿನ ಆರೋಪಕ್ಕೆ ಪೂರಕವಾಗಿ ಯಾವುದೇ ದಾಖಲೆಗಳು ಇಲ್ಲ: ಹೈಕೋರ್ಟ್
- ಹೈಕೋರ್ಟ್ ಮೆಟ್ಟಿಲೇರಿದ್ದ ಪತ್ನಿ

ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪತ್ನಿ ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಿದ ನ್ಯಾಯಮೂರ್ತಿಗಳಾದ ಸೂರಜ್ ಗೋವಿಂದರಾಜ್ ಮತ್ತು ಡಾ. ಚಿಲ್ಲಕೂರ್ ಸುಮಲತಾ ಅವರಿದ್ದ ವಿಭಾಗೀಯ ಪೀಠ, ದಾಖಲೆಯಿಲ್ಲದೇ ಪತಿ ಮಾಡಿರುವ ಇಂತಹ ಗಂಭೀರ ಆರೋಪವನ್ನು ಒಪ್ಪಲಾಗದು. ಹಾಗಾಗಿ, ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದುಪಡಿಸಲಾಗಿದೆ. ಆ ನ್ಯಾಯಾಲಯ ಹೊಸದಾಗಿ ಪ್ರಕರಣವನ್ನು ಪರಿಗಣಿಸಿ ಕಾನೂನು ಪ್ರಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಆದೇಶಿಸಿದೆ.

ಪತ್ನಿ ಮತ್ತು ಆಕೆಯ ಕುಟುಂಬದವರು ವಿನಾ ಕಾರಣ ತಾನು ಎಚ್‌ಐವಿ/ ಏಡ್ಸ್‌ನಿಂದ ಬಳಲುತ್ತಿದ್ದೇನೆ ಎಂದು ಕೆಟ್ಟದಾಗಿ ನಿಂದಿಸಿದ್ದಾರೆ. ಹೀಗಾಗಿ, ಹಿಂದೂ ವಿವಾಹ ಕಾಯ್ದೆ- 1955ರ ಅಡಿ ತಮ್ಮ ವಿವಾಹ ಅಸಿಂಧುಗೊಳಿಸಿ ವಿಚ್ಛೇದನ ಮಂಜೂರು ಮಾಡುವಂತೆ ಕೋರಿ ಪತಿ ಬೀದರ್‌ನ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯವು ವಿಚ್ಛೇದನ ಮಂಜೂರು ಮಾಡಿ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಪತ್ನಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಮೇಲ್ಮನವಿಯ ವಿಚಾರಣೆ ನಡೆಸಿದ ಹೈಕೋರ್ಟ್, ಪತಿ ಎಚ್‌ಐವಿ/ ಏಡ್ಸ್‌ನಿಂದ ಬಳಲುತ್ತಿರುವುದಾಗಿ ಪತ್ನಿ ಹಾಗೂ ಅವರ ಕುಟುಂಬದ ಸದಸ್ಯರು ನಿಂದಿಸಿದ ಆರೋಪ ಸಾಬೀತಾದರೆ ಅದು ನಿಸ್ಸಂಶಯವಾಗಿ ಮಾನಸಿಕ ಕ್ರೌರ್ಯವಾಗುತ್ತದೆ. ಆದರೆ, ಪ್ರಕರಣದಲ್ಲಿನ ಆರೋಪಕ್ಕೆ ಪೂರಕವಾಗಿ ಯಾವುದೇ ದಾಖಲೆಗಳು ಇಲ್ಲ. ಕ್ರೌರ್ಯ ಸಾಬೀತುಪಡಿಸಲು ಸೂಕ್ತ ಮತ್ತು ಆಸಕ್ತಿದಾಯಕ ದಾಖಲೆಗಳನ್ನು ಪತಿ ಒದಗಿಸಿಲ್ಲ. ಕೌಟುಂಬಿಕ ನ್ಯಾಯಾಲಯವು ಪತಿಯ ಹೇಳಿಕೆಗಳನ್ನು ಸ್ವೀಕರಿಸುವ ಮೂಲಕ ಪುರಾವೆಯಿಲ್ಲದೇ ಕೇವಲ ಆರೋಪವನ್ನು ಪರಿಣಾಮಕಾರಿಯಾಗಿ ಬದಲಾಯಿಸಿದೆ. ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲ ಎಂದು ಹೇಳಿದೆ.

ಪ್ರಕರಣವೇನು?: ದಂಪತಿ 2002ರ ಜೂ. 16ರಂದು ವಿವಾಹವಾಗಿದ್ದರು. ಪತ್ನಿಯು ಖಾಸಗಿ ಶಾಲೆಯಲ್ಲಿ ಪ್ರಿನ್ಸಿಪಾಲ್ ಆಗಿದ್ದು, ಪತಿ ಸಾಂಖ್ಯಿಕ ಇನ್‌ಸ್ಪೆಕ್ಟರ್ ಆಗಿದ್ದಾರೆ. ಇಬ್ಬರು ಮಕ್ಕಳು ದಂಪತಿಗೆ ಜನಿಸಿದ್ದರು. ಮದುವೆಯಾದ ಆರಂಭದಲ್ಲಿ ಜೀವನ ಚೆನ್ನಾಗಿ ನಡೆದಿತ್ತು. ನಂತರ ಇಬ್ಬರು ಪುತ್ರರೊಂದಿಗೆ ಪತ್ನಿ ತವರು ಮನೆಗೆ ಸೇರಿದ್ದರು. ಸಾಕಷ್ಟು ಬಾರಿ ಕರೆದರೂ ತನ್ನ ಜೊತೆ ಬಂದಿಲ್ಲ. ಬಳಿಕ ತನ್ನನ್ನು ಕೆಟ್ಟದಾಗಿ ನಿಂದಿಸಿದ್ದಾರೆ ಎಂದು ಆರೋಪಿಸಿ ಪತಿ ವಿಚ್ಛೇದನ ಕೋರಿದ್ದರು. ಇದಕ್ಕೆ ಪ್ರತಿಯಾಗಿ ಪತ್ನಿ, ಅನೈತಿಕ ಸಂಬಂಧ ಹೊಂದಿರುವ ಪತಿಗೆ ಆ ಸಂಬಂಧಿಂದಲೂ ಎರಡು ಮಕ್ಕಳಾಗಿದ್ದು, ಈ ಕಾರಣಕ್ಕಾಗಿ ಅವರನ್ನು ತೊರೆದಿರುವುದಾಗಿ ವಾದಿಸಿದ್ದರು.

ಯುನೈಟೆಡ್ ಬ್ರೂವರೀಸ್ ಲಿಮಿಟೆಡ್

UB

Registered office: UB Tower, UB City, #24 Vittal Mallya Road, Bengaluru - 560001.
Phone: 080 - 45655000 Fax: 080 - 22211964, 22229488.
CIN: L36999KA1999PLC025195 Email: ublinvestor@ubmail.com Website: www.unitedbreweries.com

ಮಾರ್ಚ್ 31, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷಕ್ಕೆ ಕೊನೆಗೊಂಡ ಏಕೀಕೃತ ಹಾಗೂ ಒಟ್ಟುಗೂಡಿಸಿದ ಹಣಕಾಸು ಫಲಿತಾಂಶಗಳ ಪ್ರಕಟಣೆ

(₹. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ಏಕೀಕೃತ				ಒಟ್ಟುಗೂಡಿಸಿದ			
		ತ್ರೈಮಾಸಿಕಕ್ಕೆ ಕೊನೆಗೊಂಡ		ವರ್ಷಕ್ಕೆ ಕೊನೆಗೊಂಡ		ತ್ರೈಮಾಸಿಕಕ್ಕೆ ಕೊನೆಗೊಂಡ		ವರ್ಷಕ್ಕೆ ಕೊನೆಗೊಂಡ	
		ಮಾರ್ಚ್ 31,2026	ಮಾರ್ಚ್ 31,2025	ಮಾರ್ಚ್ 31,2026	ಮಾರ್ಚ್ 31,2025	ಮಾರ್ಚ್ 31,2026	ಮಾರ್ಚ್ 31,2025	ಮಾರ್ಚ್ 31,2026	ಮಾರ್ಚ್ 31,2025
		ಅಪರಿಶೋಧಿತ*		ಪರಿಶೋಧಿತ		ಅಪರಿಶೋಧಿತ*		ಪರಿಶೋಧಿತ	
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	4,41,396	4,43,338	17,50,084	19,43,650	4,41,656	4,43,516	17,50,866	19,44,444
2	ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ ಮತ್ತು ಅಸಾಧಾರಣ ವಸ್ತುಗಳು	4,201	13,155	50,658	62,911	4,228	13,207	50,698	63,087
3	ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ ಮತ್ತು ನಂತರ ಅಸಾಧಾರಣ ವಸ್ತುಗಳು	11,605	13,155	56,189	60,335	11,632	13,207	56,229	60,511
4	ತೆರಿಗೆಗೆ ನಂತರದ ಅವಧಿಗೆ ನಿವ್ವಳ ಲಾಭ ಮತ್ತು ನಂತರ ಅಸಾಧಾರಣ ವಸ್ತುಗಳು	10,167	9,738	41,316	44,117	10,187	9,776	41,339	44,241
5	ತೆರಿಗೆಯ ನಂತರದ ಒಟ್ಟು ಸಮಗ್ರ ಆದಾಯ (ಲಾಭವನ್ನು ಒಳಗೊಂಡಿರುತ್ತದೆ ಅವಧಿಗೆ (ತೆರಿಗೆಯ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)	9,718	9,659	42,257	44,356	9,740	9,696	42,282	44,479
6	ಈಕ್ವಿಟಿ ಷೇರು ಬಂಡವಾಳ	2,644	2,644	2,644	2,644	2,644	2,644	2,644	2,644
7	ಮೀಸಲು (ಮರುಮೌಲ್ಯಮಾಪನ ಮೀಸಲು ಹೊರತು ಪಡಿಸಿ)	–	–	4,49,087	4,33,271	–	–	4,49,566	4,33,748
8	ಪ್ರತಿ ಷೇರಿಗೆ ಗಳಿಕೆಗಳು (ಪ್ರತಿಯೊಂದಕ್ಕೆ ರೂ 1/–) (ವಾರ್ಷಿಕವಲ್ಲ)								
	(ಎ) ಮೂಲಭೂತ	3.85	3.69	15.63	16.69	3.85	3.69	15.63	16.71
	(ಬಿ) ಡೈಲ್ಯೂಟೆಡ್	3.85	3.69	15.63	16.69	3.85	3.69	15.63	16.71

*ಸಂಪೂರ್ಣ ಆರ್ಥಿಕ ಫಲಿತಾಂಶಗಳ ಟಿಪ್ಪಣಿ 10ಅನ್ನು ನೋಡಿ.

ಟಿಪ್ಪಣಿ:

(ಎ). ಮೇಲಿನವು 2015ರ ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಬಂಧನೆಗಳ ನಿಯಮ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ತ್ರೈಮಾಸಿಕ ಮತ್ತು ವರ್ಷಾಂತ್ಯದ ಆರ್ಥಿಕ ಫಲಿತಾಂಶಗಳ ವಿವರವಾದ ಸ್ವರೂಪದ ಸಾರಾಂಶವಾಗಿದೆ. ತ್ರೈಮಾಸಿಕ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳ ಪೂರ್ಣ ಸ್ವರೂಪವು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಹಾಗೂ ಕಂಪನಿಯ ವೆಬ್‌ಸೈಟ್ www.unitedbreweries.com ನಲ್ಲಿ ಲಭ್ಯವಿವೆ.

(ಬಿ). ಈ ಕೆಳಗಿನ ಕ್ಯೂ ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಸಂಪೂರ್ಣ ಫಲಿತಾಂಶವನ್ನು ವೀಕ್ಷಿಸಬಹುದು :

ಮಂಡಳಿಯ ಆದೇಶದ ಮೇರೆಗೆ
ಯುನೈಟೆಡ್ ಬ್ರೂವರೀಸ್ ಲಿಮಿಟೆಡ್ ನ ಪರವಾಗಿ
ಸಹಿ/–
ವಿವೇಕ್ ಗುಪ್ತಾ
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ಮೇ 05, 2026

ಗೋಮಾಳ ಅತಿಕ್ರಮಣ: ಪ್ರಕರಣ ದಾಖಲು

ಚಿಂಚೋಳಿ: ತಾಲೂಕಿನ ಕಲ್ಲೂರ ಗ್ರಾಮದಲ್ಲಿ ಗೋಮಾಳಕ್ಕೆ ಮೀಸಲಾಗಿಟ್ಟಿದ್ದ ಸರ್ಕಾರಿ ಜಮೀನು ಅತಿಕ್ರಮಣ ಮಾಡಿದ ತೆಲಂಗಾಣ ಮೂಲದ ದಾಮೋದರರೆಡ್ಡಿ ಎಂಬುವವರ ವಿರುದ್ಧ ಮಿರಿಯಾಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ತಿಳಿಸಿದ್ದಾರೆ. ಕಲ್ಲೂರ ಗ್ರಾಮದ ಸರ್ವೆ ನಂ.55/1ರಲ್ಲಿ4-16ಎ.ಗು.ಸರ್ವೆನಂ. 55\2ರ ಲ್ಲಿ4-17ಎ.ಗ್ಂ. ಸರ್ವೆನಂ.55\3ರಲ್ಲಿ4-30ಎ.ಗು ಒಟ್ಟು13 ಎಕರೆ 23 ಗುಂಟೆಯಲ್ಲಿ ಅತಿಕ್ರಮಣ ಕಂಡು ಬಂದಿದ್ದರಿಂದ ತೆಲಂಗಾಣ ಮೂಲದ ದಾಮೋದರರೆಡ್ಡಿ ವಿರುದ್ಧ ಕರ್ನಾಟಕ ಭೂ ಕಂದಾಯ ಅಧಿನಿಯಮ1964ರ 192(ಎ)ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಸದರಿ ಜಮೀನು ಚಟ್ಟಿನಾಡ ಸಿಮೆಂಟ್ ಕಾರ್ಪೋರೇಶನ್ ವತಿಯಿಂದ ಗೋಮಾಳಕ್ಕಾಗಿ ಮೀಸಲಾಗಿರಿಸಲು ರೈತರಿಂದ ಖರೀದಿಸಿ ಸರ್ಕಾರಕ್ಕೆ ವಹಿಸಿಕೊಡಲಾಗಿತ್ತು. ಇದೇ ಜಮೀನಿನಲ್ಲಿ ಗೋಶಾಲೆ ತೆರೆಯಲು ಹಾಗೂ ಮೇವು ಬೆಳೆಯಲು ಅತಿಕ್ರಮಣದಾರರ ಮುಂದಾಗಿದ್ದರು. ಗೋಮಾಳ ಇಲ್ಲದಿರುವ ಬಗ್ಗೆ ಕಲ್ಲೂರ ಗ್ರಾಮಸ್ಥರು ತಹಸೀಲ್ದಾರವರಿಗೆ ದೂರು ಸಲ್ಲಿಸಿದ್ದರು. ಮಡಿವಾಳಪ್ಪ ಭಾ ಗೋಡಿ ಚಿಂಚೋಳಿ ತಹಸೀಲ್ದಾರರು ನೀಡಿದ ದೂರಿನ ಮೇರೆಗೆ ಮಿರಿಯಾಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ತಾಲ್ಲೂಕು: ಗೋಕಾಕ, ಜಿಲ್ಲಾ: ಬೆಳಗಾವಿ, ರಾಜ್ಯ: ಕರ್ನಾಟಕ, ಪಿನ್ – 591 307, ದೂರವಾಣಿ: 08332–225213.
ಇ–ಮೇಲ್: knnlgrbccd3.gokak@gmail.com

ಸಂಖ್ಯೆ : ಕ.ನೀ.ನಿ.ನಿ./ಜಿ.ಆರ್.ಬಿ.ಸಿ.ಸಿ.ವಿ.–3/ಡಿ.ಬಿ./ಲೆ.ಶಿ.4701 ಎಂ&ಎಂಆಯ್/ಟೆಂಡರ್/2026–27/01 ದಿನಾಂಕ : 05–05–2026

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ

(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ **ಕಾರ್ಯನಿರ್ವಾಹಕ ಅಭಿಯಂತರು, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ಗೋಕಾಕ ಕಚೇರಿಯಲ್ಲಿ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಶೇಕಡಾವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು, ಕೆ.ಟಿ.ಪಿ.ಪಿ. ಕಾಯ್ದೆಯ ರೂಲ್ 28 ರನ್ವಯ ದ್ವಿ–ಲಕೋಟಿ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್‌ನ್ನು ದ್ವಿ–ಲಕೋಟಿ ವಿಧಾನದಲ್ಲಿ ಸಲ್ಲಿಸಬೇಕು.


ಸಾಮಾನ್ಯ ಕಾಮಗಾರಿಗಳು – (02) ಸದರಿ ಕಾಮಗಾರಿಗಳ ಇಂಡೆಂಟ್ ನಂಬರಗಳು : 4409 & 4410. ಟೆಂಡರಿಗಿಟ್ಟ ಇಟ್ಟ ಅಂದಾಜು ಮೊತ್ತವು (ಜಿ.ಎಸ್.ಟಿ. ಹೊರತುಪಡಿಸಿ) ರೂ. 203.34 ಲಕ್ಷ ದಿಂದ ರೂ. 422.01 ಲಕ್ಷಗಳು ಇರುತ್ತವೆ.

ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3, ಗೋಕಾಕ ಕಚೇರಿಯ ಟೆಂಡರ್‌ಗಳನ್ನು ದಿನಾಂಕ : 08–05–2026 ರಿಂದ ದಿನಾಂಕ : 18–05–2026 ರಂದು 16.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ಈ ಕಚೇರಿಯಯಲ್ಲಿ ದಿನಾಂಕ : 14–05–2026, 11.00 ಗಂಟೆಗೆ ಜರುಗಿಸಲಾಗುವದು. ಟೆಂಡರ್ ಕುರಿತು ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯವು ದಿನಾಂಕ : 15–05–2026, 17.00 ಗಂಟೆಯವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ : 18–05–2026 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ದಿನಾಂಕ : 20–05–2026, 11.00 ಗಂಟೆಗೆ ತೆರೆಯಲಾಗುವದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ **https://www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರ್‌ಗಳಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು, (ಪ್ರಭಾರ)
ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3,
ಗೋಕಾಕ.

ಡಿಐಪಿಆರ್/ಬೆಳಗಾವಿ/196/ಮಣಿಪಾಲ್/2026–27



ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನೀಯರರು(ವಿ), ಕಾ ಮತ್ತು ಪಾ ವೃತ್ತ, ಹುವಿಸಕಂನಿ., ನೆಹರು ನಗರ, ಬೆಳಗಾವಿ–590010.
ದೂರವಾಣಿ ಸಂಖ್ಯೆ: 0831–2470351. ಫ್ಯಾಕ್ಸ ಸಂಖ್ಯೆ: 0831–2472493
Website: www.hescom.co.in,
E-Mail ID: seebgm.hescom@gmail.com

CORPORATE IDENTITY NUMBER(CIN): U31401KA2002SGC030437

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಅಧೀಕ್ಷಕ ಇಂಜಿನೀಯರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ., ಬೆಳಗಾವಿ ರವರಿಂದ ಬೆಳಗಾವಿ ವೃತ್ತ ವ್ಯಾಪ್ತಿಯಲ್ಲಿರುವ 33/11 ಕೆವ್ಹಿ ವಿದ್ಯುತ್ ಉಪ ಕೇಂದ್ರಗಳಲ್ಲಿನ ಪಾಳಿ ಕರ್ತವ್ಯಗಳಿಗೆ ಮತ್ತು ಸಣ್ಣ ಪುಟ್ಟ ನಿರ್ವಹಣಾ ಕಾರ್ಯಗಳಿಗೆ/33ಕೆವ್ಹಿ ಮಾರ್ಗಗಳ ನಿರ್ವಹಣೆಗೆ ಸಿಬ್ಬಂದಿಗಳನ್ನು, ಹಾಗೂ ಉಗ್ರಾಣ ಸಹಾಯಕರು/24X7 ಎಚ್‌ಟಿ/ಎಲ್‌ಟಿ ಮಾರ್ಗಗಳ ನಿರ್ವಹಣೆಗೆ ಸಿಬ್ಬಂದಿಗಳನ್ನು/ಲಾರಿ ಚಾಲಕರು/ಭದ್ರತಾ ಸಿಬ್ಬಂದಿಯ ಸೇವೆಗಳನ್ನು ಹೊರಗಿನ ಏಜೆನ್ಸಿಗಳ ಮೂಲಕ **1 ವರ್ಷದ** ಅವಧಿಗೆ ಪಡೆಯಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಸದರಿ ಟೆಂಡರ್‌ಗಳ ಪೂರ್ಣ ವಿವರವನ್ನು ದಿನಾಂಕ: 07.05.2026 ರಂದು ಅಥವಾ ನಂತರ **kppp.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು. ಟೆಂಡರ್‌ಗಳನ್ನು **ದಿನಾಂಕ: 06–06–2026 ರ ಸಾಯಂಕಾಲ 04:00 ಗಂಟೆಯವರೆಗೆ** ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕೆಳ ಸಹಿದಾರರ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಅಧೀಕ್ಷಕ ಅಭಿಯಂತರರು (ವಿ),
ಕಾ ಮತ್ತು ಪಾ ವೃತ್ತ, ಹುವಿಸಕಂನಿ., ಬೆಳಗಾವಿ

ವಾ.ಸಾ.ಇ./ಧಾರವಾಡ/131/ 2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್–05 /2026/1338 ದಿ:04.05.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: **13.05.2026**ರ ಸಂಜೆ **4.00** ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. **(Download)** ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: **0824–2440720**)

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/DK/KSMCA/179/ 26-27 dt. 06.05.2026

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂಮು.ಪ್ರವ್ಯ(ತಾ)/ಉ.ಪ್ರವ್ಯ(ಎಪಿಸಿಸಿ&ಪ್ರೊ)/ಕಾನಿಇಂ–4/ಸ.ಕಾ.ನಿ.ಇಂ–5/2026–27/594–623 ದಿನಾಂಕ:06.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ

ಕವಿಪ್ರನಿನಿ/2026–27/ಎಸ್‌ಎಸ್/ವರ್ಕ್_ಇಂಡೆಂಟ್3608

ಕೆಳಕಂಡ ಕಾಮಗಾರಿಗಳು ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ:

ಕಾಮಗಾರಿ–ಎ:1. ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ 400/220ಕೆವಿ ಗುತ್ತೂರು ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ವಿದ್ಯುತ್ ಶಕ್ತಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

2.0.12ಕಿಮೀ. ಉದ್ದದ 220ಕೆವಿ ಒಂಟಿ ವಿದ್ಯುತ್ ಮಾರ್ಗವನ್ನು ಜೋಡಿ ಗೋಪುರಗಳ ಮೇಲೆ ಡ್ರೇಕ್ ವಾಹಕವನ್ನು ಉಪಯೋಗಿಸಿ ನಿರ್ಮಾಣ ಮಾಡುವ ಕಾಮಗಾರಿ.

3.ಅಸ್ತಿತ್ವದಲ್ಲಿರುವ 400/220ಕೆವಿ ಗುತ್ತೂರು ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ನವೀಕರಣ ಮತ್ತು ಆಧುನೀಕರಣ ಮಾಡುವ ಕಾಮಗಾರಿ.

ಕಾಮಗಾರಿ–ಬಿ: ಗದಗ ಜಿಲ್ಲೆ, ಮುಂಡರಗಿ ತಾಲ್ಲೂಕಿನ 400/220/33ಕೆವಿ ಡೋಣಿ ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT) ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

ಕಾಮಗಾರಿ–ಸಿ: ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕಿನ 400/220ಕೆವಿ GIS/AIS ಹಿರೇಮಲ್ಲನಹೊಳೆ (Jagaluru) ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT) ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

ಕಾಮಗಾರಿ–ಡಿ: ಕಲಬುರಗಿ ಜಿಲ್ಲೆ ಮತ್ತು ತಾಲ್ಲೂಕಿನ **400/220ಕೆವಿ ಫಿರೋಜಾಬಾದ್** ಸ್ವೀಕರಣಾ ಕೇಂದ್ರದಲ್ಲಿ **1x500ಎಂವಿಎ,** 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT)ಶಕ್ತಿ ಪರಿವರ್ತಕವನ್ನು ಮತ್ತು **1X125 ಎಂವಿಎಆರ್ ಹೆಚ್ಚುವರಿ ಬಸ್ ರಿಯಾಕ್ಟರನ್ನು** ಅಳವಡಿಸುವ ಕಾಮಗಾರಿ.

ಕಾಮಗಾರಿ–ಇ: ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ 400/220ಕೆವಿ ದೊಮ್ಮಸಂದ್ರ ಸ್ವೀಕರಣಾ ಕೇಂದ್ರದಲ್ಲಿ 1X125 ಎಂವಿಎಆರ್ ಹೆಚ್ಚುವರಿ ಬಸ್ ರಿಯಾಕ್ಟರನ್ನು ಅಳವಡಿಸುವ ಕಾಮಗಾರಿ.

ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಅಳವಡಿಸುವ (ಕಳಚುವುದು ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 07.05.2026** ರಂದು ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 22.05.2026. @ 15.00 ಗಂಟೆ.**

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ನಿಗಮ ಕಛೇರಿ, 11ನೇ ಮಹಡಿ, ಕವಿಪ್ರನಿನಿ,
ಇಂಧನ ಭವನ, ಎ.ಆರ್.ವೃತ್ತ, ಬೆಂಗಳೂರು–560 009.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) (ಕೆಪಿಪಿ ಪೋರ್ಟಲ್ ಮುಖಾಂತರ)

ಸಂಖ್ಯೆ: ಬೆವಿಕಂ/ಮುಪ್ರವ್ಯ(ಯೋ)/ಉಪ್ರವ್ಯ–1/ಸಪ್ರವ್ಯ–1/ಬಿಸಿ–14/26–27/ಸಿವೈಎಸ್–34

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಸಕ್ರಮಗೊಳಿಸಿದ ಐಪಿ ಸೆಟ್‌ಗಳಿಗೆ 11 ಕೆವಿ ಮಾರ್ಗವನ್ನು ಹಾಗೂ 25 ಕೆವಿಎ ಪರಿವರ್ತಕವನ್ನು ಸ್ಥಾಪಿಸಿ ಮತ್ತು ಎಲ್‌ಟಿ ಮಾರ್ಗಗಳನ್ನು ವಿಸ್ತರಿಸಿ ವಿದ್ಯುತ್ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳಿಗೆ ಶೇಕಡವಾರು ಆಧಾರದಲ್ಲಿ ಭಾಗಶಃ ಗುತ್ತಿಗೆ ಆಧಾರದಲ್ಲಿ (25 ಕೆವಿಎ ಪರಿವರ್ತಕವನ್ನು ಬೆವಿಕಂನಿಂದ ಸರಬರಾಜು ಮಾಡಲಾಗುವುದು) ಈ ಕೆಳಕಂಡ ವಿಚಾರಣಾ ಸಂಖ್ಯೆಗಳಿಗೆ ಟೆಂಡರ್‌ಗಳನ್ನು ಮರು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿಚಾರಣೆ ಸಂಖ್ಯೆ	ಉಪ ವಿಭಾಗದ ಹೆಸರು
1	BESCOM/2025-26/EL/WORK_INDENT878/CALL-2	ಕನಕಪುರ ನಗರ
2	BESCOM/2025-26/EL/WORK_INDENT880/CALL-2	ಯಡಿಯೂರು
3	BESCOM/2025-26/EL/WORK_INDENT881/CALL-2	ಸಾತನೂರು
4	BESCOM/2025-26/EL/WORK_INDENT882/CALL-2	ಬಂಗಾರಪೇಟೆ
5	BESCOM/2025-26/EL/WORK_INDENT889/CALL-2	ಚನ್ನಪಟ್ಟಣ ಗ್ರಾಮೀಣ
6	BESCOM/2025-26/EL/WORK_INDENT890/CALL-2	ತುಮಕೂರು ಗ್ರಾಮೀಣ–2
7	BESCOM/2025-26/EL/WORK_INDENT892/CALL-2	ಗೌರಿಬಿದನೂರು
8	BESCOM/2025-26/EL/WORK_INDENT900/CALL-2	ಹರಿಹರ
9	BESCOM/2025-26/EL/WORK_INDENT908/CALL-2	ತೆಲಗಿ
10	BESCOM/2025-26/EL/WORK_INDENT909/CALL-2	ತಿಪಟೂರು
11	BESCOM/2025-26/EL/WORK_INDENT911/CALL-2	ಹೊಸದುರ್ಗ
12	BESCOM/2025-26/EL/WORK_INDENT913/CALL-2	ಚಿತ್ರದುರ್ಗ ಗ್ರಾಮೀಣ

ಬಿಡ್ ದಸ್ತಾವೇಜುಗಳ ಲಭ್ಯತೆ : 13.05.2026ರ ನಂತರದಲ್ಲಿ. ಬಿಡ್‌ಗೆ ಸಂಬಂಧಿಸಿದ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18.05.2026, 17:00 ಗಂಟೆಯ ಒಳಗೆ. ಬಿಡ್ ಪೂರ್ವಭಾವಿ ಸಭೆಯ ದಿನಾಂಕ : 19.05.2026, 11:00 ಗಂಟೆಗೆ. ಸ್ಥಳ : ಸಭಾ ಕೊಠಡಿ, 3ನೇ ಮಹಡಿ, ಬೆಳಕು ಭವನ, ನಿಗಮ ಕಛೇರಿ, ಕೆ ಆರ್ ವೃತ್ತ, ಬೆವಿಕಂ, ಬೆಂಗಳೂರು–560001. ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 25.05.2026, 15:00 ಗಂಟೆ. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ : 26.05.2026, 15:30 ಗಂಟೆಗೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಬಿಡ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಹುದು ಹಾಗೂ ಅಗತ್ಯ ನೆರವನ್ನು ಪಡೆದುಕೊಳ್ಳಬಹುದು. ಇ–ಪ್ರೊಕ್ಯೂರ್‌ಮೆಂಟ್ ಸಹಾಯ ಸಂಪರ್ಕ ಸಂಖ್ಯೆ: +91–8046010000, +91–8068948777 ಮತ್ತು ಇ ಮೇಲ್: support@eprochelpdesk.com.

ಆಸಕ್ತ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಬಿಡ್‌ದಾರರು ಕಛೇರಿ ಕೆಲಸದ ಸಮಯದಲ್ಲಿ ಸಹಾಯಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/–ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ) ಯೋಜನೆಗಳು, ಬೆವಿಕಂ.
ಇ ಮೇಲ್: cgmproject.bescom@gmail.com

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಚಿನ್ನದ ಹರಾಜಿನ ನೋಟಿಸ್

ಬಜಾಜ್ ಫೈನಾನ್ಸ್ ಲಿಮಿಟೆಡ್ ("BFL");
ರಿಜಿಸ್ಟರ್ಡ್ ಆಫೀಸ್: ಮುಂಬೈ – ಪುಣೆ ರೋಡ್, ಅಕುರ್ಡಿ, ಪುಣೆ 411035

BAJAJ FINANCE

ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ ಎಂದರೆ ಈ ಕೆಳಗೆ ಉಲ್ಲೇಖಿಸಿರುವ ಸಾಲಗಾರರಿಗೆ ಇದುವರೆಗೂ ಹಲವು ಸೂಚನೆಗಳನ್ನು ನೀಡಿದರೂ ಸಹ, ಅವರು ಸಾಲವನ್ನು ಮರುಪಾವತಿಸಲು ಅಥವಾ ಅಗತ್ಯ ಮಾರ್ಜಿನ್ ಒದಗಿಸಲು ವಿಫಲರಾಗಿರುವ ಕಾರಣದಿಂದ, ಸಾಲದ ಭದ್ರತೆಗಾಗಿ ಸಾಲಗಾರ (ರು) ನೀಡಿರುವ ಚಿನ್ನವನ್ನು "ಹೇಗಿದೆಯೋ ಹಾಗೆಯೇ" (As is where is basis) ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಂತೆ ಹರಾಜು ಮಾಡಲಾಗುತ್ತಿದೆ.

1. ಸಾರ್ವಜನಿಕ ನೋಟಿಸ್ ನ ಪೂರ್ಣ ವಿವರಗಳನ್ನು ಪಡೆಯಲು QR ಕೋಡ್ ಸ್ಕ್ಯಾನ್ ಮಾಡಿ. (ಚಿನ್ನದ ವಿವರಗಳು & ಒಟ್ಟು ತೂಕ), 2. ಸಂಪೂರ್ಣ ಬಿಡ್ಡರ್ ನಿಯಮಗಳು http://172.30.1.235:3000/?WOUB2QG9WU ನಲ್ಲಿ ಲಭ್ಯವಿದೆ 3. ಬಿಡ್ಡರ್‌ಗಳು ಹರಾಜಿನ ಸಮಯದಲ್ಲಿ ಅಥವಾ ಮೊದಲು ಆನ್‌ಲೈನ್ ವರ್ಗಾವಣೆಯ ಮೂಲಕ ₹25,000/– ಗಳ ಅರ್ನೆಸ್ಟ್ ಮನೀ ಠೇವಣಿ (EMD) ಇಡಬೇಕು; 4. ಗುರುತಿನ ಚೀಟಿ ಮತ್ತು ವಿಳಾಸದ ಮಾನ್ಯ ಪುರಾವೆಯೊಂದಿಗೆ, ಬೆಳಿಗ್ಗೆ 10 ಗಂಟೆಗೆ ಹರಾಜು ಸ್ಥಳದಲ್ಲಿ ವೈಯಕ್ತಿಕ ಹಾಜರಾತಿ, ಕಡ್ಡಾಯವಾಗಿದೆ.

ಹರಾಜು ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು ಹರಾಜು ಕೇಂದ್ರದಲ್ಲಿ ಡಿಸ್‌ಪ್ಲೇ ಮಾಡಲಾಗುತ್ತದೆ. ಬಿಡ್ ಸಲ್ಲಿಸುವಾಗ ಮೇಲಿನ ನಿಯಮಗಳು ಸ್ವೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಯಾವುದೇ ವಿವರಗಳಿಗೆ ಸಂಪರ್ಕಿಸಿ: wecare@bajajfinserv.in

(10-06-26) ಅಜ್ಜಂಪುರ – ಹೊಸದುರ್ಗ ರೋಡ್; PKC4SGL15253971, 17470728, 17769781. ಬಾಗಲ್‌ಕೋಟ್ – ವಿದ್ಯಗಿರಿ; PGC8SGL17661591, 17702375, 17755134, 17794641, 18048192, 18056841, 18049642, 18054405, 18048858, 18046674, 18053307, 18051417, 18050827, 18032826, 18067151, 18297027. ಬೆಂಗಳೂರು – ಎಚ್‌ಎಸ್‌ಆರ್ ಲೇಔಟ್; PEX2SGL12315289. ಬಸವಕಲ್ಯಾಣ್ – ಹರಲಯ್ಯ ಸರ್ಕಲ್; PER8SGL17428228, 17550798, 17626273, 17758690, 17793725. ಬೆಳಗಾಮ್ – ರಾಮ್‌ಲಿಂಗ್ ಖಿಂಡ್ ಗಲ್ಲಿ; PBY3SGL17467496, 17533859. ಬಳ್ಳಾರಿ – ಆರ್‌ಟಿಎಚ್; PBY4SGL17494060, 17760535, 17845298, 17843873, 17846355, 17845573. ಬೀದರ್ – ಅಂಬೇಡ್‌ಕರ್ ಸರ್ಕಲ್; P87QSGL17838516, 18043577, 18083824. ಬಿಜಾಪುರ್ – ಬಾಗಲ್‌ಕೋಟ್ ರೋಡ್; PLE1SGL17727127. (11-06-26) ದೊಡ್ಡಬಳ್ಳಾಪುರ – ಡಿ ಕ್ರಾಸ್ ರೋಡ್; PGH5SGL11987862, 12200643, 17726784, 17954035. ಗೌರಿಬಿದನೂರ್ – ಹಿಂದೂಪುರ ರೋಡ್; PMK3SGL17561942. ಗೋಕಾಕ್ – ಹೊಸ್‌ಪೇಟ್ ಗಲ್ಲಿ; PBZ2SGL17637050, 18037715, 18042158, 18093574, 18216130. ಗುಬ್ಬಿ – ಬಿಎಚ್ ರೋಡ್; POI9SGL17652889. ಗುಲ್‌ಬರ್ಗ – ಜೇವರ್ಗಿ ಬಸ್ ಸ್ಟಾಂಡ್; PMS6SGL17831436, 18022432. ಗುಲ್‌ಬರ್ಗ – ಸೂಪರ್ ಮಾರ್ಕೇಟ್; P12ISGL17960011, 18054193. ಗುಲ್‌ಬರ್ಗ – ಎಸ್‌ವಿಪಿ ಚೌಕ್; PGH6SGL17424262, 17418664, 17446372, 17628774, 17774200. ಹಡಗಲಿ – ಹರಪನಹಳ್ಳಿ ರೋಡ್; PLM6SGL17499124, 17635298, 17688577, 17990714. ಹಗರಿಬೊಮ್ಮನಹಳ್ಳಿ – ಹೊಸ್‌ಪೇಟ್ ರೋಡ್; PKD5SGL17573581, 17697551, 17968260. (12-06-26) ಬಿಜಾಪುರ್ – ಸರಾಫ್ ಬಜಾರ್; PBY6SGL15146421, 15146900, 16254186, 16392769, 17477246, 17548409, 17618481, 17720298, 17723396, 17766981, 17791405, 17792625, 17835045, 17835647, 17873005, 17876974, 17949125, 17963084, 18025295, 18020715, 18075660, 18149676, 18238035. ಬ್ಯಾಡಗಿ – ಬಸ್ ಸ್ಟಾಂಡ್ ಸರ್ಕಲ್; PKO3SGL16642149, 17505188, 17957413. ಚನ್ನಗಿರಿ – ಪಿಡಬ್ಲ್ಯುಡಿ ಶಿಮೋಗಾ ಮೈನ್ ರೋಡ್; PKK2SGL17452772, 17842973. ಚನ್ನರಾಯಪಟ್ಣ – ಕಾಳೇನಹಳ್ಳಿ ರೋಡ್; PLM9SGL17796809, 17948156. ಚಿಕ್ಕಬಳ್ಳಾಪುರ್ – ಬೀರಪ್ಪ ಸ್ಟ್ರೀಟ್; PEO5SGL12174472, 12718234, 12819584, 13162800, 13163281, 13257175, 13903851, 17863355, 18020601. ಚಿತ್ರದುರ್ಗ್ – ಮೇಧೆಹಳ್ಳಿ ರೋಡ್; PBY8SGL17896568. ದಾವಣಗೆರೆ – ಪಿ ಬಿ ರೋಡ್; PNS2SGL17531826, 17728913. ಧಾರವಾಡ್ – ಎನ್‌ಟಿಟಿಎಫ್; PBY9SGL15119713, 17394116, 17878827, 18234528. ಧಾರವಾಡ್ – ಸವದತ್ತಿ ರೋಡ್; PMJ6SGL17575562, 17960979. (15-06-26) ಹಂಗಲ್–ಟಿಜಿ ರೋಡ್; PMJ8SGL16321482, 16475630, 17478733, 17481715, 17658074, 17722510, 17923410, 18232492. ಹರ್ಪನಹಳ್ಳಿ – ಬಿಜಿಎಲ್; PX14SGL17473407, 17754593. ಹಾಸನ್ – ಎನ್‌ಆರ್ ಸರ್ಕಲ್; PEO6SGL15174008, 16590213, 17692042, 17692743, 18092517, 18113689, 18144585. ಹಾವೇರಿ – ಬಸ್ ಸ್ಟಾಂಡ್; PBZ3SGL16370223, 17400104, 17474348, 17636547, 17797549, 17827686, 17861430, 17963413, 17946884. ಹಿರಿಯೂರ್ – ಮೈನ್ ರೋಡ್; PMK6SGL17694613, 17691511. ಹೊಳಕೆರೆ – ಶಿಮೋಗಾ ರೋಡ್; PLP7SGL17757020, 18121299. ಹೊಸದುರ್ಗ – ಹುಲಿಯಾರ್ ರೋಡ್; PEX1SGL17571054, 17631736, 17953055, 18073553, 18236484, 18237365. ಹೊಸ್‌ಕೋಟೆ – ಕೆಈಬಿ ಸರ್ಕಲ್; PLG1SGL17791105, 18119652. (16-06-26) ಹೊಸ್‌ಪೇಟ್ – ಶಾನ್‌ಬಾಗ್ ಸರ್ಕಲ್; PBZ4SGL17397483, 17660885, 17766945. ಹುಬ್ಬಳ್ಳಿ – ವಿಕ್ಟೋರಿಯಾ ರೋಡ್; PBZ5SGL12126087, 17902737. ಹುಲಿಯಾರ್ – ಬಿ ಎಚ್ ರೋಡ್; PLM1SGL17456590, 17670591. ಕಡೂರ್ – ಚೆಕ್ ಪೋಸ್ಟ್ ಸರ್ಕಲ್; PIZ6SGL17571660. ಕನ್ನೂರ್ ಕೆಎ; PET2PRN17831604, 18208746. ಕಾರ್ಕಳ – ಮಾರ್ಕೇಟ್ ರೋಡ್; PNV5SGL17700685, 18006822. ಕಾರ್‌ವಾರ್ – ಬಿಜಿಎಲ್; PNR8SGL17620177, 17636265. ಕೆಂಗೇರಿ – ಎಂಭತ್ತು ಅಡಿ ರಸ್ತೆ; PBZ6SGL12001886, 17391526, 17804008, 17942959, 18124680. (17-06-26) ಕೋಲಾರ್ – ಎಂ ಬಿ ರೋಡ್; PGH7SGL15193730, 17719689. ಕೊಳ್ಳೆಗಲ್ – ವಾಟರ್ ವರ್ಕ್ಸ್ ರೋಡ್; PMS3SGL17477789. ಕೊಟ್ಟೂರ್ – ಮೈನ್ ರೋಡ್; PLN4SGL13854976, 16188520, 16520976, 17619694, 17840472. ಕೂಡ್ಲಿಗಿ – ಹೊಸಳ್ಳಿ ರೋಡ್; PLD9SGL16443318, 17408900, 17451449, 17533544, 17529869, 17836505, 17940938, 18026155, 18138794, 18318186. ಕುಕ್ನೂರ್; PA31PRN17824521. ಲಿಂಗಸುಗೂರ್ – ರಾಯ್‌ಚೂರ್ ರೋಡ್; PBZ7SGL13355208. ಮದ್ದೂರ್ – ಕೊಲ್ಲಿ ಸರ್ಕಲ್; PCZ8SGL18206468. ಮಧುಗಿರಿ – ಟಿವಿವಿ ಸರ್ಕಲ್; PLM7SGL17688605. (18-06-26) ಮಾನ್ವಿ – ಸಿಂಧನೂರ್ ರೋಡ್; PPA6SGL17546126, 17800939, 18151590. ಮೂಡಲಗಿ; P28APRN17654826. ಮೈಸೂರ್ – ನಾರಾಯಣ ಶಾಸ್ತ್ರಿ ರೋಡ್; PGH8SGL17452599. ಮೈಸೂರ್ – ಸರಸ್ವತಿಪುರಂ; PBZ8SGL17697269. ಮೈಸೂರ್ – ವಿವೇಕಾನಂದ ನಗರ್; PED7SGL17955205, 18145454. ನಂಜನ್‌ಗೂಡ್ – ಎಂಜಿಎಸ್ ರೋಡ್; PBZ9SGL17533964, 17533215, 17806735, 17903975, 17905915, 18020776, 18153508. ರಾಯ್‌ಚೂರ್ – ಗಂಜ್ ಮೈನ್ ರೋಡ್; PEP2SGL17457855, 18220545. ರಾಮನಗರ – ರೈಲ್ವೇ ಸ್ಟೇಷನ್ ರೋಡ್; PEH1SGL11686332, 17863276, 18155567, 18222153, 18305644. (19-06-26) ರಾಣೇಬೆನ್ನೂರ್ – ಪಿಬಿ ರೋಡ್; PGI1SGL12312434, 15092106, 16393735, 17403560, 17499069, 17547400, 17580935, 17767138, 17770726, 17998459, 17991045, 18072727, 18121837, 18113746. ಶಾಹಪೂರ್ – ಬಸ್ ಸ್ಟಾಂಡ್ ರೋಡ್; PIZ9SGL17459991, 17723204, 17986954. ಶಿಗ್ಗಾಂವ್ – ಬಸ್ ಸ್ಟಾಂಡ್ ರೋಡ್; PPV1SGL18030606. ಸಿಂಡಗಿ – ವಿಜಯಪುರ್ ರೋಡ್; PET1PRN12791265, 17870833. ತಾಂಬಾ; PET4PRN17546485, 17745098, 17896539, 17987808, 18081102, 18228943. ತಾವರಗೇರಾ; PK46PRN18085497. ತಿಪ್ಟೂರ್ – ಬಿ ಎಚ್ ರೋಡ್; PGO7SGL17565450. ತುಮ್ಕೂರ್ – ಬಿ ಎಚ್ ರೋಡ್; PEL1SGL17546849, 18074715.

ಬಜಾಜ್ ಫೈನಾನ್ಸ್ ಲಿಮಿಟೆಡ್

ಮೃತ್ಯುದೇವತೆ ಚಿತ್ರದ ದೇವಿ ಹಾಡು ಬಿಡುಗಡೆ

• **ಕನ್ನಡಪ್ರಭ** ಸಿನಿವಾರ್ತೆ

ನವೀನ್ ಮಹದೇವ್ ನಿರ್ದೇಶಿಸಿರುವ 'ಮೃತ್ಯುದೇವತೆ' ಚಿತ್ರದ ದೇವಿ ಹಾಡನ್ನು ಹಿರಿಯ ನಿರ್ದೇಶಕ ಓಂ ಸಾಯಿ ಪ್ರಕಾಶ್ ಬಿಡುಗಡೆ ಮಾಡಿದ್ದಾರೆ.

ಟ್ರ್ಯಾಪ್‌ಗೆ ಒಳಗಾದ ಮೂವರು ಹೆಣ್ಣುಮಕ್ಕಳು ಹೇಗೆ ಅದರಿಂದ ಹೊರಗೆ ಬರುತ್ತಾರೆ ಎಂಬ ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ಈ ಚಿತ್ರದ ಮುಖ್ಯ ಪಾತ್ರಗಳಲ್ಲಿ ವಿನಯಾ ಪ್ರಸಾದ್, ಹಿಮಶ್ರೀ, ಸಾರಿಕಾ ರಾವ್ ಹಾಗೂ ಡಯಾನಾ ಅಭಿನಯಿಸಿದ್ದಾರೆ.

ನಿರ್ದೇಶನದ ಜೊತೆ ನಟನೆ ಜವಾಬ್ದಾರಿ ಹೊತ್ತಿರುವ ನವೀನ್ ಮಹದೇವ್ ಅವರು, 'ಸಹನಾಮಯಿ ಹೆಣ್ಣಿನ ಸಹನೆಯ ಕಟ್ಟೆ ಒಡೆದಾಗ ಏನಾಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ಸ್ವಲ್ಪ ಹಾರರ್ ಟಚ್ ಕೂಡ ಇದೆ' ಎಂದರು.

ಅಣ್ಣಯ್ಯ ಖ್ಯಾತಿಯ ಮಾಹೀನ್, ನೃತ್ಯನಿರ್ದೇಶಕ ರಘು, ಗಾಯಕಿ ವೈಷ್ಣವಿ ಇದ್ದರು. ಸರಸ್ವತಿ ಈ ಚಿತ್ರ ನಿರ್ಮಿಸಿದ್ದಾರೆ. ಸೂರ್ಯ, ಪವನ್ ಶೆಟ್ಟಿ, ವರ್ಷಿತಾ ತಾರಾಬಳಗದಲ್ಲಿದ್ದಾರೆ.






14 ವರ್ಷಗಳ ಪ್ರೇಮಕ್ಕೆ ಅಧಿಕೃತ ಅಂಕಿತ

ರಶ್ಮಿಕಾ ಜೊತೆ ಸು ಫ್ರಮ್ ಸೋ ನಿರ್ದೇಶಕ ಜೆಪಿ ತುಮಿನಾಡು ವಿವಾಹ

• **ಕನ್ನಡಪ್ರಭ** ಸಿನಿವಾರ್ತೆ

'ಸು ಫ್ರಮ್ ಸೋ' ಸಿನಿಮಾ ನಿರ್ದೇಶಕ ಜೆ.ಪಿ. ತುಮಿನಾಡ್ ಬಹುಕಾಲದ ಗೆಳತಿ ರಶ್ಮಿಕಾ ಜೊತೆಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಮಂಗಳೂರಿನಲ್ಲಿ ವಿವಾಹ ನಡೆದಿದ್ದು ಸಿನಿಮಾ, ರಂಗಭೂಮಿ ಕ್ಷೇತ್ರದ ಗಣ್ಯರು ಪಾಲ್ಗೊಂಡು ಶುಭ ಹಾರೈಸಿದ್ದಾರೆ.

ಜೆ.ಪಿ. ತುಮಿನಾಡ್ ರಂಗಭೂಮಿಯಲ್ಲಿ ಹುಟ್ಟಿದ ತನ್ನ ಪ್ರೇಮಪ್ರಕರಣವನ್ನು ಈ ಹಿಂದೆ ಪ್ರೇಮಿಗಳ ದಿನದಂದು 'ಕನ್ನಡಪ್ರಭ' ಜೊತೆ ಹಂಚಿಕೊಂಡಿದ್ದರು. ಇದೀಗ 14 ವರ್ಷಗಳ ಪ್ರೇಮಕ್ಕೆ ವಿವಾಹದ ಅಂಕಿತ ಬಿದ್ದಿದೆ. ಸದ್ಯ ತುಳು, ಕನ್ನಡ ಚಿತ್ರಗಳಲ್ಲಿ ಜೆ.ಪಿ. ತುಮಿನಾಡ್ ಸಕ್ರಿಯರಾಗಿದ್ದಾರೆ. ಜೊತೆಗೆ ತನ್ನ ನಿರ್ದೇಶನದ ಹೊಸ ಚಿತ್ರವೊಂದಕ್ಕೆ ಸ್ಕ್ರಿಪ್ಟ್ ಕೆಲಸ ಮಾಡುತ್ತಿದ್ದಾರೆ.



ಎಸ್.ಎಸ್. ರಾಜಮೌಳಿ



15 ಲಕ್ಷ ಲೀ. ನೀರು ಕೇಳಿದ ವಾರಣಾಸಿ ತಂಡ: ಪಾಲಿಕೆ ನಿರಾಕರಣೆ

• **ಕನ್ನಡಪ್ರಭ** ಸಿನಿವಾರ್ತೆ

ಹೈದರಾಬಾದ್‌ನಲ್ಲಿ ನಡೆಯುತ್ತಿದ್ದ ಎಸ್.ಎಸ್. ರಾಜಮೌಳಿ ನಿರ್ದೇಶನದ 'ವಾರಣಾಸಿ' ಸಿನಿಮಾದ ಶೂಟಿಂಗ್ ಸದ್ಯ ನೀರಿನ ಕಾರಣಕ್ಕೆ ಸ್ಥಗಿತಗೊಂಡಿದೆ.

ಹೈದರಾಬಾದ್‌ನ ಗಗನ್‌ಪಹಾಡ್ ಫಿಲಂಸಿಟಿ ಸ್ಟುಡಿಯೋದಲ್ಲಿ ಅಂಡರ್‌ವಾಟರ್ ಶೂಟಿಂಗ್‌ಗೆ ಯೋಜಿಸಲಾಗಿತ್ತು. ಈ ಬಿರು ಬೇಸಿಗೆಯಲ್ಲಿ 10,000 ಲೀಟರ್ ಸಾಮರ್ಥ್ಯದ 150 ವಾಟರ್ ಟ್ಯಾಂಕರ್‌ಗಳಲ್ಲಿ ನೀರು ಪೂರೈಸಲು ಚಿತ್ರತಂಡ ಸ್ಥಳೀಯ ಆಡಳಿತಕ್ಕೆ ಮನವಿ ಮಾಡಿತ್ತು. ಆದರೆ ಸದ್ಯ ಹೈದರಾಬಾದ್‌ನಲ್ಲಿ ತಾಪಮಾನ ವಿಪರೀತ ಏರಿಕೆಯಾಗಿರುವ ಕಾರಣ ಕುಡಿಯುವ ನೀರಿಗೆ ಬೇಡಿಕೆ ಹೆಚ್ಚಿದೆ. ಸಿನಿಮಾ ಸೆಟ್‌ಗೆ 15 ಲಕ್ಷ ಲೀಟರ್‌ನಷ್ಟು ಬೃಹತ್ ಪ್ರಮಾಣದ ನೀರು ಪೂರೈಸಿದರೆ ಜನರು ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆಯನ್ನು ಮನಗಂಡ ಆಡಳಿತಮಂಡಳಿ ನೀರು ಪೂರೈಕೆಗೆ ನಿರಾಕರಿಸಿದೆ.

ಸದ್ಯ ನೀರಿನ ಸಮಸ್ಯೆಯಿಂದ ಚಿತ್ರತಂಡದ ಶೂಟಿಂಗ್ ಪ್ಲಾನ್ ಅಸ್ಥಿರಗೊಂಡಿದೆ. ಶೂಟಿಂಗ್ ಅನ್ನು ಬೇರೆಡೆ ಶಿಫ್ಟ್ ಮಾಡುವುದೋ ಅಥವಾ ಮಳೆಗಾಲ ಬರುವ ತನಕ ಕಾಯುವುದೋ ಎಂಬ ಗೊಂದಲದಲ್ಲಿ ಸಿನಿಮಾತಂಡವಿದೆ ಎಂದು ಮೂಲಗಳು ತಿಳಿಸಿವೆ.

ಎಸ್.ಎಸ್. ರಾಜಮೌಳಿ ನಿರ್ದೇಶನದ ಈ ಸಿನಿಮಾದಲ್ಲಿ ಮಹೇಶ್ ಬಾಬು, ಪ್ರಿಯಾಂಕಾ ಚೋಪ್ರಾ ಮುಖ್ಯಪಾತ್ರದಲ್ಲಿದ್ದಾರೆ.

ಜನ ನಾಯಗನ್ ಟ್ರೇಲರ್‌ನಲ್ಲಿ ವಿಜಯ್ ಹೆಸರು ಘನತೆವೆತ್ತ ಸಿಎಂ ಎಂದು ಉಲ್ಲೇಖ

• **ಕನ್ನಡಪ್ರಭ** ಸಿನಿವಾರ್ತೆ

ವಿಜಯ್ ಮುಖ್ಯಮಂತ್ರಿ ಗಾದಿ ಏರುವುದಕ್ಕೂ ಮೊದಲೇ ಅವರ ನಟನೆಯ 'ಜನನಾಯಗನ್' ಸಿನಿಮಾದ ಟೈಟಲ್ ಕಾರ್ಡ್‌ನಲ್ಲಿ 'ಘನತೆವೆತ್ತ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್' ಎಂಬ ಉಲ್ಲೇಖ ಸೇರಿಸಲಾಗಿದೆ ಎಂದು ವರದಿಯಾಗಿದೆ. ತಮಿಳುನಾಡಿನ ಚಿತ್ರಮಂದಿರಗಳಲ್ಲಿ ಈ ಚಿತ್ರದ ಟ್ರೇಲರ್ ಅನ್ನು ತೋರಿಸಲಾಗಿದ್ದು, ಅದರಲ್ಲಿ ವಿಜಯ್ ಅವರ ಹೊಸ ಪದವಿ ನೋಡಿ ಅಭಿಮಾನಿಗಳು ಹುಚ್ಚೆದ್ದು ಕುಣಿದಿದ್ದಾರೆ. ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಹೀರೋ ಹೆಸರಿನ ಮುಂದೆ ಮುಖ್ಯಮಂತ್ರಿ ಹುದ್ದೆ ಕಾಣಿಸಿಕೊಂಡಿರುವುದು ಇದೇ ಮೊದಲು ಎನ್ನಲಾಗಿದೆ.

ಶೀಘ್ರ 'ಜನ ನಾಯಗನ್' ಸಿನಿಮಾ ಬಿಡುಗಡೆಯ ಹೊಸ ದಿನಾಂಕ ಘೋಷಣೆ ಆಗುವ ಸಾಧ್ಯತೆ ಇದೆ. ಹೆಚ್ ವಿನೋದ್ ನಿರ್ದೇಶನದ ಈ ಚಿತ್ರವನ್ನು ಕೆವಿಎನ್ ಸಂಸ್ಥೆ ನಿರ್ಮಿಸಿದೆ.

ಅಭಿಮಾನಿಗಳ ಸಂಭ್ರಮ ಜೋರು



ಶ್ರೀಮತಿ ಸಿಂಧೂರ ಟೀಸರ್ ಬಿಡುಗಡೆ

• **ಕನ್ನಡಪ್ರಭ** ಸಿನಿವಾರ್ತೆ

ವಿಜಯರಾಘವೇಂದ್ರ ನಟನೆಯ 'ಶ್ರೀಮತಿ ಸಿಂಧೂರ' ಚಿತ್ರದ ಟೀಸರ್ ಹಾಗೂ ಆಡಿಯೋ ಇತ್ತೀಚೆಗೆ ಬಿಡುಗಡೆ ಆಗಿದೆ. ಉದ್ಯಮಿ ಡಿ.ಎನ್. ನಾಗಿರೆಡ್ಡಿ ಕತೆ ಬರೆದು ನಿರ್ಮಿಸಿರುವ, ಆರ್.ಅನಂತರಾಜು ನಿರ್ದೇಶನದ ಚಿತ್ರವಿದು. ಪ್ರಿಯಾ ಹೆಗಡೆ ಚಿತ್ರದ ನಾಯಕಿ. ವಿಜಯರಾಘವೇಂದ್ರ, 'ಹೊಡಿ-ಬಡಿ, ಹಾರರ್, ಥ್ರಿಲ್ಲರ್ ಚಿತ್ರಗಳ ನಡುವೆ ಅಪ್ಪಟ ಕೌಟುಂಬಿಕ ಕತೆಯನ್ನು ಮನಸ್ಸಿಗೆ ಮುಟ್ಟುವಂತೆ ಹೇಳುವ ಸಿನಿಮಾ ಇದು' ಎಂದರು.



ಇತರೆ

ಸುದ್ದಿ ಸಿಂಚನ

ಇ-ಸ್ವತ್ತು ನೀಡಲು ಲಂಚ: ಗ್ರಾಪಂ ಕಾರ್ಯದರ್ಶಿ ಸೇರಿ ಮೂವರು ಲೋಕಾ ಬಲೆಗೆ

ಕೊಪ್ಪಳ: ಇ-ಸ್ವತ್ತು ನೀಡುವುದಕ್ಕಾಗಿ ₹75 ಸಾವಿರ ಲಂಚ ಸ್ವೀಕರಿಸುವ ವೇಳೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸೇರಿ ಮೂವರನ್ನು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಕೋಳೂರು ಗ್ರಾಪಂ ಕಾರ್ಯದರ್ಶಿ ಮರಿಯಪ್ಪ, ಬಿಲ್ ಕಲೆಕ್ಟರ್ ನಾಗರಾಜ ಹಾಗೂ ದಿನಗೂಲಿ ನೌಕರ ಮಾರುತಿ ಇ-ಸ್ವತ್ತು ದಾಖಲೆ ನೀಡುವುದಕ್ಕಾಗಿ ₹75 ಸಾವಿರ ಲಂಚ ಕೇಳಿದ ಕುರಿತು ಜ್ಞಾನೇಶ್ವರ ಅವರು ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು.

ಹೈಕಮಾಂಡ್‌ನವ್ರು ಹೇಳೋವರೆಗೂ ನಾನೇ ಮುಖ್ಯಮಂತ್ರಿ: ಸಿದ್ದು

↙ ಮೊದಲ ಪುಟದಿಂದ

ಅವರು ನನ್ನನ್ನು ಕರೆದರೆ ಖಂಡಿತವಾಗಿಯೂ ಹೋಗುತ್ತೇನೆ. ಅಪಾಯಿಂಟ್‌ಮೆಂಟ್ ಫಿಕ್ಸ್ ಆದ ಮೇಲೆ ಸಂಪುಟ ಪುನಾರಚನೆಯಾ?, ಸಂಪುಟ ವಿಸ್ತರಣೆಯಾ?, ಯಾವ ವಿಷಯದ ಚರ್ಚೆ ಎಂಬುದು ಗೊತ್ತಾಗಲಿದೆ. ನಾನಾಗಿಯೇ ಹೋಗಬೇಕಾದಲ್ಲಿ ರಾಹುಲ್ ಅವರು ಸಮಯ ಕೊಟ್ಟಾಗ ಹೋಗುವೆ. ಅವರು ನನ್ನನ್ನು ಕರೆದೇ ಇಲ್ಲ ಎಂದ ಮೇಲೆ ಸಭೆಯ ಅಜೆಂಡಾ ಫಿಕ್ಸ್ ಆಗುವುದು ಹೇಗೆ?. ಅವರು ಕರೆದರೆ ಮಾತ್ರ ನಾನು ಹೋಗುವುದು. ಸದ್ಯಕ್ಕಂತೂ ದೆಹಲಿ ಪ್ರವಾಸ ಇಲ್ಲ' ಎಂದು ಹೇಳಿದರು. 'ಸಿಎಂ ಕುರ್ಚಿಯ ವಿಚಾರಕ್ಕೆ ತೆರೆ ಬೀಳುತ್ತದೆಯೇ?' ಎಂಬ ಪ್ರಶ್ನೆಗೆ, 'ಹೈಕಮಾಂಡ್ ತೀರ್ಮಾನಿಸಬೇಕು, ಅದರಂತೆ ನಡೆದುಕೊಳ್ಳುತ್ತೇನೆ' ಎಂದರು.

ಬಂಗಾಳ ಬಿಜೆಪಿ ಗೆಲುವಿನ ಹಿಂದೆ ಕನ್ನಡಿಗನ ಪಾತ್ರ!

↙ ಮೊದಲ ಪುಟದಿಂದ

ಅದು ಇದೀಗ ಉತ್ತಮ ಫಲಿತಾಂಶದ ರೂಪದಲ್ಲಿ ಪ್ರತಿಫಲಿಸಿದೆ.

ಹಿಂದೆಯೂ ಸಂಘಟನೆ: ಅರುಣ್ ಅವರ ಸಾಧನೆ ಕೇವಲ ಬಂಗಾಳಕ್ಕೆ ಸೀಮಿತವಾಗಿಲ್ಲ. 2019ರ ಲೋಕಸಭಾ ಚುನಾವಣೆ ವೇಳೆ ಕಲಬುರಗಿ ಕ್ಷೇತ್ರದಲ್ಲಿನ ಪಕ್ಷದ ಗೆಲುವಿನಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಕೆಲಸ ಬಿಟ್ಟು ದೇಶಸೇವೆ: ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕಿನ ಕೊಟ್ಟಿಗೆಹಾರ ಸಮೀಪದ ಬಿನ್ನಡಿ ಗ್ರಾಮದ ಯುವಕ ಅರುಣ್ ಅವರು ವೃತ್ತಿಯಲ್ಲಿ ಪ್ರತಿಭಾವಂತ ಎಂಜಿನಿಯರ್. ಆರಂಭದಲ್ಲಿ ಕೈತುಂಬಾ ಸಂಬಳ ಬರುವ ಖಾಸಗಿ ಕಂಪನಿಯಲ್ಲಿ ಕೆಲಸದಲ್ಲಿದ್ದರು. ಆದರೆ, ದೇಶಸೇವೆ ಮತ್ತು ರಾಷ್ಟ್ರೀಯ ಸಿದ್ಧಾಂತದ ಮೇಲಿದ್ದ ಅತೀವ ಆಸಕ್ತಿಯಿಂದಾಗಿ ಆ ಉದ್ಯೋಗವನ್ನು ತ್ಯಜಿಸಿ, ಸಕ್ರಿಯ ರಾಜಕೀಯ ಸಂಘಟನೆಗೆ ಇಳಿದಿದ್ದರು.

ತವರಲ್ಲಿ ಸನ್ಮಾನ: ಬಂಗಾಳದ ಯಶಸ್ಸಿನ ಬಳಿಕ ತವರು ಗ್ರಾಮ ಬಿನ್ನಡಿಗೆ ಆಗಮಿಸಿದ ಅರುಣ್‌ರನ್ನು ಸ್ಥಳೀಯ ಬಿಜೆಪಿ ಕಾರ್ಯಕರ್ತರು ಮತ್ತು ಗ್ರಾಮಸ್ಥರು ಬುಧವಾರ ಸನ್ಮಾನಿಸಿದ್ದಾರೆ.

ಬೆಂಗ್ಳೂರಲ್ಲಿ ನಡೆಯಲ್ಲ ಐಪಿಎಲ್ ಫೈನಲ್

↙ ಮೊದಲ ಪುಟದಿಂದ

ಇದರ ಪ್ರಕಾರ, 2025ರಲ್ಲಿ ಚಾಂಪಿಯನ್ ಆಗಿದ್ದ ಆರ್‌ಸಿಬಿ ತಂಡದ ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಬಾರಿ ಫೈನಲ್ ನಡೆಯಬೇಕಿತ್ತು. ಅಲ್ಲದೆ, ಕ್ವಾಲಿಫೈಯರ್ ಅಥವಾ ಎಲಿಮಿನೇಟರ್ ಪಂದ್ಯಕ್ಕೂ ಬೆಂಗಳೂರು ಆತಿಥ್ಯ ವಹಿಸಬೇಕಿತ್ತು. ಆದರೆ ಕಾರಣಾಂತರಗಳಿಂದ ಬೆಂಗಳೂರಿನಲ್ಲಿ ಪಂದ್ಯ ನಡೆಸದಿರುವ ಬಿಸಿಸಿಐ ನಿರ್ಧರಿಸಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಬಿಸಿಸಿಐ, 'ಫೈನಲ್ ಪಂದ್ಯವನ್ನು ಆಯೋಜಿಸಲು ಬೆಂಗಳೂರನ್ನು ಆಯ್ಕೆ ಮಾಡಬೇಕಿತ್ತು. ಆದರೆ ಕೆಎಸ್‌ಸಿಎ ಹಾಗೂ ಅಧಿಕಾರಿಗಳ ಕೆಲ ಬೇಡಿಕೆ ಪೂರೈಸುವುದು ಬಿಸಿಸಿಐನ ಮಾರ್ಗಸೂಚಿ ಹಾಗೂ ಶಿಷ್ಟಾಚಾರದ ವ್ಯಾಪ್ತಿಯನ್ನು ಮೀರುವುದರಿಂದಾಗಿ ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಸ್ಥಳಾಂತರಿಸಲಾಗಿದೆ' ಎಂದು ಸ್ಪಷ್ಟಪಡಿಸಿದೆ.

ಮೇ 24ರಂದು ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಳ್ಳಲಿದ್ದು, ಮೇ 26ರಂದು ಧರ್ಮಶಾಲಾ ಕ್ರೀಡಾಂಗಣದಲ್ಲಿ ಕ್ವಾಲಿಫೈಯರ್-1 ಪಂದ್ಯ ನಡೆಯಲಿದೆ. ಬಳಿಕ ನವ ಚಂಡೀಗಢದ ಮುಲ್ಲಾನ್‌ಪುರ ಕ್ರೀಡಾಂಗಣದಲ್ಲಿ ಮೇ 27ರಂದು ಎಲಿಮಿನೇಟರ್, ಮೇ29ಕ್ಕೆ ಕ್ವಾಲಿಫೈಯರ್-2 ಪಂದ್ಯ ನಡೆಯಲಿದೆ ಎಂದು ಬಿಸಿಸಿಐ ಮಾಹಿತಿ ನೀಡಿದೆ.

ಆಸನ ಸಾಮರ್ಥ್ಯ ಹೆಚ್ಚು: ಬಿಸಿಸಿಐ ಮೂಲಗಳ ಪ್ರಕಾರ, ಕ್ರೀಡಾಂಗಣದ ಆಸನ ಸಾಮರ್ಥ್ಯದ ಕಾರಣಕ್ಕೆ ಬೆಂಗಳೂರು ಬದಲು ಅಹಮದಾಬಾದ್ ಕ್ರೀಡಾಂಗಣಕ್ಕೆ ಫೈನಲ್ ಪಂದ್ಯ ಸ್ಥಳಾಂತರಿಸಲಾಗಿದೆ. ಚಿನ್ನಸ್ವಾಮಿಯಲ್ಲಿ 35000 ಆಸನ ಸಾಮರ್ಥ್ಯವಿದೆ. ಆದರೆ ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣ ಎನಿಸಿಕೊಂಡಿರುವ ಅಹಮದಾಬಾದ್ 132000 ಆಸನ ಸಾಮರ್ಥ್ಯ ಹೊಂದಿದೆ.

ಶಾಸಕರ ಟಿಕೆಟ್‌ಗೂ ಐಪಿಎಲ್ ಸ್ಥಳಾಂತರಕ್ಕೂ ನಂಟಿಲ್ಲ: ಡಿಕೆಶಿ

ದೊಡ್ಡ ಸ್ಟೇಡಿಯಂ ಇದೆ ಅಂತ ಗುಜರಾತಿನ ಅಹಮದಾಬಾದ್‌ಗೆ ಶಿಫ್ಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ಶಾಸಕರಿಗೆ ಐಪಿಎಲ್ ಉಚಿತ ಟಿಕೆಟ್ ವಿತರಣೆಗೂ ಐಪಿಎಲ್ ಅಂತಿಮ ಪಂದ್ಯ ಸ್ಥಳಾಂತರಕ್ಕೂ ಸಂಬಂಧವಿಲ್ಲ. ಅಹಮದಾಬಾದ್‌ನಲ್ಲಿ ದೊಡ್ಡ ಕ್ರೀಡಾಂಗಣವಿದ್ದು, ಹೆಚ್ಚು ಜನ ಸೇರುತ್ತಾರೆಂಬ ಉದ್ದೇಶದಿಂದ ಸ್ಥಳಾಂತರಿಸಲಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದ್ದಾರೆ.



ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಹಮದಾಬಾದ್‌ನಲ್ಲಿ ಹೆಚ್ಚು ಜನ ಸೇರುತ್ತಾರೆ ಎಂಬ ಉದ್ದೇಶದಿಂದ ಐಪಿಎಲ್ ಫೈನಲ್ ಪಂದ್ಯವನ್ನು ಸ್ಥಳಾಂತರ ಮಾಡಿರಬೇಕು. ಶಾಸಕರಿಗೆ ಟಿಕೆಟ್ ವಿತರಣೆಗೂ ಅಂತಿಮ ಪಂದ್ಯ ಸ್ಥಳಾಂತರಕ್ಕೂ ಸಂಬಂಧವಿಲ್ಲ ಎಂದರು.

ಶಾಸಕರಿಗೆ ಐಪಿಎಲ್ ಟಿಕೆಟ್ ಬೇಡಿಕೆ ಹಿನ್ನೆಲೆಯಲ್ಲೇ ಸ್ಥಳಾಂತರಿಸಲಾಗಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, 'ಬೇರೆಕಡೆ ಶೇ. 50ರಷ್ಟು ಟಿಕೆಟ್ ಮೀಸಲಿರುತ್ತದೆ' ಎಂದು ಹೇಳಿದರು.

ಟಿಕೆಟ್ ವಿಚಾರಕ್ಕೆ ಸ್ಥಳಾಂತರ ನಿರ್ಧಾರ ಮಾಡಿದ್ದೇವೆ ಎಂದು ಬಿಸಿಸಿಐ ಹೇಳಿಕೆ ನೀಡಿದೆ ಎಂಬ ಬಗ್ಗೆ ಮಾತನಾಡಿ, 'ಅವರು ಈ ರೀತಿ ಹೇಳಿಕೆ ನೀಡಲಿ, ನಾನು ಅದಕ್ಕೆ ಸರಿಯಾದ ಉತ್ತರ ಕೊಡುತ್ತೇನೆ' ಎಂದರು.

ಐಪಿಎಲ್ ಫೈನಲ್ ಕೈತಪ್ಪಿದ್ದಕ್ಕೆ ಶಾಸಕರೇ ಕಾರಣ: ನಿಖಿಲ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿವಿಐಪಿ ಪಾಸ್‌ಗಳ ಹಪಾಹಪಿ, ಶಾಸಕರ ಉಚಿತ ಟಿಕೆಟ್ ವ್ಯಾಮೋಹದಿಂದಾಗಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್ ಪಾಲಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ರಾಜ್ಯದ ನಾಯಕರಿಗೆ ಅಭಿನಂದನೆಗಳು. ತಮ್ಮ ವಿವಿಐಪಿ ಪಾಸ್‌ಗಳ ಹಪಾಹಪಿಯಿಂದಾಗಿ, ನಮ್ಮೂರಿನಲ್ಲಿ ನಡೆಯಬೇಕಿದ್ದ ಫೈನಲ್ ಪಂದ ಅಹಮದಾಬಾದ್‌ಗೆ ಉಡುಗೊರೆಯಾಗಿ ನೀಡಿದ್ದೀರಿ ಎಂದು ವ್ಯಂಗ್ಯವಾಡಿದ್ದಾರೆ. ವ್ಯಾಮೋಹ ದಿಂದಾಗಿ ಬೆಂಗಳೂರಿನಿಂದ ಕೈತಪ್ಪಿದೆ ಎಂದು ಬೇಸರಿಸಿದರು.

ಅಮೆರಿಕ-ಇರಾನ್ ಡೀಲ್ ಈಗ ಸನ್ನಿಹಿತ: 2 ದಿನದಲ್ಲಿ ಸಂಧಾನ?

↙ ಮೊದಲ ಪುಟದಿಂದ

ಇಲ್ಲದಿದ್ದರೆ ಬಾಂಬ್ ದಾಳಿ ಪ್ರಾರಂಭವಾಗುತ್ತದೆ. ದುಃಖಕರವೆಂದರೆ, ಮೊದಲಿಗಿಂತ ಹೆಚ್ಚಿನ ತೀವ್ರತೆಯಲ್ಲಿ ಇರುತ್ತದೆ' ಎಂದಿದ್ದಾರೆ. ಇದಕ್ಕೂ ಮುನ್ನ ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ, ಮಾತನಾಡಿ 'ಯುದ್ಧ ಕಾರ್ಯಾಚರಣೆ ಮುಗಿದಿದೆ' ಎಂದಿದ್ದಾರೆ. ಆದರೆ ಭವಿಷ್ಯದಲ್ಲೂ ಯುದ್ಧ ಮಾಡುವುದಿಲ್ಲವೆ ಎಂಬುದಕ್ಕೆ ಉತ್ತರಿಸಲು ನಿರಾಕರಿಸಿದ್ದಾರೆ.



ಒಪ್ಪಂದ ಏನು?: 'ಎರಡೂ ಕಡೆಯವರು ಯುದ್ಧವನ್ನು ಕೊನೆಗೊಳಿಸಲು ಮತ್ತು ಹೆಚ್ಚು ವಿವರವಾದ ಪರಮಾಣು ಮಾತುಕತೆಗಳಿಗೆ ಚೌಕಟ್ಟನ್ನು ರೂಪಿಸಲು 1 ಪುಟದ ಒಪ್ಪಂದ ಪತ್ರಕ್ಕೆ ಒಪ್ಪಿಗೆ ಸೂಚಿಸುವ ಹಂತಕ್ಕೆ ಬಂದಿದ್ದಾರೆ. ಈ ಒಪ್ಪಂದವು, ಇರಾನ್ ಪರಮಾಣು ಸಂಸ್ಕರಣೆಯನ್ನು ನಿಲ್ಲಿಸುವ ಮತ್ತು ಅಮೆರಿಕವು ತಾನು ಹಿಡಿದಿಟ್ಟುಕೊಂಡಿರುವ ಇರಾನ್‌ನ ಶತಕೋಟಿ ಡಾಲರ್‌ಗಳಷ್ಟು ಹಣವನ್ನು ಬಿಡುಗಡೆ ಮಾಡುವ ಅಂಶಗಳನ್ನು ಒಳಗೊಂಡಿರಲಿದೆ' ಎಂದು ಆಕ್ಸಿಯೋಂ ವರದಿ ತಿಳಿಸಿದೆ.

ಪ್ರಾಜೆಕ್ಟ್ ಫ್ರೀಡಂ ಸ್ಥಗಿತ: 'ಹೋರ್ಮುಜ್‌ನಲ್ಲಿ ಸಂಚರಿಸುವ ಎಲ್ಲಾ ಹಡಗುಗಳಿಗೆ ನೀಡಿದ್ದ ರಕ್ಷಣೆಯನ್ನು (ಪ್ರಾಜೆಕ್ಟ್ ಫ್ರೀಡಂ) ಪಾಕಿಸ್ತಾನದ ಮನವಿಯ ಮೇರೆಗೆ ಸ್ಥಗಿತಗೊಳಿಸಿದ್ದೇವೆ. ಇರಾನ್ ಜತೆ ಮಾತುಕತೆ ಪ್ರಗತಿ ಸಾಧಿಸಿರುವ ಕಾರಣ ಈ ಕ್ರಮ ಜರುಗಿಸಿದ್ದೇವೆ. ಆದರೆ ಹೋರ್ಮುಜ್ ಮೇಲೆ ವಿಧಿಸಿರುವ ನಿರ್ಬಂಧ ಮುಂದುವರಿಯುತ್ತದೆ' ಎಂದೂ ಟ್ರಂಪ್ ಹೇಳಿದ್ದಾರೆ.

ಹೋರ್ಮುಜ್ ಮೇಲಿನ ನಿಯಂತ್ರಣಕ್ಕಾಗಿ ಅಮೆರಿಕ ಮತ್ತು ಇರಾನ್ ನಡುವೆ ಜಟಾಪಟಿ ಮುಂದುವರಿಯುತ್ತಿರುವ ನಡುವೆಯೇ, ಜಲಸಂಧಿಯ ಮೂಲಕ ಸಂಚರಿಸುವ ಎಲ್ಲ ದೇಶಗಳ ಹಡಗುಗಳಿಗೆ ರಕ್ಷಣೆ ನೀಡುವುದಾಗಿ ಅಮೆರಿಕ ಘೋಷಿಸಿತ್ತು. ಈ ಮೂಲಕ ಇರಾನ್‌ಗೆ ನೇರಾನೇರ ಸಡ್ಡು ಹೊಡೆದಿತ್ತು. ಇದು ಶಾಂತಿ ಸಂಧಾನಕ್ಕೆ ಅಡ್ಡಿ ಆಗಿತ್ತು.

6-7ನೇ ಶತಮಾನದ ಬಂಡೆಗಲ್ಲು ಶಾಸನ ಬಳ್ಳಾರಿ ಹೊಲದಲ್ಲಿ ಪತ್ತೆ

ತೆಕ್ಕಲಕೋಟೆ (ಬಳ್ಳಾರಿ): 6ರಿಂದ 7ನೇ ಶತಮಾನಕ್ಕೆ ಸೇರಿದ ಅಪ್ರಕಟಿತ ಬಂಡೆಗಲ್ಲು ಶಾಸನವೊಂದು ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲೂಕಿನ ತೆಕ್ಕಲಕೋಟೆಯ ನಿಟ್ಟೂರಿನ ಹೊಲದಲ್ಲಿ ಪತ್ತೆಯಾಗಿದೆ.

ನಿಟ್ಟೂರಿನಲ್ಲಿರುವ ಅಶೋಕನ ಶಿಲಾ ಶಾಸನ ಪತ್ತೆ ಆದ ಸ್ಥಳದಿಂದ 1 ಕಿ.ಮೀ. ದೂರದಲ್ಲಿರುವ ಬಂಡೆಗಲ್ಲು ಶಾಸನವನ್ನು ಸಂಶೋಧನಾರ್ಥಿಗಳಾದ ಅಶೋಕ್ ಅಬಕಾರಿ, ಮನೋಹರ ಗುರುತಿಸಿ, ಕ್ಷೇತ್ರ ಅಧ್ಯಯನಕ್ಕೆ ಧಾರವಾಡದ ಲಿಪಿತಜ್ಞ ಮಾರುತಿ ಭಜಂತ್ರಿ, ಹಿರೇಬೆಣಕಲ್ ಮಂಜುನಾಥ ದೊಡ್ಡಮನಿ ಗಮನಕ್ಕೆ ತಂದರು. ಶಾಸನವು ಬೃಹತ್ ಆಕಾರದ ಬಂಡೆಯೊಂದರ ಮೇಲೆ ಪ್ರಾಚೀನ ಲಿಪಿಯಲ್ಲಿ ಬರೆಯಲ್ಪಟ್ಟಿದ್ದು,



ಶಾಸನವು ಸುಮಾರು ಏಳುಸಾಲುಗಳನ್ನು ಒಳಗೊಂಡಿದೆ. ಮೌರ್ಯರ ಆಳ್ವಿಕೆಯನ್ನು ಒಳಗೊಂಡಿರುವ ಪ್ರದೇಶವೆಂದು ಗುರುತಿಸಲಾಗಿತ್ತು. ಸದ್ಯ ಪತ್ತೆಯಾಗಿರುವ ಶಾಸನದ ಲಿಪಿಯ ಆಧಾರದಲ್ಲಿ ಸುಮಾರು 6ರಿಂದ 7ನೇ ಶತಮಾನದ ಬಾದಾಮಿ ಚಾಲುಕ್ಯರ ಕಾಲದಿಂದ ರಾಷ್ಟ್ರಕೂಟರ ಕಾಲಘಟ್ಟಕ್ಕೆ ಸೇರಿದ್ದೆಂದು ಅಂದಾಜಿಸಲಾಗಿದೆ.

ಮ್ಯಾಜಿಕ್ ಮಾಡಿದ ನಟಗೆ ಮ್ಯಾಜಿಕ್ ಸಂಖ್ಯೆ ಸಿಗುತ್ತಾ?

↙ ಮೊದಲ ಪುಟದಿಂದ

ಆದರೆ ಇನ್ನೂ 6 ಶಾಸಕರ ಬೆಂಬಲದ ಕೊರತೆ ಟಿವಿಕೆಗೆ ಇದೆ. ಇದನ್ನು ಗಮನಿಸಿದ ರಾಜ್ಯಪಾಲರು, '118 ಶಾಸಕರ ಬೆಂಬಲದೊಂದಿಗೆ ಬನ್ನಿ' ಎಂದಿದ್ದಾರೆ ಎನ್ನಲಾಗಿದೆ. ಹೀಗಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸುವ ವಿಜಯ್ ಆಸೆ ಭಗ್ನವಾಗಿದೆ ಎನ್ನಲಾಗಿದೆ.

ಇದನ್ನು ಪ್ರಶ್ನಿಸಿರುವ ಕಾಂಗ್ರೆಸ್, 'ಏಕೈಕ ದೊಡ್ಡ ಪಕ್ಷವಾದ ಟಿವಿಕೆಗೆ ರಾಜ್ಯಪಾಲರು ಆಹ್ವಾನ ನೀಡಬೇಕು. ಬಲಾಬಲ ಪ್ರದರ್ಶನ ಸದನದಲ್ಲಿ ನಡೆಯಬೇಕೇ ವಿನಾ ರಾಜಭವನದಲ್ಲಿ ಅಲ್ಲ. ಅದು ಬಿಟ್ಟು ಉದ್ದೇಶಪೂರ್ವಕವಾಗಿ ಅಡ್ಡಿ ಮಾಡುವುದು ಸಲ್ಲದು' ಎಂದಿದೆ.

ಬಲಾಬಲ ಹೇಗೆ?: ಇತ್ತೀಚೆಗೆ ನಡೆದ ತಮಿಳುನಾಡು ವಿಧಾನಸಭೆಯ 234 ಸ್ಥಾನಗಳಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದುಕೊಂಡಿದೆ. ವಿಜಯ್ 2 ಸ್ಥಾನದಲ್ಲಿ ಗೆದ್ದ ಕಾರಣ ಅದರ ವಾಸ್ತವಿಕ ಬಲ 107. ಸರ್ಕಾರ ರಚಿಸಲು 118 ಸ್ಥಾನಗಳು ಬೇಕಿದ್ದು, 11 ಶಾಸಕರ ಕೊರತೆ ಎದುರಿಸುತ್ತಿದೆ. ಬುಧವಾರ ಕಾಂಗ್ರೆಸ್‌ನ 5 ಶಾಸಕರ ಬೆಂಬಲದೊಂದಿಗೆ ಟಿವಿಕೆ ಬಲ 112ಕ್ಕೇರಿದೆ.


ಟಿವಿಕೆಯ108 ಹಾಗೂ ಕಾಂಗ್ರೆಸ್‌ನ 5 ಶಾಸಕರನ್ನು ಹೊರತುಪಡಿಸಿದರೆ ಡಿಎಂಕೆ 59, ಎಐಎಡಿಎಂಕೆ 47, ಪಿಎಂಕೆ 4, ಐಯುಎಂಎಲ್ 2, ಸಿಪಿಐ 2, ವಿಸಿಕೆ 2, ಸಿಪಿಐ-ಎಂ 2. ಬಿಜೆಪಿ, ಡಿಎಂಡಿಕೆ ಮತ್ತು ಎಎಂಎಂಕೆ ತಲಾ 1 ಸ್ಥಾನ ಹೊಂದಿವೆ.

ಕಗ್ಗಂಟು ಆಗಿದ್ದು ಇಲ್ಲಿ: ಟಿವಿಕೆಗೆ ಕಾಂಗ್ರೆಸ್‌ನ 5 ಶಾಸಕರು ಬೆಂಬಲ ನೀಡಿದ್ದರೂ ಬಹುಮತಕ್ಕೆ ಇನ್ನೂ 6 ಶಾಸಕರು ಬೇಕು. ಆದರೆ ಬೆಂಬಲ ನೀಡಲು ಕಾಂಗ್ರೆಸ್ + ಡಿಎಂಕೆ ಕೂಟದ ಪಕ್ಷಗಳಾದ ಎಡರಂಗದ 4 ಹಾಗೂ ಮುಸ್ಲಿಂ ಲೀಗ್‌ನ (ಐಯುಎಂಎಲ್) 2 (ಒಟ್ಟು 6) ಶಾಸಕರು ನಿರಾಕರಿಸಿದ್ದಾರೆ. ಇನ್ನು 2 ಶಾಸಕರನ್ನು ಹೊಂದಿರುವ ವಿಸಿಕೆ ಇದುವರೆಗೆ ನಿರ್ಧಾರ ಪ್ರಕಟಿಸಿಲ್ಲ. ಹೀಗಾಗಿ ಸರ್ಕಾರ ರಚಿಸಲು ವಿಜಯ್‌ಗೆ ಭಾರೀ ಕಗ್ಗಂಟು ಎದುರಾಗಿದೆ.

ದೀದಿ ರಾಜೀನಾಮೆಯೋ, ಡಿಸ್‌ಮಿಸ್ಸೋ?: ಸಸ್ಪೆನ್ಸ್

↙ ಮೊದಲ ಪುಟದಿಂದ

9ಕ್ಕೆ ಬ್ರಿಗೇಡ್ ಮೈದಾನದಲ್ಲಿ ಶಪಥ: ಈ ನಡುವೆ, ಬುಧವಾರ ಮಾತನಾಡಿದ ಪ. ಬಂಗಾಳ ಬಿಜೆಪಿ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ, 'ಹೊಸ ಮುಖ್ಯಮಂತ್ರಿಯ ಪ್ರಮಾಣವಚನ ಸ್ವೀಕಾರ ಸಮಾರಂಭವು ಮೇ9ರಂದು ನಡೆಯಲಿದೆ. ಕೋಲ್ಕತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೆಳಿಗ್ಗೆ 10ರಿಂದ ಕಾರ್ಯಕ್ರಮ ಜರುಗಲಿದೆ' ಎಂದು ತಿಳಿಸಿದ್ದಾರೆ.



ಪಕ್ಷದ ಮೂಲಗಳ ಪ್ರಕಾರ ಪ್ರಧಾನಿ ನರೇಂದ್ರ ಮೋದಿ, ಸಚಿವ ಅಮಿತ್ ಶಾ ಆದಿಯಾಗಿ ಘಟಾನುಘಟಿಗಳು ಪ್ರಮಾಣವಚನದಲ್ಲಿ ಭಾಗಿ ಆಗಲಿದ್ದಾರೆ.

ಐವರ ಹೆಸರು: ಪ. ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರನ್ನು ಸತತ 2ನೇ ಬಾರಿ ಮಣಿಸಿರುವ ಸುವೇಂದು ಅಧಿಕಾರಿ, ಬಿಜೆಪಿಯ ಹಾಲಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ದಿಲೀಪ್ ಘೋಷ್, ಮಹಿಳಾ ನಾಯಕರಾದ ಅಗ್ನಿಮಿತ್ರಾ ಪೌಲ್ ಮತ್ತು 'ಮಹಾಭಾರತ' ಧಾರಾವಾಹಿಯ ದ್ರೌಪದಿ ಖ್ಯಾತಿಯ ರೂಪಾ ಗಂಗೂಲಿ ಹೆಸರು ಸಿಎಂ ಸ್ಥಾನಕ್ಕೆ ಕೇಳಿಬರುತ್ತಿದೆ. ಅಧಿಕಾರಿ ಅವರಿಗೆ ಆರೆಸ್ಸೆಸ್ ಹಿನ್ನೆಲೆ ಇಲ್ಲ. ಇದು ಅವರಿಗೆ ಮೈನಸ್ ಪಾಯಿಂಟ್ ಆಗಿದೆ. ಹೀಗಾಗಿ ಆರೆಸ್ಸೆಸ್ ಏನು ಸಲಹೆ ನೀಡಲಿದೆ ಎಂಬುದು ಕುತೂಹಲ ಕೆರಳಿಸಿದೆ. ದಿಲೀಪ್ ಘೋಷ್ ಆರೆಸ್ಸೆಸ್ ಹಿನ್ನೆಲೆಯವರಾಗಿದ್ದು, ಅವರಿಗೆ ಪ್ಲಸ್ ಪಾಯಿಂಟ್ ಆಗಿದೆ ಎಂದು ಮೂಲಗಳು ತಿಳಿಸಿವೆ.

ಮಹಿಳಾ ಮೀಸಲು ಹೋರಾಟದ ಹಿನ್ನೆಲೆಯಲ್ಲಿ ಮಹಿಳಾ ಸಿಎಂ ಆಯ್ಕೆ ಆದರೂ ಆಗಬಹುದು. ಆದರೆ ಈ ಸಾಧ್ಯತೆ ಕಡಿಮೆ ಎಂದು ಅವು ಹೇಳಿವೆ.

ರೈತರ ಬೇಡಿಕೆ ಈಡೇರಿಕೆಗೆ ನಾಳೆ ದೆಹಲಿ ಚಲೋ

ಧಾರವಾಡ: ಕಳಸಾ-ಬಂಡೂರಿ ನಾಲಾ ಜೋಡಣೆ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಉತ್ತರ ಕರ್ನಾಟಕದ ರೈತಪರ ಸಂಘಟನೆಗಳ ವತಿಯಿಂದ ಮೇ 8ರಂದು ದೆಹಲಿ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರೈತ ಸಂಘ ಹಾಗೂ ಹಸಿರು ಸಮಿತಿ ರಾಜ್ಯ ಉಪಾಧ್ಯಕ್ಷ ನಿಂಗಪ್ಪ ದಿವಟಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 500 ರೈತರು ತೆರಳಲಿದ್ದು, ಜಂತರ್‌ಮಂತರ್‌ನಲ್ಲಿ ಮೇ 12ರಂದು ಪ್ರತಿಭಟನೆ ನಡೆಸಲಾಗುವುದು ಎಂದರು. ಕಳಸಾ-ಬಂಡೂರಿ ಯೋಜನೆ ಕೂಡಲೇ ಜಾರಿಗೊಳಿಸುವುದು ಮತ್ತು ರೈತರಿಗೆ ಉಚಿತವಾಗಿ ರಸಗೊಬ್ಬರ ಹಾಗೂ ಬಿತ್ತನೆ ಬೀಜ ವಿತರಿಸಬೇಕೆಂದು ಆಗ್ರಹಿಸಲಾಗುವುದು ಎಂದು ತಿಳಿಸಿದರು.